
ಅಂಬಿಕಾತನಯದತ್ತರ

ಸೂರ್ಯಪಾನ



ಸಂಪಾದಕರು:

ಡಾ॥ ವಾಮನ ಬೇಂದ್ರೆ



ಅಂಬಿಕಾತನಯದತ್ತರ

ಸೂರ್ಯಪಾನ

“ಅರಳು ಮರಳು” - ಪಂಚಗುಚ್ಛದಲ್ಲಿಯ ಕವನ ಸಂಕಲನ



ಅಂಬಿಕಾತನಯದತ್ತರ ಕಾವ್ಯ
(ವರಕವಿ ಡಾ॥ ದ. ರಾ. ಬೇಂದ್ರೆ)

ಸೂರ್ಯಪಾನ

"ಅರಳು ಮರಳು" - ಪಂಚಗುಚ್ಛದಲ್ಲಿಯ ಕವನ ಸಂಕಲನ

ಸಂಪಾದಕರು :

ಡಾ॥ ವಾಮನ ಬೇಂದ್ರೆ
ಸಹ-ನಿರ್ದೇಶಕರು,
ಬೇಂದ್ರೆ ಸಂಶೋಧನ ಸಂಸ್ಥೆ

ಪ್ರಕಾಶಕರು :

ಡಾ॥ ಕೆ. ಎಸ್. ಶರ್ಮಾ,
ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ
ಶ್ರೀಮಾತಾ ಪ್ರಕಾಶನ,
ಅಂಬಿಕಾತನಯದತ್ತ ವೇದಿಕೆ
"ವಿಶ್ವಶ್ರಮ ಚೇತನ", ಗೋಕುಲ ರಸ್ತೆ ಹುಬ್ಬಳ್ಳಿ - ೫೮೦ ೦೩೦.
ಕರ್ನಾಟಕ ರಾಜ್ಯ

ಸೂರ್ಯಪಾನ (ಕವನ ಸಂಕಲನ)
★
ಕವಿ : 'ಅಂಬಿಕಾತನಯದತ್ತ' (ವರಕವಿ ಡಾ|| ದ. ರಾ. ಬೇಂದ್ರೆ)
★
ಸಂಪಾದಕರು : ಡಾ|| ವಾಮನ ಬೇಂದ್ರೆ,
ಸಹ ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ, ಹುಬ್ಬಳ್ಳಿ
★
ಪ್ರಕಾಶಕರು :
ಡಾ|| ಕೆ. ಎಸ್. ಶರ್ಮಾ, ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ, ಹುಬ್ಬಳ್ಳಿ
ಶ್ರೀಮಾತಾ ಪ್ರಕಾಶನ,
ಅಂಬಿಕಾತನಯದತ್ತ ವೇದಿಕೆ, 'ವಿಶ್ವಶ್ರಮ ಚೇತನ', ಗೋಕುಲ ರಸ್ತೆ ಹುಬ್ಬಳ್ಳಿ - 580 030.
★

★
ಬೆಲೆ : ರೂ. 80-00
★
ಮುದ್ರಣ : 18-5-2007

★
ಆಕಾರ : 1/8 ಡೆಮ್ಮಿ
★
ಕಲೆ : ಶ್ರೀ ಸುರೇಶ ಕುಲಕರ್ಣಿ, ಧಾರವಾಡ
★
ಹೊರಹೊದಿಕೆ ವಿನ್ಯಾಸ : ಶ್ರೀ ರವೀಂದ್ರ ಶಿರೋಳಕರ, ಧಾರವಾಡ
★
ಪುಟ ವಿನ್ಯಾಸ/ಡಿಟಿಪಿ : ಶ್ರೀ ಈರಣ್ಣ ನೂಲ್ವಿ, ಡಾ|| ಕೆ. ಎಸ್. ಶರ್ಮಾ ಐ.ಟಿ.ಸಿ., ಹುಬ್ಬಳ್ಳಿ
★
ಮುದ್ರಕರು :
ಶರ್ಮಾ ಮುದ್ರಕರು,
4, ಪತ್ರಕರ್ತರ ಕಾಲನಿ, ಹುಬ್ಬಳ್ಳಿ - 580 032.
★
ಕೃತಿಗಳಿಗಾಗಿ ಬರೆಯಿರಿ :
ಶ್ರೀಮಾತಾ ಪ್ರಕಾಶನ,
'ವಿಶ್ವಶ್ರಮ ಚೇತನ', ಗೋಕುಲ ರಸ್ತೆ ಹುಬ್ಬಳ್ಳಿ - 580 030. ದೂರವಾಣಿ : (0836) 2330466.

ರವೀಂದ್ರ ಪುಸ್ತಕಾಲಯ,
ಚಾಮರಾಜಪೇಟೆ, ಸಾಗರ - 577 401, ಶಿವಮೊಗ್ಗ ಜಿಲ್ಲೆ ದೂರವಾಣಿ : 08183-228616 (ಕ).

ಸಾವಿರದ ನಮನ

ಹೃದಯಾಂತರಾಳದಿಂದ ಅರಳಿದ ಕವನ ಕುಸುಮಗಳನ್ನು
ಕನ್ನಡ ಸರಸ್ವತಿಗೆ ಅರ್ಪಿಸುವ ಮೂಲಕ,
ಆರದ ಆರತಿಯನ್ನು ಸದಾಕಾಲ ಬೆಳಗುತ್ತ
ವಿಶ್ವಮಾನವ ವಿಕಾಸಕ್ಕೆ ನವಬೆಳಗನ್ನು ಬಿಂಬಿಸುತ್ತಾ ಸಾಗಿರುವ
ಬೆಳಕಿನ ಮಹಾಪಥಿಕ, ಋಷಿಕವಿ, ವಿಶ್ವಕವಿ, ಅಮರಕವಿ
ಔದುಂಬರದತ್ತ ಚೈತನ್ಯಕ್ಕೆ
(ದ. ರಾ. ಬೇಂದ್ರೆ-ಅಂಬಿಕಾತನಯದತ್ತ)

ನಮ್ಮ ಸಾವಿರದ ನಮನಗಳು.

ವಾಮನ (ಸಂಪಾದಕ)

ಕುವಲಯಶ್ಯಾಮ (ಪ್ರಕಾಶಕ)

ಪರಿವಿಡಿ

ಮೊದಲನೆಯ ಆವೃತ್ತಿ : ೩೧-೧-೧೯೫೬ - ದ. ರಾ. ಬೇಂದ್ರೆ ೬೦ನೆಯ ಜನ್ಮದಿನದಂದು

ಮುನ್ನುಡಿ

'ಸೂರ್ಯಪಾನ'ವು ಅರುವತ್ತರ ಅರುಳು-ಮರುಳಿನ ಆದಿಯಲ್ಲಿ ಪ್ರಟವಾಗುತ್ತಿದೆ. ಅರುವತ್ತು ಪದ್ಯಗಳನ್ನು ಒಳಗೊಂಡಿದೆ. ನನ್ನ ತರುಣ ಮಿತ್ರರಾದ ಶ್ರೀ ಭಾಲಚಂದ್ರ ಘಾಣೇಕರ ಇವರ ನಿರ್ಮಲ ಉತ್ಸಾಹದಿಂದ ಈ ಕೃತಿ ಇಷ್ಟು ತವಕದಲ್ಲಿಯೂ ಅಂದಪಡೆದೇ ಮುದ್ರಿತವಾಗಿದೆ. ಚಿ.ವಾಮನ ಬೇಂದ್ರೆ, ದಿವಾಣಜಿ, ಶಕುಂತಲಾ ಕಿರೂರ ಇವರ ನೆರವು ಅನೇಕ ವಿಧವಾಗಿ ಆಗಿದೆ. ಗೆಳೆಯರಾದ ಪ್ರಹ್ಲಾದ ನರೇಗಲ್ಲ, ಲಕ್ಷ್ಮಣರಾವ ಬೇಂದ್ರೆ, ಶ್ರೀ ಗೋಕಾಕ ಇವರ ಸಲಹೆಗಳು ಇದಕ್ಕೆ ಈ ರೂಪ ಕೊಟ್ಟವೆ. ಪ್ರಿಯ ಮಲ್ಲಾರಿ ಮೇವುಂಡಿ ಇವರ ಎಚ್ಚರಿಕೆಯಿಂದ ಶುದ್ಧಪಾಠ ಉಳಿದುಕೊಂಡಿದೆ.

ಜೀವನ, ಜಯಂತಿ, ಜಯಕರ್ನಾಟಕ, ಪ್ರಬುದ್ಧಕರ್ನಾಟಕ ಈ ಪ್ರಮುಖ ಸಾಹಿತ್ಯ ಪತ್ರಿಕೆಗಳಲ್ಲದೆ, ಕೆಲವು ವಿಶೇಷ ಸಂಚಿಕೆಗಳ ಸಂಪಾದಕರು ಈ ಸಂಗ್ರಹದೊಳಗಿನ ಕೆಲ ಕವನಗಳನ್ನು ಈ ಮೊದಲು ಪ್ರಕಾಶಪಡಿಸಿ ಮಾಡಿದ ಉಪಕಾರಕ್ಕಾಗಿ ಅವರ ಸ್ಮರಣೆ ಮಾಡುತ್ತಿದ್ದೇನೆ. 'ಆಕಾಶವಾಣಿ'ಯ ಕೃಪೆಯಿಂದಲೂ ಗಾಳಿಯಲ್ಲಿ ಬಿತ್ತರಗೊಂಡ ಕೆಲವು ಕವನಗಳು ಇಲ್ಲಿವೆ. ಅವರ ಆಭಾರವನ್ನೂ ಮನ್ನಿಸುತ್ತೇನೆ. ಹೋದ ಹನ್ನೆರಡು ವರ್ಷಗಳಲ್ಲಿ ವಿಶೇಷವಾಗಿ ಬರೆದ ಈ ಕವನಗಳಲ್ಲಿ ಪ್ರತಿಭೆಯ ಯಾವ ಮುಖವನ್ನು, ದರ್ಶನವಿಲಾಸವನ್ನು, ರಸಿಕರು, ಸಹೃದಯರು, ಕದಾಚಿತ್ ವಿಮರ್ಶಕರು ಕಾಣುವರೋ ಅದನ್ನು ನಾನು ಮುಂಚಿತವಾಗಿಯೇ ಸಾರುವದಾದರೂ ಹೇಗೆ? ಇಳಿವಯಸ್ಸಿನ ಅಶಕ್ತತೆಯ ಹೆಜ್ಜೆಗುರುತು ಅದರಲ್ಲಿಲ್ಲ ಎಂದು ನನಗೆ ತೋರುತ್ತದೆ! ''ಭಾಗ್ಯಾಯತ್ತಂ ಅಂತಃಪರಂ ನ ಖಲು ತತ್ ವಾಚ್ಯಂ ವಧೂ ಬಂಧುಭಿಃ.''

ಧಾರವಾಡದಲ್ಲಿಯೇ ಪ್ರಸಿದ್ಧವಾಗಬೇಕಾಗಿದ್ದ 'ಗಂಗಾವತರಣ'ವು ಸೊಲ್ಲಾಪುರಕ್ಕೆ ಬಂದ ಮೇಲೆ ಪ್ರಕಾಶಿತವಾಯಿತು - ಇಲ್ಲಿಯೆ ಬರೆದ ಕೆಲ ಕವನಗಳಿಂದೊಡಗೂಡಿ. ಹನ್ನೆರಡು ವರ್ಷಗಳಲ್ಲಿ ಗೆಳೆಯರ ಸ್ನೇಹದಿಂದ, ಧಾರವಾಡದ ತಾಯಿಯ ಒಲವಿನಿಂದ, ಬಾನುಲಿಯ ಸೌಜನ್ಯದಿಂದ, ಧಾರವಾಡ ಸೀಮೆಯ ಸಂಬಂಧವು ಅಖಂಡವಾಗಿ ಉಳಿದು, ಬೆಳೆದು ಬಂದಿದೆ.

ಅಂತೆಯೇ 'ಸೂರ್ಯಪಾನ'ವು ನಾನು ಇಲ್ಲಿರುವಾಗಲೇ ಪ್ರಕಾಶಿತವಾಗುತ್ತಿದ್ದರೂ, ಧಾರವಾಡದ ಕರೆಯು ಅತ್ತ ಕರೆಯುತ್ತಿದೆ-ಎಂಬ ಮುಂಗುರುತು ಈಗಾಗಲೆ ಮೂಡಿದೆ. 'ನಾವು ಬರತೇವಿನ್ನ' ಎಂದು ಹೇಳಿ ಹೋದಂತೆ ಬರಬೇಕಾಗಿದೆ. ಮನೆಯ ಹಂಬಲ 'ಬಾರೊ ಸಾಧನಕೇರಿಗೆ' ಎಂದು ಓಗರೆಯುತ್ತದೆ. ಋಣಾನುಬಂಧದ ಸೂತ್ರವು ಆಡಿಸಿದಂತೆ ಆಡುವದಲ್ಲದೆ ಜೀವನದಲ್ಲಿ ಹೆಚ್ಚಿನ ಹಿತಕರವಾದ ಸೂಚನೆ ಯಾವುದು?

ಕನ್ನಡ ತಾಯಿಯ ಪ್ರಾಣಪ್ರತಿಷ್ಠೆ ಬೇಗನೆ ಆಗಲಿದೆ. ಪೀಠ ಸಿದ್ಧವಾಗಿದೆ, ಗುಡಿಯು ರೂಪುಗಂಡಿದೆ, ಕಳಸ ಕಂಗೊಳಿಸುತ್ತಿದೆ. ಪ್ರಾಕಾರದ ಹರವಿನ ಆಕಾರವು ಮಸಕಾಗಿ ಮೂಡಿದೆ. ಇನ್ನು ಮುಂದಾಗಲಿರುವ ಭಜನೆ ಪೂಜನೆಗಳಲ್ಲಿ, ಪರ್ವ-ಸಮಾರಂಭಗಳಲ್ಲಿ ಕನ್ನಡ ಸುಹೃತ್‌ಭಾವವು ಸುಖಿ-ಮುಖಿವಾಗಿ ಅರಳುವದೆಂದು ಈ 'ಸೂರ್ಯಪಾನ'ವನ್ನು ರಸಿಕ ಭೃಂಗಗಳ ಪದಾರ್ಪಣಕ್ಕೆ ಒಡ್ಡುತ್ತಿದ್ದೇನೆ. ಆದರೂ 'ಸೂರ್ಯಪಾನ'ದ ದೃಷ್ಟಿ ಸೂರ್ಯನ ಕಡೆಗೆಯೇ ಎಂಬುದನ್ನು ಮರೆಮಾಚುವಂತಿಲ್ಲ.

ಯಾವ ಸಹೃದಯತೆಯ ನೆರವಿನಿಂದ 'ಅಂಬಿಕಾತನಯದತ್ತ'ನ ವಾಣಿ ವಿಕಾಸಗೊಂಡಿತೋ. ಆ ಸಹೃದಯತೆಯ ಸೇವೆಗೇ ಈ ಕವನಗಳು ನೆರವಾಗಲಿ ಎಂದು ಅರುವತ್ತರ ಅಂಗಳದಲ್ಲಿ ನಿಂತು ಸೂರ್ಯದೇವನಿಗೆ ಪ್ರಾರ್ಥಿಸುತ್ತೇನೆ.

೩೧-೧-೧೯೫೬ - ದತ್ತ ರಾಮ ಬೇಂದ್ರೆ

ಸೊಲ್ಲಾಪುರ

ಸಂಪಾದಕರ ಭೂಮಿಕೆ

'ಸೂರ್ಯಪಾನ' ಹೂಬಿಡುವ ಕಾಲ ಜುಲೈ ದಿಂದ ಸಪ್ಟೆಂಬರ ವರೆಗೆ. ಭಾರತೀಯ ಪಂಚಾಂಗದ ಪ್ರಕಾರ ಈ ಕಾಲಾವಧಿ ಶ್ರಾವಣ. ಬೇಂದ್ರೆ ಶ್ರಾವಣದ ಕವಿಯಾಗಿದ್ದರಿಂದ ಅವರಿಗೆ ಸೂರ್ಯಪಾನದ ಗುಣಲಕ್ಷಣಗಳು ಸೆಳೆಯುತ್ತವೆ. ಅವು ಹೀಗೆ-

೧. ಸೂರ್ಯಪಾನದ ದೇಟಿನ ಎತ್ತರ ೪ ರಿಂದ ೮ ಫೂಟು ಇರುತ್ತದೆ. ಇದು ಇದರ ಔನ್ನತ್ಯ, ವಿಸ್ತಾರಪಕಳೆಗಳ ಹೂ ಹಾಗೂ ಸಂಕುಚಿತ ಪಕಳೆಗಳ ಹೂ ಎಂದು ಎರಡು ಪ್ರಕಾರ. ಆದರೆ, ಎತ್ತರವಾಗಿ ಬೆಳೆದ ಹೂವಿನ ವಿಸ್ತಾರ, ಬೆಳವಣಿಗೆ ಮನಮೋಹಕ!

೨. ಸೂರ್ಯಪಾನದ ಎಣ್ಣೆಕೊಡುವ ಗುಣವು ಹೃದಯ ಆಘಾತ ಹಾಗೂ ಅಸ್ತಮಾ ಎಂಬ ಮಹಾರೋಗಗಳಿಂದ ಮನುಷ್ಯನನ್ನು ಕಾಪಾಡುತ್ತದೆ. 'ಕೊಲ್ಯಾಸ್ಟಲ್' ಅಂಶ ಹಾಗೂ 'ಪುಲ್‌ಮಾ' ವೈಶಿಷ್ಟ್ಯ ರೋಗಬಂಧ ಶಾಸ್ತ್ರಜ್ಞರು ಕುಂಡು ಹಿಡಿದಿದ್ದಾರೆ. ಇದು ಇದರ ಔದ್ಧತ್ಯ=ಹೆಮ್ಮೆ.

೩. ಸೂರ್ಯಪಾನ ಹೂವಿಗೆ ಇರುವ ಬೆಳಕಿನ ನೀರಡಿಕೆ, ಮನುಷ್ಯ ಬೆಳೆಸಿಕೊಳ್ಳಬೇಕಾದ ಆದರ್ಶವಾದುದರಿಂದ ಬೇಂದ್ರೆಯವರಿಗೆ ಈ ಹೂ ಕಾವ್ಯ ಪ್ರತಿಮೆ ಮತ್ತು ಆದರ್ಶದ ಪ್ರತೀಕವಾಗುತ್ತದೆ. ನಿಸರ್ಗ ಪ್ರತಿಮೆಗಳು ಕವಿಜೀವಕ್ಕೆ ಆದರ್ಶವಾಗುತ್ತವೆ. ಆದುದರಿಂದ ಈ ಹೂ ಬೇಂದ್ರೆಯವರ ಜೀವನದಲ್ಲಿ ಹೃದಯಾಕೂತಿ ಬೆಳೆಸುತ್ತದೆ. ಹೃದಯ ಮತ್ತು ಆಕೂತಿ ಬೇಂದ್ರೆಕಾವ್ಯದಲ್ಲಿಯ ವಿಶಿಷ್ಟ ಪದಗಳು. ಹೃದಯ ಎಂಬುದು ರಕ್ತಾಭಿಸರಣ ಇಂದ್ರಿಯವಾಗಿದ್ದೂ ಮನುಷ್ಯನ ಆದರ್ಶಮಯ ಜೀವನದ ಇಚ್ಛೆ+ಭಗವದಿಚ್ಛೆ ಪೂರ್ಣಮಾಡುವ ಕರ್ಮೇಂದ್ರಿಯ!

''ವಾಙ್ಮನ ಚಕ್ಷುಃ ಶ್ರೋತಚರ ಜಿಹ್ವಾಘ್ರಾಣ ರೇತೋ
ಬುಧ್ಯಾಕೂತಿ ಸಂಕಲ್ಪಾ ಮೇ ಶುಧ್ಯಂತಾಮ್''

ಎಂಬ ಪ್ರಾರ್ಥನೆ ಹೃದಯದ್ದು. ವಾಕ್+ಮನ+ಕಣ್ಣು+ಕಿವಿ+ನಾಲಿಗೆ+ಮೂಗು+ವೀರ್ಯಬೀಜ+ಸಂಕಲ್ಪ ಶಕ್ತಿಯಲ್ಲಿ ಶುದ್ಧಿಯನ್ನು ಕೊಡುವ ಗುಣ ಆಕೂತಿಯದು! ಈ ಗುಣ ತಕ್ಷಣ ಹೃದಯದ್ದಾದಾಗ ಭಾವ ಶುದ್ಧಿ ಬುದ್ಧಿ ಶುದ್ಧಿ, ಮನ ಶುದ್ಧಿ, ಅಹಂಕಾರ ಶುದ್ಧಿ. ಈ ಸಮಗ್ರ ಪರಿವರ್ತನೆ ನವಮಾನವೀಯತೆಯ ಆವಿರ್ಭಾವ ತಾಳಿದ ಹೃದಯದ್ದು. ಇಂಥ ಹೃದಯ ಪ್ರಾಪ್ತಿಗಾಗಿ ಬೇಂದ್ರೆ 'ಕಾವ್ಯೋದ್ಯೋಗ' ತಪಸ್ಸು ಮಾಡಿದ್ದು ಸಕಲರಿಗಾಗಿ. ಈ ದಿವ್ಯ ದೀಕ್ಷೆಯನ್ನು ಪಡೆದ ಮಾನವನು (ಕವಿಯ) ತನ್ನ ದೇಹ, ದೇಶ, ನಡೆ-ನುಡಿ, ಸಂಸ್ಕೃತಿಯ ರಕ್ಷಣೆ ಕುರಿತು ಆಳವಾಗಿ ಯೋಚಿಸುವುದುಂಟು.

ಬೇಂದ್ರೆಯವರ 'ಸೂರ್ಯಪಾನ' ಕವನ ಸಂಗ್ರಹದಲ್ಲಿ ಒಟ್ಟು ಅರವತ್ತು ಕವನಗಳಿವೆ. ಇದು ಅವರಿಗೆ ಅರವತ್ತು ವರ್ಷ ಮುಗಿದದ್ದರ ಪ್ರತೀಕ ಎಂಬುದು ಸಾಮಾನ್ಯ ಲಕ್ಷಣ.

ಅವರಿಗೆ ಬಾಲ್ಯದಿಂದಲೂ ಸೂರ್ಯಪ್ರಕಾಶ=ಬೆಳಕು=ಜ್ಞಾನ=ದೇವ=ಅಭೀಪ್ಸೆ (Aspiration ಎಂಬುದು ಶ್ರೀ ಅರವಿಂದರ ವಿಶಿಷ್ಟ ಶಬ್ದ) ಯತ್ತ ಎಳೆತ=ಸೆಳೆತ=ಆದರ್ಶ ಎಂಬುದು ವಿಶೇಷ ಲಕ್ಷಣ. ಈ ಅರವತ್ತು ಕವನಗಳಲ್ಲಿ ಆರು ವಿಭಾಗಗಳುಂಟು. ಅವು ಹೀಗಿವೆ-

ಅ) ನಾನು-ನೀನು; ಇರುವೆ-ಅರಿವೆ; ಇದೇ ದೇವ; ಆಡಿಫಲವೇನು; ಮೋಡ; ಮಿಂಚು; ಸಿಡಿ; ಓ ತಾಯಿ; ನಲ್‌ತಾಯಿ; ಅಸ್ಮಿತಾ; ಭಕ್ತನಲ್ಲ ರಾಗಿSS ವಿರಾಗಿSS; ಯಮದೇವನ ಒಕ್ಕಲು; ಧ್ರುವ ಮಾರ್ಗ; ವಿಶ್ವರೂಪದರ್ಶನ.

ಈ ಹದಿನಾಲ್ಕು ಕವನಗಳು ಮನುಷ್ಯ ದೇಹ ಕುರಿತು ಚಿಂತಿಸುತ್ತವೆ. ಇದು ಬೆಂದ್ರೆ ದೇಹ ಚಿಂತನ.

ಬ) ಕನ್ನಡದಪ್ಪನ ಕೋಲು; ಪಾರ್ವತಿ ನೀನೇ ಸಲಹು; ಯುದ್ಧ ಬಂತು ಮನೆಯ ವರೆಗೆ; ಸ್ವಾತಂತ್ರ್ಯದೇವಿಗೆ ಹಿಗ್ಗುತರಲಿ ಬಿಡುಗಡೆ; ಕೇಳಿರೊಂದು ಸೋಜಿಗ; ಶ್ರದ್ಧಾಂಜಲಿ; ಅಮರ ಮರಣ; ಜಯಜಯಾ ಗಾಂಧಿಮೋಹನಾ; ದರಿದ್ರ ನಾರಾಯಣಾ.

ಈ ಹತ್ತು ಕವನ ಬೇಂದ್ರೆ ಹುಟ್ಟಿದ ಧಾರವಾಡ, ಕರ್ನಾಟಕ, ಭಾರತ, ಸ್ವಾತಂತ್ರ್ಯ ಕಾರಣಕರ್ತ ಮಹಾತ್ಮಾ ಗಾಂಧಿ ಕುರಿತು ವಿವರಿಸುತ್ತವೆ. ಇದು ಬೇಂದ್ರೆ ದೇಶ ಚಿಂತನ.

ಕ) ಸ್ಥಿರೆ-ತಿರೆ; ಸಮೃದ್ಧ; ಸೌಭಾಗ್ಯ; ಸಕಲ; ವಸುಧಾ; ಕಿಮಪಿತತ್; ಅಹನೆ; ಗಾಳಿಗಳೇ; ಚಳಿ ಇರಲಿ ಮಳೆ ಬರಲಿ; ಪ್ರತಿವರ್ಷದಂತೆ ಬಂತು ಶ್ರಾವಣಾ.

ಈ ಹತ್ತು ಕವನಗಳು ಪಂಚಮಹಾಭೂತಗಳನ್ನು ವರ್ಣಿಸುತ್ತವೆ. ಇದು ಬೇಂದ್ರೆ ಕಾಲ ಚಿಂತನೆ.

ಡ) ಕರಡಿ ಕುಣಿತ; ಬೀದಿನಾಯಿ ರಾಧೆ; ನೃಸಿಂಹ ಸ್ತೋತ್ರ.

ಇವು ಮೂರು ಬೇಂದ್ರೆ ಕಾವ್ಯ ಸೃಷ್ಟಿಯ ವಿಶಿಷ್ಟ ಹಿನ್ನೆಲೆಗಳು ಇದು ಬೇಂದ್ರೆ ಕಾವ್ಯ ಸಂದರ್ಭ ಚಿಂತನ.

ಇ) ಅಂತರ್ಮೋಲ್; ಮಾತು ಮೌನ; ಗೋವತ್ಸಲೀಲೆ; ಜೀವನನಾಟ್ಯ; ಜೀವನಕಲ್ಯಾಣ; ನೃತ್ಯಯಜ್ಞ; ಚೆನ್ನಕೇಶವನ ಸಾಕ್ಷಿಯಲ್ಲಿ.

ಈ ಒಂಬತ್ತು ಕವನಗಳು ಬೇಂದ್ರೆ ಕಾವ್ಯದ ಪರಿಕರಗಳಾದ ಸಪ್ತಕಲೆಗಳ ಚಿಂತನ.

ಈ) ಓ ಚಾರ್ವಾಕು; ಊರು ಮತ್ತು ಖಾಲ್ದಿಯಾ; ಮಧುವಾತಾ ಋತಾಯತೆ; ಅ ಆ; ಪ್ರೇಮಬೀಜ; ಚೆನ್ನಲಿಂಗವೇ; ರಾಮ ರಾಮಾ; ಹರಕೆ; ಸಂಖ್ಯಾಂಕಿತ; ನಾಳೆ ಎಂಬುದು ಇಂದಿನ ಮನಸು; ಯೌವನದ ಕನಸು; ಕಣಸು; ನವಯುಗಾರಂಭ.

ಈ ಹದಿಮೂರು ಕವನಗಳು ಬೇಂದ್ರೆಯವರು ಕಾವ್ಯದ ಭವಿಷ್ಯವನ್ನು ಕುರಿತು ಕಂಡ ಉದ್ಭವ ದರ್ಶನಗಳಾಗಿವೆ.

ಈ ಆರು ಮುಖಗಳ 'ಸೂರ್ಯಪಾನ' ಅರ್ಥೈಸಿಕೊಂಡಾಗ, ಬೇಂದ್ರೆ ಕನ್ನಡ ಭಾಷೆಗೆ ಕೊಡುಗೆಯಾಗಿ ಅರ್ಪಿಸಿದ ಪ್ರಪ್ರಥಮ ಮಹಾಕಾವ್ಯ-ಔದುಂಬರಗಾಥೆಯ ಅನನ್ಯತೆಯ ಚಿತ್ರ ಸ್ಪಷ್ಟವಾಗುತ್ತದೆ. ಪ್ರತಿಯೊಂದು ವಿಭಾಗದ, ಮುಖಗಳ ವೈಶಿಷ್ಟ್ಯ ಕುರಿತು ವಿಶ್ಲೇಷಣೆ ಮಾಡುವುದು ಅವಶ್ಯ.

'ಗಂಗಾವತರಣ'ದ ಬೇಂದ್ರೆ, 'ನಾನು' ಮತ್ತು 'ಅಂಬಿಕಾತನಯದತ್ತ' ಕವನದಲ್ಲಿ ಮಾಡಿದ ಚಿಂತನದ ಇನ್ನೊಂದು ಬಗೆ 'ಸೂರ್ಯಪಾನ'ದಲ್ಲಿಯ 'ನಾನು-ನೀನು' ಕವನ ಕವಿ ಮತ್ತು ಕಾವ್ಯ ಸಂಬಂಧ ಕುರಿತು ಹಲವಾರು ಚಿಂತನಗಳು ಇಲ್ಲಿವೆ. ಬೇಂದ್ರೆ ಕಾವ್ಯ-ತಾಯಿ ಮತ್ತು ಮಗು ಭಾವದ ಶ್ರೀಮಂತಿಕೆ!

ಅ) ದೇಹಚಿಂತನ :

ಪ್ರತಿಯೊಬ್ಬ ಮನುಷ್ಯನಿಗೆ ಜನ್ಮ ಕೊಟ್ಟ ತಾಯಿಯ ಬಗ್ಗೆ ಗೌರವ; ತನ್ನ ಇರವು, ಅರಿವು, ಹರಿವುಗಳ ಸ್ಪಷ್ಟ ಕಲ್ಪನೆ ಇರಬೇಕು. ಪ್ರಾಣಿಗಳಲ್ಲಿ ಬೆನ್ನುಹುರಿ=ಮೇರುದಂಡ ಸಹಿತ ಹಾಗೂ ಮೇರು ದಂಡ ರಹಿತ ಎಂದು ಎರಡು ಪ್ರಕಾರ. ಅದರಲ್ಲಿ ಮೇರುದಂಡಸಹಿತ ಮನುಷ್ಯ ಅತ್ಯಂತ ಶ್ರೇಷ್ಠ. ಆದುದರಿಂದ ಬೇಂದ್ರೆ ಅಪೇಕ್ಷಿಸುತ್ತಾರೆ-

೧. ಮೇರುದಂಡವು ಚಿಗಿತು ಹೂತ ಹಾಗೆ - ಕವನ ೧

೨. ಮೇರುದಂಡದಾ ಇಕ್ಷುರಸವು=ಕಬ್ಬಿನ ಹಾಲು ಹಿಂಡುತ್ತಲಿಹುದೊ ಜಾಣಾ-ಕವನ ೪೯

ಎಂಬುದರ ಅನುಭಾವಬೋಧ ಪಡೆಯಬೇಕು. ಆಗ ''ನರನ ಹೃದಯ ನಾರಾಯಣಾಗ್ನಿ'' ಒಂದು, ವರ ಕೊಡುತ್ತದೆ.

'ಬಾ ತಾಯಿ, ಬಾ ಗುರುವೆ, ಬಾ ಗೆಳೆಯಾ, ಬಾ ಒಡೆಯಾ ಬಾ ನಲ್ಲೆ ನಾನೆ ಬರಲೆ?

ನಾದತಂತಿಯಲೊರಗಿದಂತೆ ಸಹ-ಭವನಾಗಿ

ಬಾಯ್ದೆರೆದು ನಗೆಯೊಲಿರಲೆ?

-=ಕವನ ೩೩

ಮೊದಲಾದ ಅನೇಕ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ. ಬೇಂದ್ರೆ ಕಾವ್ಯದಲ್ಲಿ ತಾಯಿ, ಗುರು, ಗೆಳೆಯ, ನಲ್ಲೆ, ಬಹುಮುಖ ಕಾರ್ಯ ಮಾಡಿದ್ದಾರೆ.

''ತಾಯಿ ಕೂಸಿನ ಮುದ್ದು ಮೌನದಲಿ ಮಿಡಿದಾಗ
ಶ್ರುತಿಯನ್ನು ಹಿಡಿದಿರುವೆಯಾ?''

- ಅ-ಸ್ಥಿ-ತಾ

ಎಂಬುದು ಬೇಂದ್ರೆಯವರು ಶ್ರಾವಣದ, ಶ್ರುತಿಯ ಕವಿಯಾಗಲು ಕಾರಣ.

ಮೋಡ (ಕವನ : ೫೫), ಮಿಂಚು (ಕವನ : ೫೬) ಕಿಡಿ (ಕವನ : ೫೭) ಇವು ಧ್ಯಾನದ ಅನುಭವಗಳು. ರಾಮಕೃಷ್ಣ ಪರಮಹಂಸರಿಗೆ ಮೋಡ ನೋಡನೋಡುತ್ತ ಸಮಾಧಿ ಹತ್ತಿತ್ತು ಎಂಬುದು ಮರೆಯಬಾರದ ವಿಷಯ. ಪ್ರತಿಯೊಬ್ಬನು (೧) ನಕ್ಷತ್ರ ದರ್ಶನ, (೨) ಮಿಂಚು ದರ್ಶನ ಹಾಗೂ (೩) ಮೋಡ ದರ್ಶನಗಳಿಂದ ತಮ್ಮ ಧ್ಯಾನಶಕ್ತಿಯನ್ನು ಬೆಳೆಸಿಕೊಳ್ಳುವುದು ಅವಶ್ಯ.

''ನರನ ನರಮನಸ್ಸು ಸಾಯದೆ, ನಿಜವನ್ನು ಕಾಣುವ ಸನ್ನೇತ್ರಗಳು ಬಾರವು''
ಸತ್ತಿಲ್ಲವು ಇನ್ನೂ ಈ ನರನಾ ನರಮನಸು''

- ವಿಶ್ವರೂಪದರ್ಶನ

ಎಂಬ ಎಚ್ಚರಿಕೆಯನ್ನು ಬೇಂದ್ರೆ ಕೊಟ್ಟಿದ್ದಾರೆ.

ಬ) ದೇಶ ಚಿಂತನ :

ಬ್ರಹ್ಮ-ಸರಸ್ವತಿ; ವಿಷ್ಣು-ಲಕ್ಷ್ಮಿ ಹಾಗೂ ಶಿವ-ಪಾರ್ವತಿ ಇವರು ಅನುಕ್ರಮವಾಗಿ ಸೃಷ್ಟಿ ಸ್ಥಿತಿ ಮತ್ತು ಲಯಕ್ಕೆ ಕಾರಣದೇವತೆಗಳು. ಕರ್ನಾಟಕದ ಉನ್ನತ ಸ್ಥಿತಿಗೆ ಬೇಂದ್ರೆಯವರು ವಿಷ್ಣು-ಲಕ್ಷ್ಮಿಯಲ್ಲಿ ಪ್ರಾರ್ಥನೆ ಸಲ್ಲಿಸಬೇಕಾಗಿತ್ತು. ಆದರೆ ಕರ್ನಾಟಕ-ಕನ್ನಡ-

''ಬಡಗಣ, ತೆಂಕಣ, ಪಡುವಣ, ಮೂಡಣ
ನಡುವಣ ಕನ್ನಡ ಪಂಚಶಿಖ
ಪರಮೇಶ್ವರನೊಲು ಪ್ರಪಂಚ ಪ್ರಕಟಿಸಿ
ಮೈದೋರಿತು ಇಗೊ ಪಂಚಮುಖ

- ಪಾರ್ವತಿ ನೀನೇ ಸಲುಹು

''ಈಶ್ವರನು ನಿರ್ಮಿಸಿದ ಈ ಸೃಷ್ಟಿಯನು, ಪಾರ್ವತಿ! ನೀನೇ ಸಲಹು'' ಎಂದು ಬೇಂದ್ರೆ ಪ್ರಾರ್ಥಿಸಿದ್ದು ಔಚಿತ್ಯಪೂರ್ಣವಾಗಿದೆ. ಜೈನರ ಕಾವ್ಯ, ಶರಣರ ವಚನ, ದಾಸರ ಹಾಡು-ವಿಶ್ವಕಾವ್ಯದ ಹೃದಯವನ್ನು ಹದಮಾಡಿದೆ ಎಂದು ಬೇಂದ್ರೆ ಅನುಭವಿಸಿ ಸಾರಿದರು. 'ಕಾವೇರಿಯು ತಂಪಾಯಿತು, ಕನ್ನಡ ಗಾಳಿಯು ಉಸಿರಿತು ಈ ಬೋಧೆ'' ಎಂದಿದ್ದರೂ, ಸದ್ಯಕ್ಕೆ 'ಕಾವೇರಿ' ನದಿಯ ನ್ಯಾಯ ಬೆಂಕಿಯಾಗಿದೆ. ಇದಕ್ಕೆ ನಾವೇ ಕಾರಣ. ಅಶಿವ, ಅಶಕ್ತ, ಅನೀಶ, ವಿಭಕ್ತ ದೃಷ್ಟಿಯುಕ್ತವಲ್ಲ ಎಂದು ಸೂಚಿಸಿ, ಕರ್ನಾಟಕದಲ್ಲಿ ಸಾಮರಸ್ಯ ಸಾಧ್ಯವಾಗಿ-

''ಶಾಂತಿಯಿಂದ ಪರಿಪುಷ್ಟಿಗೊಂಡು ಸಂ
ತುಷ್ಟವಾಗಲಿ ನಾಡಜನಾ
ವಿಜಯ ಹೊಂದಿ, ಕಲ್ಯಾಣ ಪಡೆದು ಸ್ವ
ಸ್ವ-ಧರ್ಮ ಕಾಯಲಿ ಚಿರಂತನ''

- ಪಾರ್ವತಿ ನೀನೇ ಸಲುಹು

ಎಂದು ಹಾರೈಸಿದ್ದಾರೆ ಬೇಂದ್ರೆ, (ವಿಜಯ=ವಿಜಯನಗರ; ಕಲ್ಯಾಣ=ಕಲ್ಯಾಣ ಸ್ಮರಣೆ)

ಭಾರತಕ್ಕೆ ಯುದ್ಧ ಹೊಸದಲ್ಲ. ಹೀಗಿದ್ದೂ ಅಹಿಂಸಾ ಮಾರ್ಗದಿಂದ, ಮಹಾತ್ಮಾ ಗಾಂಧಿಯವರ ಮುಂದಾಳುತನದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕದ್ದು ಹೊಸ ಇತಿಹಾಸ. ಸ್ವಾತಂತ್ರ್ಯದ ಹೋರಾಟದ ಕಾಲಕ್ಕೆ ''ದೀಪ್ತವಾದ ಭಾವನೆಗಳು'' ಸ್ವಾತಂತ್ರ್ಯ ಪಡೆದ ಉತ್ತರ ಕಾಲದಲ್ಲಿ ಉಳಿಯಲಿಲ್ಲ. ಇದು ದುರಂತ. ಗಾಂಧಿ, ಯೇಸು, ಬುದ್ಧ ಬಸವ ಎಲ್ಲರೂ ಆಗಿಹೋದರು. ಭಾರತದ ಬಡತನ ಪರಿಹಾರವಾಗಲಿಲ್ಲ. ಅದು ಇಂದಿಗೂ Virus, Parasite ದಂತೆ ಕಾಡುತ್ತಲಿದೆ. ಭಗವಂತನಿಗೆ ಹೃದಯ ಇದ್ದಿದ್ದರೆ, ಅವನಾದರೂ ಬಡತನದ ನಿರ್ಮೂಲನೆ ಮಾಡಬಹುದಾಗಿತ್ತು. ಅದೂ ಆಗಿಲ್ಲ ಎಂದು ಬೇಂದ್ರೆ ನೊಂದು ಸಾರಿದ್ದಾರೆ.

''ದುಡಿದವಗೆಲ್ಲಾ ಕೆಲಸವ ನೀಡು
ಹಸಿದವರಿಗೆ ಅನ್ನ
ಹೆಣ್ಣಿಗೆ, ಕೂಸಿಗೆ ಆಸರ ನೀಡು
ಈ ವಿದ್ಯೆಯೆ ಚೆನ್ನ''

- ನೃಸಿಂಹ ಸ್ತೋತ್ರ

ಎಂಬ ಬೇಂದ್ರೆ ಹಾರೈಕೆ ಫಲಿಸಬೇಕಾಗಿದೆ.

೪) ಕಾಲ ಚಿಂತನ :

ಚಳಿ-ಇರಲಿ; ಮಳೆ ಬೀಳುತ್ತಿರಲಿ; ಬಿಸಿಲು ಕುದಿಸುತ್ತಿರಲಿ ಮನುಷ್ಯ ನೊಂದುಕೊಳ್ಳಬಾರದು, ಅಸುಖ ಭಾವನೆಗೆ ಹೋಗಬಾರದು. ಮೂರು ಋತುಗಳನ್ನು

''ನಗುತ ಒಲಿವೆವು
ನಗುತ ಒಲಿಸುವೆವುऽऽऽ
....
ಹಾಡಿ ನಲಿವೆವು
ಹಾಡಿ ನಲಿಸುವೆವುऽऽऽ''

ಎಂದು ಬಿಚ್ಚುಮನಸ್ಸಿನಿಂದ ಹೇಳಿಕೊಂಡಿದ್ದಾರೆ. 'ಅಂಬಿಕಾತನಯದತ್ತ' ಮುದ್ರಿಕೆಯುಳ್ಳ ಕವನಗಳೆಂದರೆ-ಬೇಂದ್ರೆ ಕಾವ್ಯಶಕ್ತಿಯ ಶಿಖರಗಳೇ ಆಗಿವೆ.

''ಗಂಗಾಲಹರಿ' ಮೆಚ್ಚಿ, ಏನೋ ಧಾಟಿಯ ಹಚ್ಚಿ
ತಾಯಿಗೆ ಸಂತೋಷ ತರುತಿದ್ದೆನು''

- ಮತ್ತೆ ಶ್ರಾವಣ ಬಂತು

ಎಂದು ಬೇಂದ್ರೆ, ತಮ್ಮ ಬಾಲ್ಯ ನೆನೆಸಿಕೊಂಡಿದ್ದಾರೆ. ಅವರ ಅಚ್ಚುಮೆಚ್ಚಿನ ಕವಿ-ಜಗನ್ನಾಥ ಪಂಡಿತನ-ಗಂಗಾಲಹರಿಯ ಮೊದಲಸಾಲು. ''ಸಮೃದ್ಧಂ, ಸೌಭಾಗ್ಯಂ, ಸಕಲ, ವಸುಧಾಯಾಃ ಕಿಮಪಿತತ್'' ಒಂದು ಸಾಲು, ಐದು ಸ್ವತಂತ್ರ ಕವನಗಳಾಗಿ

ಹೊರಹೊಮ್ಮಿದೆ. ಒಬ್ಬ ಕವಿ ಇನ್ನೊಬ್ಬ ಕವಿಗೆ ಪ್ರೇರಣೆ ಕೊಡುವುದರ ಮಹಿಮೆ ಇದು. ಈ ಕವನಗಳಿಗಾಗಿ ಅವರು ಬಳಸಿದ ಛಂದಸ್ಸು-ಅಷ್ಟಷಟ್ಪದಿ-ಗೇಯ ಛಂದಸ್ಸು. 'ಉಯ್ಯಾಲೆ' ಕವನ ಸಂಗ್ರಹದಲ್ಲಿಯ ಅಷ್ಟಷಟ್ಪದಿ ರಚನೆಗಳು, ಬೇಂದ್ರೆ ಕವಿ ಮನಸ್ಸನ್ನು ಹದಗೊಳಿಸಿತ್ತು. ಆ ಹದ ಇಲ್ಲಿಯ ಪದ್ಯಗಳಲ್ಲಿದೆ. ಗಂಗೆಯ ಮಹಿಮೆ ಸ್ಮರಿಸಿಕೊಂಡದ್ದು ಹೀಗೆ-

೧. ನಿನ್ನ ನೆನವೇ ಬೆಳಕು, ನನಗೆ ಮೂರೂ ಸಂಜೆ
ನಿನಗುಪಮೆಯೇ ತಾಯಿ! ನೀನು ಕಳಿಯದ ಹಣ್ಣು!

- ಸಮೃದ್ಧ

೨. ಜಗದ ಸೌಭಾಗ್ಯಕ್ಕೆ ನೀನೊಬ್ಬಳೇ ಸಾಕು
ಉತ್ತಮರ ಬೆಳೆ ಬರಲು 'ಬೀಜ-ಮನು' ಬರಬೇಕು.
ಇದು ಗಂಗೆಯ ಸೌಭಾಗ್ಯ!

- ಸೌಭಾಗ್ಯ

೩. ಈ ವಿಶ್ವಮಾನವರ ದೃಷ್ಟಿಯೇ ಏಕಾಂಗಿ
ಕಲಿಸು ನಿನ್ನಾ ಕಲೆಯ ವಿಶ್ವಂಭರೆ ಗುರುವೆ!

- ಸಕಲ

ಗಂಗೆ ಸಕಲರಿಗೆ ಪರಿಪೂರ್ಣ ದೃಷ್ಟಿ ಕೊಡಬೇಕು ಎಂಬ ಅಪೇಕ್ಷೆ

೪. ನೀರು ನೆಲಗಳ ಕರುಳಬಳ್ಳಿ ಹರಿದೀತೆಂದು (ಹರಿದುಬರು)
ಈ ಉಸಿರು ಕಂಡೀತು ಒಂದೆ ಬೆಳಕನ್ನೆಂದು

- ವಸುಧಾ

ಇದು ಜಲ ಮತ್ತು ವಸುಧಾ ವಾತ್ಸಲ್ಯ ಸಂಬಂಧ. ಆದುದರಿಂದ

"ನೆಲಕೆ ನೀರೆ ಗತಿಯು; ನೆಲ ನೀರಿಗಾಧಾರ
ಮಣ್ಣು ನೆಲದಲ್ಲಿ ಭವವು ಬರಲು, ಮಾಸುವುದೆ ಗುಣ?
....

ಇಬ್ಬರೀ ಜತೆ ಸಖ್ಯ-ವತ್ಸಲತೆಯ ಹಾರ" ಎಂದು ಬೇಂದ್ರೆ ವರ್ಣಿಸಿದರು.

೫. "ಪ್ರಿಯನಿದಿರು ಬಂದಾಗ, ಮೂಕ ಮಧುರವು ಭಕ್ತಿ
ಈ ಬೆಳಕ ಬಣ್ಣಿಸಲು ಯಾವ ವರ್ಣಕೆ ಶಕ್ತಿ?"

- ಕಿಮಪಿತತ್

ಎಂದೇ ಕೇಳಿದ್ದಾರೆ. ಜೀವನ ಶಕ್ತಿಯೇ ನೀರು. ಗಂಗೆ ಪಾವಿತ್ರ್ಯದ ಪ್ರತೀಕ.

ಬೇಂದ್ರೆ ಏಸೇ ಒದಲಿ-ಗದ್ಯ, ಪದ್ಯ, ನಿಘಂಟು, ಸೃಜನಶೀಲ! ಎಂಬುದಕ್ಕೆ ಈ ಐದೂ ಕವನ ಸೃಷ್ಟಿ ಸಾಕ್ಷಿ.

ಡ) ಕಾವ್ಯ ಸಂದರ್ಭ ಚಿಂತನ :

ಬೇಂದ್ರೆಯವರಿಗೆ ಒಬ್ಬ ಸಿದ್ಧಪುರುಷರು ಒಂದು ನೃಸಿಂಹ ಸಾಲಿಗ್ರಾಮ ಕಾಣಿಕೆಯಾಗಿ ಕೊಟ್ಟಿದ್ದರು. ಅದು ಉಗ್ರ ಎಂಬುದು ಬೇಂದ್ರೆಯವರಿಗೆ ಗೊತ್ತಿರಲಿಲ್ಲ. ಆದರೆ ಉಗ್ರತೆಯ ಬಿಸಿ ಅನುಭವಿಸಿಯೂ ಆಗಿತ್ತು. ಆ ಶಾಲಿಗ್ರಾಮ, ಬೇಂದ್ರೆಯವರ ಕನಸಿನಲ್ಲಿ "ನೀನು ನನ್ನತ್ತ ಸರಿಯಾಗಿ ಲಕ್ಷ್ಯಕೊಟ್ಟಿಲ್ಲ" ಎಂದು ಎಚ್ಚರಿಸಿತ್ತು. ಆಗ ಬೇಂದ್ರೆ ಉತ್ತರಿಸಿದ್ದರು : "ಪ್ರಭೋ! ನನಗೆ ಕೊಟ್ಟವರು ಏನೂ ಹೇಳಿಲ್ಲ. ಅವರು ನಿರ್ವಾಣಹೊಂದಿಯೂ ಕಾಲವಾಯಿತು. ಕ್ಷಮಿಸಬೇಕು ಎಂಬ ಭಾವದಿಂದ-

"ಮರೆವುದೇನು ಜಡದ ಧರ್ಮ, ನಾನು ಮರೆತೆನೆನ್ನಿರಿ
ಅರಿವು ಮಾಡಿಕೊಡಿರಿ ಎನಗೆ, ತಾವು ನನ್ನ ಬಿಡುವರೆ?
ತಾಯಿ ಕೈಯ ಬಟ್ಟಮೇಲೆ ಬೆಸೆಯಾವುದು ಹಸುವಿಗೆ?
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿಮಾಮ್"

- ನೃಸಿಂಹ ಸ್ತೋತ್ರ

ಎಂದು ಪ್ರಾರ್ಥನೆ ಸಲ್ಲಿಸುತ್ತ ಹೋದರು. ನೃಸಿಂಹ ಶಾಲಿಗ್ರಾಮ ಒಲಿಯಿತು. "ಭಾರವಾದ ಶಿಲೆಯು ನಮ್ಮ ಶಾಲಿಗ್ರಾಮ" (ನೆನವು-ಜೀವಲಹರಿ ಕವನ : ೩೫) ಎಂಬ ರಹಸ್ಯದ ಸಾಕ್ಷಾತ್ಕಾರ ಬೇಂದ್ರೆಯವರಿಗೆ ಆಯಿತು.

'ಸೂರ್ಯಪಾನ' ಕವನ ಸಂಗ್ರಹದಲ್ಲಿ ಅತ್ಯಂತ ಜನಪ್ರಿಯ ಕವನ-'ಕರಡಿ ಕುಣಿತ'. ಇದರ ನಿರ್ಮಿತಿಯ ಸಂದರ್ಭ ಹೀಗೆ-

ಒಮ್ಮೆ ಬೇಂದ್ರೆ ಉಗಿಬಂಡಿಯ ಪ್ರವಾಸ ಮಾಡುತ್ತಿದ್ದರು. ರಾತ್ರಿಯ ಸಮಯ. ಎರಡನೇ ದರ್ಜೆಯ ಬೋಗಿಯ ಹಾಸಿಗೆಯಲ್ಲಿ ಸುಖವಾಗಿ ನಿದ್ರಿಸಿದ್ದರು. ಸಹಪ್ರವಾಸಿಗರು ಯಾರೂ ಇರಲಿಲ್ಲ. ಯಾವಾಗಲೋ ಎಚ್ಚರವಾದಾಗ-ಡಬ್ಬಿಯ ಬಾಗಿಲದಲ್ಲಿ ಬೃಹತ್ ಕರಡಿ! ಬೇಂದ್ರೆಯವರಿಗೆ ಆಶ್ಚರ್ಯ. ಮುಂದಿನ ನಿಲ್ದಾಣ ಬಂದಾಗ ಟಿಕೆಟ್ ಕಲೆಕ್ಟರ್‌ನಿಗೆ ಹೇಳುವಷ್ಟರಲ್ಲಿ ಆ ಕರಡಿ ಗಾಡಿಯಿಂದ ಇಳಿದು ಓಡಿ ಹೋಗಿಬಿಟ್ಟಿತ್ತು. ಎಲ್ಲೆಡೆಗೂ ಹುಡುಕಾಡಿದರೂ ಅದು ಕಾಣಲಿಲ್ಲ. ಆಗ ಬೇಂದ್ರೆ, ಅಲ್ಲೇ ಇದ್ದ ಆ ಊರಿನ ವ್ಯಕ್ತಿಯನ್ನು ಕೇಳಿದ್ದರು. "ಈ ಊರಿನ ಬಳಿ ಎಂದಾದರು ಬೃಹತ್ ಅಪಘಾತ ಸಂಭವಿಸಿತ್ತೆ?". "ಹೌದು ಬಹಳ ಜನರು ಸತ್ತಿದ್ದರು".

ಗಾಡಿ ಮುಂದೆ ಸಾಗಿತು. "ಆ ಅಪಘಾತದಲ್ಲಿ ಸತ್ತ ಯಾರೋ ಕರಡಿ ಜನ್ಮದಲ್ಲಿ ನನಗೆ ದರ್ಶನ ಕೊಟ್ಟು, ತನ್ನ ಮುಕ್ತಿಗಾಗಿ ನನ್ನೆಡೆಗೆ ಬಂದಿರಬೇಕು" ಎಂದು ಭಾವಿಸಿ, ಕವನ ರಚಿಸಿದರು. ಈ ಜನಪ್ರಿಯ ಕವಿತೆಗೆ ಆ ದರ್ಶನವೇ ಪ್ರೇರಣೆ. ಕರಡಿಯಂಥ ಮೂಕಪ್ರಾಣಿಯನ್ನು ಕುಣಿಸಿ ತಮ್ಮ ಚರಿತಾರ್ಥ=ಹೊಟ್ಟೆ ತುಂಬಿಕೊಳ್ಳುವ ಮನುಷ್ಯನ ಬುದ್ಧಿ ಬದಲಾಗಬೇಕು ಎಂಬ ಕವಿತೆಯ ಆಶಯಕ್ಕೆ ಇನ್ನೂ ಫಲ ಸಿಕ್ಕಿಲ್ಲ. ಮೃತ ಆತ್ಮಕ್ಕೆ ಮುಕ್ತಿ ದೊರಕಿರಲು ಸಾಕು.

ಸೊಲ್ಲಾಪುರದಲ್ಲಿ ಬೇಂದ್ರೆಯವರು ದೊಡ್ಡ ಚಾಳಿನಲ್ಲಿ ವಾಸವಾಡಿದ್ದರು. ಅಲ್ಲಿ ನಾಯಿಗಳು ಅನೇಕ. ಅವು ಮರಿ ಹಾಕುವುದಕ್ಕೆ ಲೆಕ್ಕವಿರಲಿಲ್ಲ. ಅಂಥ ಮರಿಗಳನ್ನು ಅನೇಕ ಹುಡುಗರು ಕಾಡಿ, ಹೊಡೆದು ಕೊಲ್ಲುತ್ತಿರುವುದೂ ಸಾಮಾನ್ಯ ದೃಶ್ಯ. ಇದರಿಂದ ದುಃಖಿತರಾದ ಬೇಂದ್ರೆ, ಆರ್ದ್ರರಾಗಿ ಹೆಣ್ಣುನಾಯಿಯ ದುರಂತ ಜೀವನಕ್ಕೆ ಕವನ ರೂಪಕೊಟ್ಟರು. ಈ ಹೆಣ್ಣುನಾಯಿ ರಾಧೆಯಾಗಿ ಕವಿಗೆ ಕಂಡಿತು! ಈ ರಾಧೆಯ ದುಃಖ ವಿಮೋಚನೆಯನ್ನು ಕೃಷ್ಣನೇ ಮಾಡಬೇಕು ಎಂಬ ಭಾವ ಇಲ್ಲಿದೆ. ದುಃಖವಿಮೋಚನೆ ಆಗದಿದ್ದರೆ, ಮರಣ ಒಂದೇ ಹಾದಿ. ಅದು ಘಟಿಸುತ್ತದೆ. ಕವನ ನಿರ್ಮಿತಿಯ ಸಂದರ್ಭಗಳು ರೌದ್ರ. ಕವನ ಸೃಷ್ಟಿ ಆಹ್ಲಾದಕಾರಕ. ಬೇಂದ್ರೆ ಪಾಡನ್ನು ಹಾಡುಮಾಡುವ ಬಲುಹು, ಸಾಮರ್ಥ್ಯ ಇದು.

ಇ) ಕಾವ್ಯ ಪರಿಕರ ಚಿಂತನ :

''ಉಪಮಾನಿಷ್ಟಃ ಕವಯಃ' ಎಂಬುದಕ್ಕೆ ಮಾದರಿ 'ಅಂತೆಪೋಲ್' ಕವನ. ಧಾರವಾಡದ ಕನ್ನಡ ದೇಸೀ ಬೇಂದ್ರೆ ಕಾವ್ಯದ ಪ್ರಾಣ. ಇದು ಸೃಷ್ಟಿಗರ್ಭಪಡೆಯುವುದು ಮೌನದ ಧ್ಯಾನದಲ್ಲಿ. ಮೌನ ಅನೇಕ ಕಾವ್ಯಪ್ರತಿಮೆಗಳನ್ನು ಸೃಷ್ಟಿಸುತ್ತದೆ. ಕಾವ್ಯಾರ್ಥ ಸ್ಪಷ್ಟ ತಿಳಿಯದವರು ಅಪಾರ್ಥಮಾಡುತ್ತಾರೆ. ಇದಕ್ಕೆ ಕವಿ ಹಾಗೂ ಕವನ ಕಾರಣವಲ್ಲ. ಓದುಗನ ಕೊರತೆಯೆ ಕಾರಣ ಎಂಬುದರಲ್ಲಿದೆ. 'ಗೋವತ್ಸಲೀಲೆ' ಕವನದಲ್ಲಿಯ ಬೇಂದ್ರೆಯವರ ಪದಶಯ್ಯೆ ಅನನ್ಯ. ಉದಾಹರಣೆಗಾಗಿ ''ಕೆನೆಕೆನೆಯು ಎಂದು ಮುಖಚಾಚಿ ನಿಂದ ಆ ತಾಯಿ ಕೆನ್ನೆಗಾಗಿ'' ಇದು ವರಕವಿಯ ಸೃಷ್ಟಿ. ಇಲ್ಲಿಯ ಪದಗಳನ್ನು ಹಿಂದೆ ಮುಂದೆ ಮಾಡಲು ಬಾರವು.

'ನೃತ್ಯಯಜ್ಞ'ದಲ್ಲಿ ಇರುವ ನೃತ್ಯ ಮತ್ತು ಯಜ್ಞ ಎರಡು ಶಬ್ದಗಳಿಗೆ ಪರಂಪರೆಯ ತೂಕವಿದೆ. ನೃತ್ಯ ಎಂಬುದು ಸ್ವತಂತ್ರ್ಯಕಲೆ. ಇದಕ್ಕೆ ನಟರಾಜ ಶಿವನೇ ಮೂಲ. ಯಜ್ಞ ಎಂಬುದು ಋಷಿ ಧರ್ಮ. ಕವಿಗಳ ದೃಷ್ಟಿಗೆ ಋಷಿ ದರ್ಶನದ ಕುವತ್ತು ಇರುತ್ತದೆ. ''ಯ''ದಿಂದ ''ಜ್ಞ''ದ ವರೆಗೆ ೧೨ ಅವರ್ಗೀಯ ವ್ಯಂಜನಗಳು. ೧ ರಿಂದ ೧೨ ಸಂಖ್ಯೆಗಳಿಗೂ ವರ್ಣಗಳಿಗೂ ಇರುವ ಸಂಬಂಧ ಚಿಂತನ ಬೇಂದ್ರೆ ಮಾಡಿದ್ದರು. ಬೇಂದ್ರೆ 'ಕಾವ್ಯಯಜ್ಞ'ನಿರತರು! ವಾಕ್‌ಯಜ್ಞದಿಂದ ಪರಮಾತ್ಮನನ್ನು ಸಂತೃಪ್ತಗೊಳಿಸುವುದು ಅವರ ಗುರಿಯಾಗಿತ್ತು.

ನೃತ್ಯಕ್ಕೆ ಗಂಡು ನವಿಲು (ಶಿಖಿ) ಆದರ್ಶ. ಅದಕ್ಕೆ ಮಳೆ ಬರುವ ಗುಡುಗಾಟ-ಉದ್ದೀಪಕ. ಮಯೂರ-ಷಣ್ಮುಖನ ವಾಹನ. ಈ ಕುಮಾರ ಸಂಭವ-ಗಿರಿಜಾ ಕಲ್ಯಾಣಕ್ಕೆ ಕಾರಣ. ಇವನೇ ತಾರಕಾಸುರನ ಸಂಹಾರ ಮಾಡಿ, ಎಲ್ಲರೂ ಆನಂದ ನೃತ್ಯ ಮಾಡಲು ಹಚ್ಚಿದನು.

ಮಳೆ-ಅನ್ನಸೃಷ್ಟಿಗೆ ಕಾರಣ. 'ಪರ್ಜನ್ಯಾತ್ ಅನ್ನ ಸಂಭವಃ'. ಅನ್ನ ಸಂಭವಕ್ಕಾಗಿ 'ಯಜ್ಞ' ಮಾಡುವ ರೂಢಿ ಇದೆ. ಸಕಲರಿಗೆ ಅನ್ನ ದೊರೆತಾಗ ಸುಖದ ನೃತ್ಯ!

ಈ ವಿಭಾಗದಲ್ಲಿಯ 'ಸಪ್ತಕಲೆ' ವಿಶಿಷ್ಟವಾದ ಕವನ. ಇದರ ಛಂದಸ್ಸು ಸಾಮು.

ಸ್ವರವರ್ಣಗಳ ಆರೋಹ ಮತ್ತು ಅವರೋಹದಲ್ಲಿ ಬೇಂದ್ರೆ ಕಾವ್ಯವಾಚನ ಪದ್ಧತಿಯ ಹಿರಿಮೆ ಇದೆ. ಈ ಕವನದ ಒಟ್ಟು ಶಿಲ್ಪವೇ ಚಿಂತನಾರ್ಹ.

ಜೀವನಕಲೆ (Art of Living) ಮಾನವನ ಜೀವನ ಧ್ಯೇಯವಾಗಬೇಕು. ಅದಕ್ಕೆ ಸಂಗೀತ, ಚಿತ್ರ, ನೃತ್ಯ, ನಾಟಕ, ವಾಸ್ತು ಮತ್ತು ಕಾವ್ಯ ಎಂಬ ಆರೂ ಕಲೆಗಳು ಪೂರಕ. ಈ ಆರೂ ಕಲೆಗಳ ಸಂಸ್ಕಾರ ಮತ್ತು ಪರಿಣತಿಯಿಂದ ವ್ಯಕ್ತಿ ತನ್ನ ಬದುಕನ್ನು ಬಾಳು ಮಾಡಿಕೊಳ್ಳುವಲ್ಲಿ ಸಫಲವಾಗುತ್ತಾನೆ. ಇದು ಭಾರತೀಯ ಹಾಗೂ ಕರ್ನಾಟಕ ಸಂಸ್ಕೃತಿ. ಆರೂ ಕಲೆಗಳಲ್ಲಿ ಪ್ರಥಮ ಸ್ಥಾನ ಸಂಗೀತಕ್ಕೆ ಕೊಡಲಾಗಿದೆ. ಉಳಿದೆಲ್ಲ ಕಲೆಗಳೂ ಒಂದಿಲ್ಲೊಂದು ರೀತಿಯಿಂದ ಕಾವ್ಯೋದ್ಭವದ ಅಂಗಗಳೇ. ಅವು ಹೀಗೆ-

೧. ಸಂಗೀತದ ಪ್ರಾಣ-ವರ್ಣಗಳ ಆಲಾಪ, ಆರೋಹ, ಅವರೋಹ. ಇದು ಕಾವ್ಯ ವಾಚನದ ಗುಟ್ಟು

೨. ಚಿತ್ರ-ಕವಿಯ ದರ್ಶನ ಶಕ್ತಿಯ ಪ್ರತೀಕ ಅವನಿಗೆ ಕಂಡದ್ದೆಲ್ಲ-ಅಲಂಕಾರ, ಪ್ರತಿಮೆ, ಪ್ರತೀಕ ನಿರ್ಮಿತಿಗೆ ಕಾರಣ.

೩. ನೃತ್ಯ - ಕವನದ ಛಂದಸ್ಸಿನ ಸೂಚಕ ಕಲೆ. ನಾದ, ತಾಳ, ಲಯ ಕಾವ್ಯಧರ್ಮಗಳೇ

೪. ನಾಟಕ - 'ವಿಭಾವಾನುಭಾವ ಸಂಯೋಗಾತ್ ರಸನಿಷ್ಪತ್ತಿಃ'' ಎಂಬ ಸೂತ್ರದ ಪ್ರಕಾರ - ರಸದ ಸಾರವೇ ಕಾವ್ಯದ ಅನನ್ಯ ಚಮತ್ಕಾರ.

೫. ವಾಸ್ತುವಿಗೆ ಇರುವ ವಿನ್ಯಾಸ- ಕವನ ಸೃಷ್ಟಿಯ ಅಂಗವಾಗಿ ಅಭಿವ್ಯಕ್ತಗೊಳ್ಳುತ್ತದೆ. ಗದ್ಯಕ್ಕೆ ಪದ್ಯದ ಸೊಗಸು ಮತ್ತು ಪದ್ಯದಲ್ಲಿಯ ಗದ್ಯತನ ಎಂಬುದು ಕಾವ್ಯ ವಿನ್ಯಾಸದ ವಿಷಯ.

೬. ಸಂಗೀತದ - ಆತ್ಮಪ್ರೀತಿ; ಚಿತ್ರದ-ಧ್ರುವಾಸ್ಮೃತಿ; ನೃತ್ಯದ-ಆವೇಶ; ನಾಟಕದ-ಆಂಗಿಕ, ವಾಚಿಕ ಆಹಾರ್ಯ ಅಭಿನಯ; ವಾಸ್ತುವಿನ-ಜೀವಂತಿಕೆ ಎಂಬ ಗುಣಗಳು ಕಾವ್ಯದ ಮೈ ಹೊಕ್ಕಾಗ-

೧) ಪರಾ, ಪಶ್ಯಂತಿ, ಮಧ್ಯಮಾ ವಾಣಿ ಸರಸ್ವತಿಯ ವರದಿಂದ ವೈಖರಿವಾಣಿಯಾಗಿ ಪ್ರಕಟವಾಗುತ್ತದೆ.

೨) ಸ್ಫೂರ್ತಿ-ಅಮೂರ್ತಭಾವಗಳಿಗೆ ಮೂರ್ತ ಸ್ವರೂಪಕೊಡುತ್ತದೆ.

೩) ಅಕಾಮ್ಯ, ಶ್ರೋತ್ರಿಯಗಮ್ಯ, ಭವ್ಯ, ನವ್ಯ, ಕವಿಯ ಹೃದಯದ್ರವ್ಯವಾಗಿ ಅವನಿಂದ ದಿವ್ಯಕಾವ್ಯ ಹೊರಹೊಮ್ಮುತ್ತದೆ.

ಈ ಆರೂ ಕಲೆಗಳ ಸಾಮರಸ್ಯ=ಜೀವನಕಲೆ. ನಡೆ, ನುಡಿ, ಬಯಕೆ, ಆದರ್ಶಗಳೆಲ್ಲ ಸುಕಲೆಗಳಾಗಿ ಜೀವನ ಸಂಸ್ಕೃತಿ ಮೌಲಿಕವಾಗುತ್ತದೆ. ಇದು ಮನುಷ್ಯ ದೇಹಧಾರಣೆಯ ವರದಾನ! ಕಾವ್ಯಸೃಷ್ಟಿ-ನರದೇಹದ ಸಾರ್ಥಕ್ಯ! ನರನ ಹೃದಯದಲ್ಲಿ ನಾರಾಯಣನಿರುವ

ಎಂಬ ಅನುಭಾವಬೋಧ ಕವಿಗೆ ಆಗುತ್ತದೆ. ಅದನ್ನೇ ಬೇಂದ್ರೆಯವರು-

''ಹೃದಯಾರವಿಂದದಲ್ಲಿರುವ ನಾರಾಯಣನೆ
ತಾನಾಗಿ ದತ್ತನರನು''

- ಗಂಗಾವತರಣ

ಎಂದು ಸ್ಪಷ್ಟಪಡಿಸಿದ್ದಾರೆ.

ಈ) ಕಾವ್ಯದ ಭವಿಷ್ಯ ಚಿಂತನ :

ಚಾರ್ವಾಕ ದೃಷ್ಟಿ-ನಾಸ್ತಿಕರದು. 'ಮಧುವಾತಾ ಋತಾಯತೆ' ಯಲ್ಲಿ ಬಂಡವಾಳಶಾಹಿ ಒಳ್ಳೆಯ ಗಾಳಿಯಲ್ಲ. ಈ ದೃಷ್ಟಿಯ ಕಾವ್ಯ - 'ಕುರುಡು ಕಾಂಚಾಣ'ಗತಿ ಹಿಡಿಯುತ್ತದೆ. ಕಾವ್ಯಕ್ಕೆ ಉತ್ತಮಭವಿಷ್ಯ ಪ್ರಾಪ್ತವಾಗಬೇಕಾದರೆ ಕೆಳಗಿನ ಕೆಲವು ಗುಣ ಮೈಗುಣಗಳಾಗಬೇಕು. ಅವು ಹೀಗೆ-

''ಆ'' ಎಂದು ಬಾಯಿ ತೆರೆವುದಕು ಮೊದಲು ''ಅ'' ಮೂಡಬೇಕು ಒಳಗೆ

೧. ''ಈಶಪ್ರಣಯದಲಿ ಸೃಷ್ಟಿಯಾಗುವುದು ಪ್ರಣವನಾದ (ಓಂ) ಮೊಳಗೆ''

- ಅ ಆ

೨. ಸಂಖ್ಯೆ ಎಂಬುದೂ ಕಾವ್ಯಭಾಷೆ. ಶಬ್ದಗಳಲ್ಲಿ ಇರುವ ಶಕ್ತಿ ಪರಂಪರೆಯಿಂದ ಬೆಳೆದು ಬಂದದ್ದು. ಸಂಖ್ಯೆಗಳ ಶಕ್ತಿ ಕವಿ ಕಾಣುವ ಲೋಕದ ದರ್ಶನ -

''ಒಂದರಲಿ ಹಲವುಂಟು, ಬೀಜ ಫಲಗಳ ಗಂಟು
ಪ್ರಸ್ತಾರ ವಿಸ್ತಾರ ಆಗಹೋಗು''

- ಸಂಖ್ಯಾಂಕಿತ

ಕವನಗಳ ಪ್ರಸ್ತಾರ=ಗುರು, ಲಘು ಎಂಬುದು ಮಾತ್ರೆಗಳ ಲೆಕ್ಕ!

೩. ಬೇಂದ್ರೆ ಕಾವ್ಯದ ಪ್ರಮುಖ ಸಿದ್ಧಾಂತ-ಗೆಳೆತನ. ಇದರ ಪ್ರತೀಕಗಳಾಗಿ - ಚೆನ್ನಲಿಂಗವೇ, ರಾಮರಾಮಾ ಮತ್ತು ಹರಕೆ ಎಂಬ ಮೂರು ಕವನಗಳಿವೆ. ಆತ್ಮೀಯ ಗೆಳೆಯರ ಸಂಪರ್ಕ, ಸಹಜೀವನ ಕಾವ್ಯ ನಿರ್ಮಿತಿಗೆ ಜೀವಾಳ. ಇಂಥ ಕವನಗಳು ಶಾಶ್ವತ.

೪. ''ಇಳೆಯ ಮಕ್ಕಳೆಲ್ಲ ಬನ್ನಿ! ತಾಯ ತವರು ಮನೆಗೆ'' - ಪ್ರೇಮಬೀಜ

ಇಲ್ಲಿ ತಾಯಿ=ಕನ್ನಡ ತಾಯಿ; ಮಕ್ಕಳು=ಕನ್ನಡ ಮಕ್ಕಳು. ಕನ್ನಡ ಮಕ್ಕಳಲ್ಲಿ ಕನ್ನಡ ಭಾಷಾ ಪ್ರೀತಿ, ಕನ್ನಡ ಕಾವ್ಯ ಪ್ರೇಮ, ಬೀಜವಾಗಿ ಧಾರಣೆಯಾಗದಿದ್ದರೆ ಕನ್ನಡ ಕಾವ್ಯಕ್ಕೆ ಭವಿಷ್ಯವೇ ಇಲ್ಲ.

''ಪ್ರೇಮಬೀಜ ಮೂಲ ನನಗೆ
ಪ್ರೇಮಬೀಜ ಫಲದ ಗೊನೆಗೆ''

ಎಂಬ ಅಂಬಿಕಾತನಯದತ್ತ ಉಕ್ತಿ ಕನ್ನಡ ಕಾವ್ಯವನ್ನು ಕನ್ನಡಿಗರ ಹೃದಯದಲ್ಲಿ ಬಿತ್ತಬೇಕು ಎಂಬ ಸಂದೇಶಕೊಟ್ಟಿದೆ. ಇದು ಆದಾಗ ಕನ್ನಡ ಮಕ್ಕಳ-ಎದೆ, ರಕ್ತ, ಭಾವ, ಚಿತ್‌ಶಕ್ತಿ ಅಂತಃಕರಣ ಕನ್ನಡಮಯವಾಗಿ, ಅವರೆಲ್ಲರ ಜೀವನ ಪಾವನವಾಗುತ್ತದೆ, ಶಾಂತಿಯಗೀತವಾಗುತ್ತದೆ.

''ನಾಳೆ ಎಂಬುವುದು ನಿನ್ನಿನ ಮನಸು
ಮುಂದೆ ಎಂಬುದು ಇಂದಿನ ಕಣಸು
ಭೂತದಿಂದಲೇ ಭಾವವು ಬಂತು
ಭಾವವಿಲ್ಲದೇ ಉದ್ಭವವೆಂತು?''

- ನಾಳೆ ಎಂಬುದು ನಿನ್ನಿನ ಮನಸು

ಎಂದು ಭಾವ ಋಷಿ ಬೇಂದ್ರೆ ಪ್ರಶ್ನಿಸುತ್ತಾರೆ. ಭತ್ತ=ಅಕ್ಕಿಯಕಾಳು=ಕಾವ್ಯ. ಅದರ ಮೇಲಿರುವ ಗೊಳಲಿ=ಭೂತ ಕಾಲದ ಕಾವ್ಯ ಪರಂಪರೆ. ಈ ಪ್ರೇರಣೆಯಿಂದ ಸಮೃದ್ಧವಾದ ಕನ್ನಡ ಕಾವ್ಯದಲ್ಲಿ ಬೆಳೆಯುವ, ಬೆಳೆಸುವ ಸಾಮರ್ಥ್ಯ ಇರುತ್ತದೆ. ಇದು ''ಕತ್ತಲನ್ನೇ ಬಣ್ಣಿಸುವ ತೇಜ''=ಕಷ್ಟಗಳನ್ನು ಸಂಹರಿಸಿ ತೇಜಸ್ವಿಭವಿಷ್ಯ ನಿರ್ಮಿಸುತ್ತದೆ.

೬. 'ಯೌವನದ ಕನಸು' - ಯೌವನದ ಕನಸು

೧. ತನ್ನ ಅನ್ನವ ಪಡೆಯುವುದೇ - ಒಕ್ಕಲು ಧರ್ಮ

೨. ಇಚ್ಛೆಯಮರಣ ಹೊಂದುವುದೇ - ಇಕ್ಕಾಲು ಧರ್ಮ

೩. ನಿಜ ಸತ್ಯದಂತೆ ನಡೆಯುವುದೇ - ಮುಕ್ಕಾಲು ಧರ್ಮ.

ಇದನ್ನುಳಿದು-ಅಧರ್ಮ, ಅಧರ್ಮ, ಅಧರ್ಮ.

''ಅನ್ನದಾಟ, ಮುಪ್ಪಮೀರಿ, ಸತ್ಯಸೇರಿದಾಗ - ಆತ್ಮದ ಉದಯ'' ಇದನ್ನು ಮಾಡುವ ಕಾವ್ಯಕ್ಕೆ ಮಾತ್ರ ಉತ್ತಮ ಭವಿಷ್ಯವಿದೆ ಎಂದು ಬೇಂದ್ರೆ ಸ್ಪಷ್ಟಪಡಿಸಿದ್ದಾರೆ.

೭. 'ನವಯುಗಾರಂಭ' - ಕವನ : ೮

೧. ''ಜ್ಞಾನದಿ ಮತಮತವು ಕೂಡಿ
ರಸವು ಭಾವದಲ್ಲಿ ಮೂಡಿ
ದೈವಪೌರುಷಗಳ ಜೋಡಿ
ತಳಹದಿ ಕೃತಿಗೆ
ಹಳ್ಳಿ ಹಳ್ಳಿ ಸಕಲ ಭೋಜ್ಯ
ಭಾರತವಿದ್ದು ಅವಿಭಾಜ್ಯ
ಜಗತ್ತೆಲ್ಲ ಏಕರಾಜ್ಯ
ಸಾರಲಿ ಶ್ರುತಿಗೆ''

ಎಂಬ ಸಾಲುಗಳಲ್ಲಿ ಭಾರತೀಯ ಮುಂದಿನ ಜನಾಂಗ, ಪೀಳಿಗೆ ಭಾವಜೀವಿಯಾಗಲಿ, ಜ್ಞಾನಿಯಾಗಲಿ, ಹಳ್ಳಿಗಳು ಅಭಿವೃದ್ಧಿ ಹೊಂದಲಿ, ಭಾರತ ಅವಿಭಾಜ್ಯ (ಹಿಂದುಸ್ಥಾನ+ಪಾಕಿಸ್ಥಾನ)ವಾಗಿ ಜಗತ್ತು ಐಕ್ಯಸಾಧಿಸಲಿ. ಇದು ಆದಾಗ ಮಾತ್ರ ನವಯುಗ=ಸತ್ಯಯುಗ=ಕೃತಯುಗ ಆರಂಭವಾದೀತು ಎಂದಿದ್ದಾರೆ. ಶ್ರೀ ಅರವಿಂದರೂ ಇದನ್ನೇ ಅಪೇಕ್ಷಿಸಿ ಎಚ್ಚರಿಸಿದ್ದಾರೆ.

"ಹೃದಯ ಸಮತೆ ಮೊದಲ ಪಾಠ
ಬಾಂಧವ್ಯವೆ ಜೀವದಾಟ
ಮೂರು ಮುಖಕು ಒಂದೇ ಪೀಠ
ಸಿಂಹದ ದಾರಿ"

ಎಂಬುದು ನವಯುಗದ ಪ್ರಮುಖ ಲಕ್ಷಣ. ಈ ಸಪ್ತಮುಖದ ಕಾವ್ಯಕ್ಕೆ ಉತ್ತಮ ಭವಿಷ್ಯವಿದೆ ಎಂದು ಬೇಂದ್ರೆ ನಂಬಿದ್ದರು. ಅದರಂತೆ ಬಾಳಿದರು.

ವೇದಕ್ಕೆ ಇರುವ - ಶಿಕ್ಷಾ, ವ್ಯಾಕರಣ, ಛಂದಸ್ಸು, ಕಲ್ಪ, ಜ್ಯೋತಿಷ್ಯ ಮತ್ತು ನಿರುಕ್ತ ಆರು ಅಂಗಗಳು ಬೇಂದ್ರೆ ಕಾವ್ಯಕ್ಕೂ ಇವೆ : 'ಸೂರ್ಯಪಾನ'ಕ್ಕೆ ಅನ್ವಯಿಸಿ ಪರೀಕ್ಷಿಸೋಣ.

ಶಿಕ್ಷಾ : ಅಕ್ಷರ ಮತ್ತು ಸ್ವರಗಳ ಏರಿಳವು - ಈ ಲಕ್ಷಣ

೧. ಸಪ್ತಕಲಾ ಮತ್ತು ಮಧುವಾತಾ ಋತಾಯತೇ - ಕವನಗಳ ಸಾಮ ಗಾನ ಪದ್ಧತಿಯಲ್ಲಿದೆ.

೨. ಜಯಜಯಾ ಗಾಂಧಿ ಮೋಹನಾ ಮತ್ತು ಪ್ರತಿ ವರ್ಷದಂತೆ ಬಂತುಽ ಶ್ರಾವಣಾ - ಕವನಗಳ ರೀತಿ ಲಾವಣಿಯಂತಿದೆ.

೩. ಕೇಳಿರೊಂದು ಸೋಜಿಗ, ಶ್ರದ್ಧಾಂಜಲಿ, ದರಿದ್ರ ನಾರಾಯಣ- ಕವನಗಳಿಗೆ ಗದ್ಯಲಯವಿದೆ.

೪. ಅವಗ್ರಹ ಚಿಹ್ನೆಗಳ ಒತ್ತನ್ನು ಲಕ್ಷಿಸಿ ಓದಬೇಕು. ಬೇಂದ್ರೆ ಕವನ ವಾಚನ ಪದ್ಧತಿ - ಶಿಕ್ಷಾಂಗ ಆಧರಿಸಿ ಇದೆ.

ವ್ಯಾಕರಣ : ಪದ್ಯದ ವ್ಯಾಕರಣ ಅನ್ವಯ ಅರ್ಥ ಅವಲಂಬಿಸಿರುತ್ತದೆ. ಗದ್ಯಕ್ಕಿಂತ ಭಿನ್ನವಾಗಿ ಪದಗಳ ಜೋಡಣೆ ಇರುತ್ತದೆ. ಇಲ್ಲಿ ಕವಿಯ ಪದಸಂಘಟ್ಟನಾ ಕ್ರಮದಲ್ಲಿ ಅದಲು ಬದಲು ಮಾಡಲು ಸಾಧ್ಯವಿಲ್ಲ.

೧. ಗೋವತ್ಸಲೀಲೆ, ಮಾತುಮೌನ, ಅಹನೆ ಮೊದಲಾದ ಕವನಗಳಲ್ಲಿ ಅನ್ವಯ ನಿರ್ಧರಿಸಿ ವಾಚನ ಮಾಡಬೇಕು.

ಛಂದಸ್ಸು : 'ಸೂರ್ಯಪಾನ' ಸಂಗ್ರಹದಲ್ಲಿ ತ್ರಿಪದಿ, ಅಕ್ಷರವೃತ್ತ ಬಳಸಿಲ್ಲ. ಮಾತ್ರಾವೃತ್ತದ ಗೇಯ ಪದ್ಯಗಳು ಸಾಕಷ್ಟಿವೆ. ಧಾರವಾಡದ ಕನ್ನಡ ಭಾಷೆಯ ದೇಸೀ

ಮಾತ್ರಾ ಛಂದಸ್ಸಿನಲ್ಲಿ ತನ್ನ ಬೆಡಗನ್ನು, ಶೋಭೆಯನ್ನು ತೋರುತ್ತದೆ.

೧. ಹಿಗ್ಗುತರಲಿ ಬಿಡುಗಡೆ, ಕರಡಿ ಕುಣಿತ, ಯುದ್ಧ ಬಂತು ಮನೆಯವರೆಗೆ ಮೊದಲಾದವು ಚೆನ್ನಾಗಿ ಹಾಡಬಹುದು.

೨. ಕನ್ನಡದಪ್ಪನ ಕೋಲು ಮತ್ತು ಜೀವನ ಕಲ್ಯಾಣ - ಕೋಲು ಹಾಕುತ್ತ ಹಾಡಬೇಕು.

೩. ಸಮೃದ್ಧ ಸೌಭಾಗ್ಯ, ಸಕಲ, ವಸುಧಾ, ಕಿಮಪಿತತ್ - ಅಷ್ಟಪಟ್ಪದಿಗಳಾಗಿದ್ದರಿಂದ ವಿಚಾರ ಸ್ಪಷ್ಟತೆಗೆ ಮಹತ್ತ್ವ ಕೊಟ್ಟು ಗದ್ಯದ ಗತ್ತಿನಲ್ಲಿ ಓದಬೇಕು.

ಕಲ್ಪ : ಭಾಷೆ ದುಡಿಸಿಕೊಳ್ಳುವ ಬಗೆ ಮತ್ತು ಸಾಮಾಜಿಕ ರೋಗ, ಸಮಸ್ಯೆಗಳ ಪರಿಹಾರಕ್ಕೆ ಕವಿ ಸೂಚಿಸುವ ಸಂದೇಶಗಳು ಕವಿಯ ಮನೋಧರ್ಮ, ಕಲ್ಪನಾಶಕ್ತಿ ಹಾಗೂ ದೃಷ್ಟಿಕೋನ ಅವಲಂಬಿಸಿರುತ್ತವೆ.

೧. ಬೀದಿನಾಯಿ ರಾಧೆಗೆ, ಊರು ಮತ್ತು ಖಾಲ್ದಿಯಾ, ಸ್ವಾತಂತ್ರ ದೇವಿಗೆ ಎಂಬಲ್ಲಿ ಬೇಂದ್ರೆ ಕವಿ ದೃಷ್ಟಿಯ ವಿಶಿಷ್ಟ ಬಗೆ ಗುರುತಿಸಲು ಸಾಧ್ಯ.

ಜ್ಯೋತಿಷ್ಯ : ಋತು, ಹುಣ್ಣಿವೆ, ಅಮವಾಸ್ಯೆ, ಚಂದ್ರಕಲೆ, ಸೂರ್ಯಗತಿಗಳ ಅಭ್ಯಾಸ ಬೇಂದ್ರೆ ಮಾಡಿದ್ದರಿಂದ ಆ ಲಕ್ಷಣಗಳನ್ನು ಅನುಸರಿಸಿ ವಿಷಯ ವರ್ಣಿಸುತ್ತಾರೆ.

ಉಯ್ಯಾಲೆ ಕವನ-೬೮ 'ಶ್ರಾವಣದ ಹಗಲು' ಇಲ್ಲಿ ''ನನ್ನ ಬಾಳುವೆಯಹುದು ಶ್ರಾವಣದ ಹಗಲು'' ಎಂಬ ಕವನಕ್ಕೆ ಅರ್ಥ ಹಚ್ಚಬೇಕಾದರೆ-ಶ್ರಾವಣದಲ್ಲಿ ಅಸರಂತ ಮಳೆ, ಅದಕ್ಕೆ ಹಗಲು ಮತ್ತು ರಾತ್ರಿಯ ಭೇದ ಮಾಡುವದಿಲ್ಲ. ಇಂಥ ಮಳೆ ಕಷ್ಟಕ್ಕೆ ಕಾರಣ. ಬೇಂದ್ರೆಯವರ ಜೀವನದಲ್ಲೂ ಕಷ್ಟಗಳು ಧಾರಾಕಾರ ಮಳೆಯಂತೆ ಬಂದು ಹೋದವು ಎಂದರ್ಥ.

ಅಮರಮರಣ ಕವನ : ೬ ''ಕುಂಭಮಾಸದೀ ಗಾಳಿ ತಾನೆ ವೈತಾಳಿಯಾಗಿ ಬಂದು'' ಎಂಬ ಸಾಲಿಗೆ ಅರ್ಥ ಹಚ್ಚಬೇಕಾದರೆ-ಕುಂಭಮಾಸ=ಮಾಘಮಾಸ=ಜನೇವರಿ ತಿಂಗಳ ಸಾಮ್ಯ ಗೊತ್ತಿರುವುದು ಅವಶ್ಯ.

ನಿರುಕ್ತ : ನಿಘಂಟು ಮತ್ತು ನಿರುಕ್ತ ವಿಷಯವನ್ನು ಸ್ಪಷ್ಟಪಡಿಸುತ್ತವೆ. ನಿರುಕ್ತವು ನಿರ್ವಚನ, ನಿರಾಕಾರದ ಹಾದಿ. ವಿಶಿಷ್ಟ ರೀತಿಯಿಂದ ಅರ್ಥ ನಿಶ್ಚಯಿಸಬೇಕಾಗುತ್ತದೆ. ಬೇಂದ್ರೆಯವರ ಸಂಖ್ಯಾಶಾಸ್ತ್ರ ಭಾಷೆ ಕವನವಾದಾಗ ಅದನ್ನು ಅವರು ಕಂಡುಹಿಡಿದ ಸಿದ್ಧಾಂತದ ಚೌಕಟ್ಟಿನಲ್ಲಿಯೇ ತಿಳಿದುಕೊಳ್ಳಬೇಕಾಗುತ್ತದೆ. 'ಸಂಖ್ಯಾಂಕಿತ' ಕವನ-೯ ಬೇಂದ್ರೆ ನಿರುಕ್ತದ ಬಗೆ.

ಬೇಂದ್ರೆಯವರು ತಮ್ಮ ಕಾವ್ಯವನ್ನು ಭೋಗ ಕಾವ್ಯ ಮತ್ತು ಯೋಗಕಾವ್ಯ ಎಂದು ವಿಭಜಿಸುವುದು ಹಾಗೂ ಉದ್ಭವ ಕಾವ್ಯ ಲಕ್ಷಣ ಕಾಣುವುದು ೧೯೪೪ ರಿಂದ ೧೯೫೬ ರಲ್ಲಿಯೇ ಪ್ರಾರಂಭವಾಗಿತ್ತು ಎಂಬುದು ಕಂಡು ಬರುತ್ತದೆ. ೧೯೬೪ ರಿಂದ ಇನ್ನಷ್ಟು

ಸ್ಪಷ್ಟವಾಗುತ್ತ ಹೋಯಿತು.

"ಸೂರ್ಯಪಾನ" ಕವನ ಸಂಗ್ರಹದ ಒಟ್ಟು ಶಿಲ್ಪಕ್ಕೆ ಅನ್ವಯಿಸಿ ನೋಡಿದಾಗ ಬೇಂದ್ರೆಯವರ ಮನೋಧರ್ಮ ಸ್ಪಷ್ಟವಾಗುವುದು ಹೀಗೆ-

ಮನುಷ್ಯನ ಇರುವಿಕೆ (Existence) ಅವನ ಇಚ್ಛಾಬಲವನ್ನು ಅವಲಂಬಿಸಿರುತ್ತದೆ. ಬದುಕುವ ಇಚ್ಛೆ ಕಳೆದುಕೊಂಡರೆ, ಬಾಳುವುದು ಕಷ್ಟ. ನಮ್ಮ ಇರುವಿಕೆಯಲ್ಲಿ ಈಶ್ವರೇಚ್ಛೆ ಅಡಗಿರುತ್ತದೆ. ನಮ್ಮ ಜನನ ಮತ್ತು ಮರಣ ನಮ್ಮ ಆಧೀನವಲ್ಲ, ಜೀವದ-ಇಚ್ಛೆ, ಬಯಕೆ, ಬೇಡಿಕೆ, ಅಭೀಪ್ಸೆ ಪರಮಾತ್ಮ ಪೂರ್ಣಮಾಡುಬಹುದು ಅಥವಾ ಬಿಡಬಹುದು. ಅವನ ಮೇಲೆ ನಾವು ಕರಾರು ಹಾಕುವಂತಿಲ್ಲ, ಆದುದರಿಂದ ಬೇಂದ್ರೆಯವರು ೧೯೨೧ ರಿಂದ ತಮ್ಮ ಇಚ್ಛೆ ಪ್ರಕಟಿಸುತ್ತಾ ಹೋಗಿದ್ದಾರೆ.

"ಮಾಡುವುದು ಬಿಡುವದೂ ಕೂಡಿಹುದು ನಿನ್ನನ್ನು
'ಮಾಡು' 'ಬಿಡು' ನನ್ನ ಹಿತಬಂಧು (ಪರಮಾತ್ಮ) ನೀನು!
'ಮಾಡಿಬಿಡು' ಎಂದು ಮಾತಾಡದಲೆ ನಂಬಿರುವೆ
ಮಾಡಿ ಮಾಡಿಸುವವನೆ, ಬಲವ ನೀಡು!

-ಗರಿ - ಸಂಕಲ್ಪ - ಕವನ : ೧೨

ಎಂಬ ಸಾಲುಗಳು ಬೇಂದ್ರೆ ಕಾವ್ಯದ ಒಂದು ಆಯಾಮ. "ಸೂರ್ಯಪಾನ"ದಲ್ಲಿ ದೇಹ, ದೇಶ, ಕಾಲ, ಕಾವ್ಯ ಸಂದರ್ಭ, ಕಾವ್ಯಪರಿಕರ ಮತ್ತು ಕಾವ್ಯ ಭವಿಷ್ಯ ಕುರಿತು ಬೇಂದ್ರೆಯವರಲ್ಲಿದ್ದ ಪ್ರಬಲ ಇಚ್ಛಾಶಕ್ತಿಯ ಹೆಗ್ಗುರುತುಗಳಿವೆ. ಇವುಗಳ ಅಭ್ಯಾಸವು ಇಚ್ಛಾಶಕ್ತಿಯ ನೀರಡಿಕೆಯನ್ನು ಬೆಳೆಸುತ್ತದೆ ಹಾಗೂ ಸಂತೃಪ್ತಿಯನ್ನೂ ಕೊಡುತ್ತದೆ ಎಂಬುದು ನನ್ನ ಅನುಭವ. ಈ ಕಾವ್ಯಾನುಭವ ಎಲ್ಲರದೂ ಆಗಲಿ ಎಂಬ ಸದಿಚ್ಛೆ ಈ ಭೂಮಿಕೆಯ ಔಚಿತ್ಯ ಇಚ್ಛಾಶಕ್ತಿ ಪ್ರಬಲವಾಗಿದ್ದರೆ ಮಾತ್ರ ಇರುವಿಕೆ ಅರ್ಥಪೂರ್ಣವಾಗುತ್ತದೆ ಎಂಬುದು 'ಸೂರ್ಯಪಾನ' ಸಂಗ್ರಹದ ಸಂದೇಶ.

"ಬೇಂದ್ರೆ ಕುಟೀರ",
ಹುಬ್ಬಳ್ಳಿ - ೩೦
೧೮-೫-೨೦೦೭

ಡಾ|| ವಾಮನ ಬೇಂದ್ರೆ
ಸಹ ನಿರ್ದೇಶಕರು
ವರಕವಿ ಡಾ|| ದ. ರಾ. ಬೇಂದ್ರೆ
ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡಮಿ.

ಕಾರ್ಯಸ್ಥಳ : "ಬೇಂದ್ರೆ ಕುಟೀರ", ವಿಶ್ರಮ ಚೇತನ, ಗೋಕುಲ ರಸ್ತೆ ಹುಬ್ಬಳ್ಳಿ-೫೮೦ ೦೩೦. ದೂರವಾಣಿ : ೨೩೩೦೪೬೬

ಸೂರ್ಯಪಾನ : ಮತ್ತೆ ಅರಳುವ ಮುನ್ನ

'ಸೂರ್ಯಪಾನ' ಕವನ ಸಂಕಲನ ಮತ್ತೆ ಅರಳುವ ಮುನ್ನ ಈ ಸಂಕಲನದ ಆಂತರ್ಯವನ್ನು ಕುರಿತು ಕೆಲ ಹೊಸ ನೋಟಗಳನ್ನು ಅಭಿವ್ಯಕ್ತಗೊಳಿಸುವುದು ಅವಶ್ಯವೆಂಬ ದೃಷ್ಟಿಯಿಂದ ಈ ವಿಶ್ಲೇಷಣೆಯಲ್ಲಿ ತೊಡಗುತ್ತಿದ್ದೇನೆ. ಈ ಸಂಕಲನದ ಕೇವಲ ಹತ್ತು ಕವನಗಳನ್ನು ಮಾತ್ರ ನಾನು ಆಯ್ಕೆ ಮಾಡಿಕೊಂಡಿದ್ದೇನೆ. ಮಿಕ್ಕ ಕವನಗಳ ಹಾಗೂ ಈ ಸಂಕಲನದ ವೈಶಿಷ್ಟ್ಯವನ್ನು ಕುರಿತು ಈ ಕೃತಿಯ ಸಂಪಾದಕರೂ, ಬೇಂದ್ರೆ ಸಂಶೋಧನ ಸಂಸ್ಥೆಯ ಸಹನಿರ್ದೇಶಕರೂ, ವರಕವಿ ದ. ರಾ. ಬೇಂದ್ರೆಯವರ ಸುಪುತ್ರರೂ ಆದ ಡಾ|| ವಾಮನ ಬೇಂದ್ರೆಯವರು ತಮ್ಮ ಭೂಮಿಕೆಯಲ್ಲಿ ವಿವರಿಸಿದ್ದಾರೆ.

'ಸೂರ್ಯಪಾನ' ಈ ಕೃತಿಯು ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಅರವತ್ತು ವಸಂತಗಳನ್ನು ದಾಟಿ ಅರವತ್ತೊಂದರಲ್ಲಿ ಪದಾರ್ಪಣ ಮಾಡಿದ ಸವಿನೆನಪಿಗೆಂದು ಪ್ರಕಟಿಸಿದ, ೬೦ ಕವನಗಳ ಸಂಗ್ರಹವಾಗಿ ಹೊರಹೊಮ್ಮಿದ ಒಂದು ಕವನಸಂಕಲನವಾಗಿದೆ. ಅನಂತರ ಈ ಸಂಕಲನವು ಇದೇ ವರ್ಷದಲ್ಲಿ ಪ್ರಕಟಗೊಂಡ ಇನ್ನೂ ನಾಲ್ಕು ಸಂಕಲನಗಳಾದ 'ಹೃದಯ ಸಮುದ್ರ', 'ಮುಕ್ತಕಂಠ', 'ಚೈತ್ಯಾಲಯ' ಹಾಗೂ 'ಜೀವಲಹರಿ' ಇವುಗಳೊಡನೆ ಸಂಗ್ರಹಿತವಾಗಿ, ಪಂಚ ಕವನಗುಚ್ಛವಾಗಿ ''ಅರಳು ಮರಳು'' ಶಿರೋನಾಮೆ ಹೊತ್ತು ಪ್ರಕಟಗೊಂಡಿತ್ತು. ಈ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕ್ಯಾಡೆಮಿಯ ಪ್ರಶಸ್ತಿಯೂ ಲಭ್ಯವಾಯಿತು. ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಅರವತ್ತು ವರುಷಗಳನ್ನು ದಾಟಿದ್ದರೂ ಅವರ ಕಾವ್ಯೋದ್ಯೋಗ ಅರಳುತ್ತಾ ಮರಳುತ್ತಾ ಮತ್ತೆ ಮತ್ತೆ ಅರಳುವ-'ಅರಳಿ ಮರಳುವ' ಪ್ರಕ್ರಿಯೆಯಲ್ಲಿ ನಿರಂತರವಾಗಿ ನಿರತವಾಗಿದೆ ಎಂದು ಇದು ಋಜುವಾತು ಪಡಿಸಿದೆ. ಇಂಥ ಮಹತ್ವದ ಸಂಕಲನದ ಒಂದು ಭಾಗವಾದ 'ಸೂರ್ಯಪಾನ' ಕೃತಿಯನ್ನು ಕುರಿತು ಪರಾಮರ್ಶಿಸುವಾಗ, ಕವಿಯ ಕ್ರಾಂತದರ್ಶನ ಪ್ರಜ್ಞೆಯ ಪ್ರಖರತೆಯ ಅರಿವಾಗುತ್ತದೆ. ವಾಸ್ತವವಾಗಿ 'ಸೂರ್ಯಪಾನ'ದಲ್ಲಿ ಇವರ 'ಹೃದಯದಾಕೂತಿಗಿದೆ ಕಣ್ಣು ಮೇಗೆ' ಎಂದು ಅವರ ಮಾತಿನಲ್ಲೇ ಹೇಳಬೇಕಾಗುತ್ತದೆ. 'ಸೂರ್ಯಪಾನ' ಶೀರ್ಷಿಕೆಯ ಕವನದಲ್ಲಿ ಬೇಂದ್ರೆಯವರು ಹೇಳುವಂತೆ

''ಏನಿದರ ಔನ್ನತ್ಯ, ಏನಿದರ ಔದ್ಧತ್ಯ
ಕುಕ್ಕಿಸುವ ಕಣ್ಣುಗಳ ದಿಟ್ಟಿಸುವುದು
ಬಾನಗಣ್ಣಿನ ಬಿಸಿಯ ಹಸಿಯಾರದಲೆ ಕುಡಿದು
ಬೆಳಕ ನೀರಡಿಕೆಯನು ಹುಟ್ಟಿಸುವುದು''

ಈ ಕವನ ಸಂಕಲನದಲ್ಲಿಯ ಎಲ್ಲ ಕವನಗಳೂ ಒಂದಲ್ಲ ಒಂದು ರೀತಿಯಲ್ಲಿ ''ಸೂರ್ಯಪಾನ''ದ ಸಂಕೇತವನ್ನೇ ಹೊತ್ತು 'ಬಾನಗಣ್ಣಿನ ಬಿಸಿಯ ಹಸಿಯಾರದಲೆ ಕುಡಿದು, ಬೆಳಕ ನೀರಡಿಕೆಯನು ಹುಟ್ಟಿಸುವುದು' ಎಂಬಂತಿವೆ. ಅವು ''ವಿಶ್ವದೀಪಕ ದೃಷ್ಟಿ ಮೂಡುವಂತೆ'' ಸಾಗುತ್ತವೆ. ಇದು ಈ ಸಂಕಲನದಲ್ಲಿಯ ಕವನಗಳ ವೈಶಿಷ್ಟ್ಯ.

ದ. ರಾ. ಬೇಂದ್ರೆಯವರು 'ಸೂರ್ಯಪಾನ' ಸಂಕಲನಕ್ಕೆ ಮುನ್ನುಡಿಯನ್ನು ಬರೆಯುತ್ತಾ

ಹೇಳುತ್ತಾರೆ : ''ಇಳಿ ವಯಸ್ಸಿನ ಅಶಕ್ತತೆಯ ಹೆಜ್ಜೆಗುರುತು ಇದರಲ್ಲಿಲ್ಲ ಎಂದು ನನಗೆ ತೋರುತ್ತದೆ'' ಎಂದು. ಅವರ ಈ ಕವನಗಳು ಯಾವ ಅಶಕ್ತತೆಯನ್ನು ತೋರುತ್ತಿಲ್ಲ ಎಂಬುದಲ್ಲದೆ ವಾಸ್ತವವಾಗಿ, ಅರವತ್ತರ ಹೊಸ್ತಿಲಲ್ಲಿ ನಿಂತ ಈ ಕವಿ, ಆರು ಹತ್ತರ ಪ್ರಖರವಾದ ರವಿ ರಶ್ಮಿಯನ್ನು ವಿಶ್ವದ ತಮದ ನಿವಾರಣೆಗೆಂದು ಪಸರಿಸಿದ್ದಾರೆ. ಮೇರೆಯಿಲ್ಲದ ಅವರ ಮೇರು ಪ್ರತಿಭೆ, ಇಲ್ಲಿ ಅರಳಿದೆ, ಮರಳಿಮರಳಿ ಅರಳಿದೆ; ಮಾನವ ಜೀವನವನ್ನು ವಿಕಸನಗೊಳಿಸುತ್ತಾ ಸಾಗಿದೆ. ಇಲ್ಲಿ ಕಾಣುವುದು ಅವರ ''ಅಶಕ್ತತೆಯ ಹೆಜ್ಜೆ ಗುರುತಗಳಲ್ಲ''. ಅವು ''ಸಶಕ್ತತೆಯ ಭೀಮಬಲದ ಹೆಗ್ಗುರುತುಗಳು''.

ಈ ಸಂಕಲನಕ್ಕೆ ಇನ್ನೂ ಎರಡು ಮಹತ್ತ್ವದ ಆಯಾಮಗಳಿವೆ. ಒಂದೆಂದರೆ, ಬೇಂದ್ರೆಯವರೇ ತಮ್ಮ ಮುನ್ನುಡಿಯಲ್ಲಿ ಹೇಳಿರುವಂತೆ- ''ಮನೆಯ ಹಂಬಲ 'ಬಾರೋ ಸಾಧನಕೇರಿಗೆ' ಎಂದು ಓಗರೆಯುತ್ತದೆ''. ಬೇಂದ್ರೆಯವರು ಸೊಲ್ಲಾಪುರದಲ್ಲಿದ್ದಾಗಲೇ 'ಸೂರ್ಯಪಾನ' ಪ್ರಕಟವಾಗಿದ್ದರೂ, ಅವರು ಆಗ ಅಲ್ಲಿಂದ ಸೇವಾನಿವೃತ್ತರಾಗಿ ಧಾರವಾಡದ ಸಾಧನಕೇರಿಗೆ ಬರುವ ಸಿದ್ಧತೆಯಲ್ಲಿದ್ದರು. 'ಬಾರೋ ಸಾಧನಕೇರಿಗೆ, ಮರಳಿ ನಿನ್ನೀ ಊರಿಗೆ' ಎಂದು ಕವಿವಾಣಿ ನುಡಿಯುತ್ತಿತ್ತು. ಅಂತೆಯೇ ಧಾರವಾಡಕ್ಕೆ ಮರಳುವ ಹಂಬಲದಲ್ಲಿ ಅವರಿದ್ದರು. ಈ ''ಮರಳು''ವಿಕೆಯ ಹಂಬಲ ಇಲ್ಲಿ ಅರಳಿ ನಿಂತಿದೆ. ಎರಡನೆಯ ಮಹತ್ತ್ವದ ಅಂಶವೆಂದರೆ, ಈ ಕವನ ಸಂಕಲನ ಪ್ರಕಟವಾದದ್ದು ಕರ್ನಾಟಕ ಏಕೀಕರಣದ ಕನಸು ನನಸಾಗುವ ಸಂಧಿ ಕಾಲದಲ್ಲಿದ್ದಾಗ. ಬೇಂದ್ರೆಯವರೇ ತಮ್ಮ ಮುನ್ನುಡಿಯಲ್ಲಿ ಹೇಳಿರುವಂತೆ ''ಕನ್ನಡ ತಾಯಿಯ ಪ್ರಾಣಪ್ರತಿಷ್ಠೆ ಬೇಗನೆ ಆಗಲಿದೆ. ಪೀಠ ಸಿದ್ಧವಾಗಿದೆ ಗುಡಿಯು ರೂಪುಗೊಂಡಿದೆ. ಕಳಸ ಕಂಗೊಳಿಸುತ್ತಿದೆ. ಪ್ರಾಕಾರದ ಹರವಿನ ಆಕಾರವು ಮಸಕಾಗಿ ಮೂಡಿದೆ. ಇನ್ನು ಮುಂದಾಗಲಿರುವ ಭಜನೆ, ಪೂಜನಗಳಲ್ಲಿ ಪರ್ವ-ಸಮಾರಂಭಗಳಲ್ಲಿ ಕನ್ನಡ ಸುಹೃತ್ ಭಾವವು ಸುಖ-ಮುಖವಾಗಿ ಅರಳುವದೆಂದು ಈ 'ಸೂರ್ಯಪಾನ'ವನ್ನು ರಸಿಕ ಭೃಂಗಗಳ ಪದಾರ್ಪಣಕ್ಕೆ ಒಡ್ಡುತ್ತಿದ್ದೇನೆ'' ಎಂದು. ರಾಷ್ಟ್ರದಲ್ಲಿ ಗಡಿಗಳ ಪುನರ್ವಿಂಗಡಣೆಯಾಗಿ, ಕರ್ನಾಟಕ ರಾಜ್ಯ ರಚನೆಗೆ ಸಿದ್ಧತೆಗಳು ನಡೆದ ವರ್ಷದಲ್ಲಿ 'ಸೂರ್ಯಪಾನ'ದ ಪ್ರಕಟಣೆಯಾಗಿರುವುದು ಚಾರಿತ್ರಿಕವಾಗಿ ಗಮನಾರ್ಹ ಸಂಗತಿಯಾಗಿದೆ. ಕರ್ನಾಟಕ ರಾಜ್ಯ ''ಅರಳು''ವಿಕೆಗೆ ಸಿದ್ಧಗೊಳ್ಳುತ್ತಿದ್ದಾಗ, 'ಸೂರ್ಯಪಾನ' ಅರಳಿದ್ದು ಒಂದು ಯೋಗಾಯೋಗವೆಂದೇ ಹೇಳಬೇಕಾಗುತ್ತದೆ.

ಈ ಪ್ರಾಸ್ತಾವಿಕ ಮಾತುಗಳನ್ನಾಡಿದ ನಂತರ, 'ಸೂರ್ಯಪಾನ'ದ ಅಂತರಂಗದ ಆಕೂತಿಯ ದರ್ಶನವನ್ನು ಪಡೆಯಲು ಉದ್ಯುಕ್ತರಾಗೋಣ.

ಈ ಕವನ ಸಂಕಲನದಲ್ಲಿಯ ೬೦ ಕವನಗಳಲ್ಲಿ ಇಲ್ಲಿಯ ವಿಶ್ಲೇಷಣೆಗೆ ಹತ್ತು ಕವನಗಳನ್ನು ಮಾತ್ರ ಆಯ್ದುಕೊಂಡಿದ್ದೇನೆ. ಅವುಗಳಲ್ಲಿ ಐದು ಕವನಗಳು ಗಾಂಧೀಜೀ ಕುರಿತಾದವುಗಳಾಗಿದ್ದರೆ, ಇನ್ನೈದು ಕವನಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ ಹಾಗೂ ಮಾನವ ಜಾತಿಗೆ ಸಂಬಂಧ ಪಟ್ಟವೆ. ಅವು ಇಂತಿವೆ - (೧) ಊರು ಮತ್ತು ಖಾಲ್ದಿಯಾ (೨) ಮಧುವಾತಾ ಋತಾಯತೇ (೩) ಓ ಚಾರ್ವಾಕಾ! (೪) ಯುದ್ಧ ಬಂತು ಮನೆಯವರೆಗೆ ಹಾಗೂ (೫) ಸ್ವಾತಂತ್ರ್ಯದೇವಿಗೆ. ಮೊದಲು ರಾಷ್ಟ್ರಪಿತ ಗಾಂಧೀಜಿ ಕುರಿತಾದ ಕವನಗಳನ್ನು ಪರಿಶೀಲಿಸೋಣ.

ಗಾಂಧೀಜಿ ಕುರಿತಾದ ಐದು ಕವನಗಳಲ್ಲಿ ನಾಲ್ಕು ಶ್ರದ್ಧಾಂಜಲಿ ಕವನಗಳು ಹಾಗೂ ಒಂದು ಕವನ- ಬಡತನ ಹಾಗೂ ಗಾಂಧಿಗೆ ಸಂಬಂಧಿಸಿದ ಕವನ- ದರಿದ್ರ ನಾರಾಯಣ. ಬೇಂದ್ರೆಯವರು ಗಾಂಧೀಜಿಗೆ ಶ್ರದ್ಧಾಂಜಲಿಯನ್ನು ಅತ್ಯಂತ ವಿಶಿಷ್ಟವಾದ ರೀತಿಯಲ್ಲಿ ಅರ್ಪಿಸುತ್ತಾರೆ. "ಕೇಳಿರೊಂದು ಸೋಜಿಗ" ಅಂಥ ಒಂದು ಕವನ. ಈ ಕವನದ ಪಲ್ಲವಿ ಈ ರೀತಿಯಿದೆ :

"ಹೀಗು ಉಂಟು ಈ ಜಗ
ಕೇಳಿರೊಂದು ಸೋಜಿಗ!"

ಜಗತ್ತು ಹೀಗೂ ಇದೆ; ಈ ವಿಸ್ಮಯವನ್ನು ಕೇಳಿರಿ ಎಂದು ಶ್ರದ್ಧಾಂಜಲಿಯನ್ನು ಪ್ರಾರಂಭಿಸಿ, ಹೇಳುತ್ತಾರೆ :

"ಗಾಂಧಿದೇಹ ಬಿಟ್ಟರಂತೆ
ಜನರು ಅದನು ಸುಟ್ಟರಂತೆ
ಹೌದು, ಗಾಂಧಿ ಸತ್ತರಂತೆ
ದಿನದ ದಿನದ ದಿನದ ಹಾಗೆ
ಗಾಂಧಿಜೀಗೆ ಬಿನದವಾಗೆ
ಪ್ರಾರ್ಥನೆಗೇ ಬಂದರಂತೆ
ಆಗದವರು ಕೊಂದರಂತೆ
ಗಾಂಧಿಯವರು ಬಿದ್ದರಂತೆ
ನೋಡುವವರು ಇದ್ದರಂತೆ
ಪಾಪ ಪಾಪ, ಅಯ್ಯೋ ಪಾಪ
ಇದಕು ಇರಲಿ ಉಶ್ಶಾಪ
(ಆದರೂನು) ಅಂತು ಒಮ್ಮೆ ಸತ್ತರಂತೆ!
ಕೇಳಿರೊಂದು ಸೋಜಿಗ!"

ಎಲ್ಲವೂ ಅಂತೆ-ಕಂತೆ. ಗಾಂಧಿ ದೇಹಬಿಟ್ಟರಂತೆ, ಜನರು ಅದನು ಸುಟ್ಟರಂತೆ, ಹೌದು, ಗಾಂಧಿ ಸತ್ತರಂತೆ! ಗಾಂಧೀ ಸಾವು, ಬೇಂದ್ರೆಯವರ ಕವಿಮನಕ್ಕೆ 'ಪ್ರೇಮಕೊಂದು ಆಹುತಿ!' ಕೊಟ್ಟದ್ದು ಎಂದಿದ್ದರೂ ಅವರ ಪ್ರಶ್ನೆಯೇ ಬೇರೆ. ಅದೆಂದರೆ, "ಸಾವು ನೋವು ಮೀರಿದಾ, ಗಾಂಧಿ ಹೇಗೆ ತೀರಿದಾ?" ಎಂಬುದು.

"ಬಾಳು ಜಗವೆ ಬಾಳಿಲೋ
ಪ್ರೇಮದಿಂದ ತಾಳಿಲೋ
ಎಂದು ಕೊನೆಗೆ ಸಾರಿದಾ
ಗಾಂಧಿ ಸ್ವರ್ಗಕೇರಿದಾ
ಅದನೆ ಇಲ್ಲಿ ತರುವನೋ?
ಮತ್ತೆ ಮರಳಿ ಬರುವನೋ?
ಏಕೆ ಹರಟೆ? ಏಕೆ ಪ್ರಶ್ನೆ?
ಬೇಕು ಜೀವದುತ್ತರ,
ಜೀವನದೊಳು ಎತ್ತರ."

ಪ್ರೇಮ ಸಂದೇಶ ನೀಡಿದ ಗಾಂಧಿ ಸತ್ತರು, ಸ್ವರ್ಗ ಸೇರಿದರು. ಆದರೆ, ಆ ಸ್ವರ್ಗವನ್ನು ಇಲ್ಲಿಗೆ ತರುವರೇ? ಎಂಬ ಪ್ರಶ್ನೆ ಬೇಂದ್ರೆಯವರದು. ಇದಕ್ಕೆ ಜೀವದುತ್ತರ ಬೇಕು, ಅದು ಪಡೆದಾಗ ಜೀವನದೊಳು ಎತ್ತರಕ್ಕೆ ಏರಬಹುದು ಎಂಬ ಅಭೀಪ್ಸೆ ಅವರದು. ಆದರೆ-

"ಗಾಂಧಿ ಅಲ್ಲೆ, ನಾವು ಇಲ್ಲೆ
ಹಳೆಯವಾದ ನಡೆದರೆ
ಗಾಂಧಿ, ರಾಮ, ಕೃಷ್ಣ, ಅಲ್ಲಾ
ಕ್ರೈಸ್ತ, ಬುದ್ಧ, ಎಲ್ಲ ಎಲ್ಲಾ
ಪ್ರೇಮ ಮಾರ್ಗ ಹಿಡಿದರೆ?
ಒಂದೆ, ಶಾಂತಿ ಪಡೆದರೆ?
ಕೇಳಿರೊಂದು ಸೋಜಿಗ;"

ಗಾಂಧಿ, ರಾಮ, ಕೃಷ್ಣ ಅಲ್ಲಾ, ಕ್ರೈಸ್ತ ಬುದ್ಧ ಎಲ್ಲ ಎಲ್ಲಾರೂ ಪ್ರೇಮಮಾರ್ಗ ಹಿಡಿದರೂ, ಶಾಂತಿ ಪಡೆದರೆ? ಅವರು ಬಯಸಿದ ಪ್ರೇಮಮಾರ್ಗದ ಶಾಂತಿ ವಿಶ್ವದಲ್ಲಿ ನೆಲೆಸಿದೆಯೇ? ಇದು ನಿಜವಾದ ಸೋಜಿಗ! ಜನ ಪ್ರೇಮಮಾರ್ಗದಲ್ಲಿ, ಶಾಂತಿಗಾಗಿ ನಿರಂತರ ಹೋರಾಟ ಮಾಡದೆ, ಯಾರೊ ಬಂದು ಶಾಂತಿ ತರುವರೆಂದು ಕೈಕಟ್ಟಿ ಕುಳಿತರೆ, ಆ 'ಪರಮ ಪುರುಷರು' ಸತ್ತನಂತರವೂ ಅದೇ ಹಳೆಯ ವಾದ ಮುಂದುವರಿಯುತ್ತದೆ. ಪ್ರೇಮ, ಶಾಂತಿ ಮರೀಚಿಕೆಯಾಗಿಯೇ ಪ್ರಶ್ನಾರ್ಥಕವಾಗಿ ಉಳಿಯುತ್ತವೆ. ಗಾಂಧೀಯವರಂತೆ ಸಾಕ್ರೆಟೀಸನಂತೆ ಇವರನ್ನು 'ಪ್ರೇಮ ಕೊಂದು ಆಹುತಿ'ಯಂದು ನೀಡುತ್ತೇವೆ. ಅವರಂತೂ ಹುತಾತ್ಮರಾಗಿ, ತದನಂತರ:

"ಇನ್ನು ಗುಂಡು ತಾಕದಲ್ಲಿ
ಕೊಲೆ ಪಾತಕ ಸೋಕದಲ್ಲಿ
ದೈಶ್ಯತೀರ ಅದೃಶ್ಯದಲ್ಲಿ
ಆದರಿಲ್ಲೆ ಭೂಮಿಯಲ್ಲಿ
ನಡೆವುದದರ ಪರಿಣತಿ
ಗಾಂಧೀಗಂಧಸಂಗತಿ.
ಕೇಳಿರೊಂದು ಸೋಜಿಗ!'
ದೇವನುಂಟು ದೈವವುಂಟು
ಅದಕು ನಮಗು ಇಹುದು ನಂಟು
ದುರ್ವಾಸನೆ ನಾರದಲ್ಲಿ
ಅಹಂಕಾರ ಸೇರದಲ್ಲಿ
ವಿಶ್ವಹೃದಯ ಹಾರದಲ್ಲಿ
ಪ್ರೇಮದೊಂದು ರತ್ನವು
ಅದಕೆ ವಿಶ್ವಯತ್ನವು.
ಅದೇ ನಮ್ಮ ನಿಮ್ಮ ಗುರಿಯು
ಅದು ಇಲ್ಲದೆ ವಿಶ್ವ ಉರಿಯು

ದ್ವಂದ್ವ ಮೀರಿದೊಂದಿದೆ
ದ್ವಂದ್ವ ಎಂದೊ ಕೊಂದಿದೆ
ಸಾವಿನಲ್ಲಿ ಸಾವಿದೆ
ನೋವಿನಲ್ಲಿ ನೋವಿದೆ.
ಸಾವು ನೋವು ಮೀರಿದಾ
ಗಾಂಧಿ ಹೇಗೆ ತೀರಿದಾ?
ಕೇಳಿರೊಂದು ಸೋಜಿಗ!''

ಬೇಂದ್ರೆಯವರ ಅನ್ವೇಷಣೆಯೆಂದರೆ, ದುರ್ವಾಸನೆ ನಾರದ, ಅಹಂಕಾರ ಸೇರದ, ವಿಶ್ವ ಹೃದಯ ಹಾರದ, ಪ್ರೇಮದೊಂದು ರತ್ನಕ್ಕಾಗಿ ವಿಶ್ವಯತ್ನ. ಅದೇ ನಮ್ಮ-ನಿಮ್ಮ ಗುರಿಯಾಗಬೇಕೆಂಬ ಹೆಬ್ಬಯಕೆ ಅವರದು. 'ಅದು ಇಲ್ಲದೆ ವಿಶ್ವ ಉರಿಯು'. ಆದರೆ, ಬೇಂದ್ರೆಯವರನ್ನು ಕಾಡುವ ಪ್ರಶ್ನೆ- ''ಸಾವು ನೋವು ಮೀರಿದಾ; ಗಾಂಧಿ ಹೇಗೆ ತಿರಿದಾ?'' ಇದುವೆ ಸೋಜಿಗ. ಗಾಂಧಿಜೀಯ ಅಮರತ್ವವನ್ನು ಬೇಂದ್ರೆ ಹೀಗೆ ಚಿತ್ರಿಸಿದ್ದಾರೆ. ಇದು ಅವರ ಭಾವ ಶ್ರದ್ಧಾಂಜಲಿ.

ಇನ್ನು ಗಾಂಧೀಜಿ ಕುರಿತಾದ ಎರಡನೆಯ ಕವನದ ಶೀರ್ಷಿಕೆಯೇ - ''ಶ್ರದ್ಧಾಂಜಲಿ'' ಇಲ್ಲಿಯ ವಿನೂತನ ನೋಟ ಅಧ್ಯಯನಾರ್ಹ.

''ಹಿಂಸೆ ಕೊನೆಗಹಿಂಸೆಯನ್ನು ಗುಂಡು ಹಾಕಿ ಕೊಂದಿತೋ?
ತನ್ನ ಕೊಲೆಯ ಕೊನೆಗಾಣಿಸಿ ಇವಗೆ ಶರಣು ಬಂದಿತೋ?
'ಅಯ್ಯೊ ಇವನು ಅಮರ, ನಾನೆ ತಾನೆ ಸತ್ತೆ ಎಂದಿತೋ?' 'ನಾನೆ ಸತ್ತೆ' ಎಂದಿತೋ?''

ನಥುರಾಮ ಗೋಡ್ಸೆ ಇವನು ಗಾಂಧೀಜಿಗೆ ಗುಂಡಿಟ್ಟು ಕೊಂದ. ಇದನ್ನು ಸಂಕೇತಿಸಿ ಸಾರ್ವತ್ರಿಕಗೊಳಿಸಿದ ಮಹಾಕವಿ ಬೇಂದ್ರೆ ಕೇಳುತ್ತಾರೆ ''ಹಿಂಸೆ ಕೊನೆಗೆ ಅಹಿಂಸೆಯನ್ನು ಗುಂಡು ಹಾಕಿ ಕೊಂದಿತೋ?'' ಎಂದು. ನಥುರಾಮ ಗೋಡ್ಸೆ ಹಿಂಸೆಯ ಜೀವಂತ ಮೂರ್ತಿಯಾಗಿ ಸಂಕೇತಗಳನ್ನು ಕೊಟ್ಟು ಈ ಪ್ರಶ್ನೆಯನ್ನು ಕೇಳುತ್ತಾರೆ. ಇದಕ್ಕೆ ಉತ್ತರ ಬಹಳ ಮಾರ್ಮಿಕವಾಗಿದೆ. ಹಿಂಸೆಯು ತಾನು ಮಾಡಿದ ಈ ಕೊಲೆಯನ್ನು ಕೊನೆಗಾಣಿಸಿ, ಅಹಿಂಸೆಯ ಮೂರ್ತಿಗೇ ಶರಣು ಬಂದು, ತನ್ನನ್ನು ತಾನೇ ಕೇಳಿಕೊಂಡಿತು- 'ಅಯ್ಯೊ ಇವನು ಅಮರ, ನಾನೆ ತಾನೆ ಸತ್ತೆ' ಎಂದು. ಹಿಂಸೆ ಅಹಿಂಸೆಯನ್ನು ಕೊಂದಾಗ ಆದದ್ದು ಹಿಂಸೆಯ ಸಾವು. ಅಮರ ಅಹಿಂಸೆಗೆ ಸಾವು ಎಲ್ಲಿಯದು? ಅಂತೆಯೇ ಹಿಂಸೆ ತನಗೆ ತಾನೇ ಹೇಳಿಕೊಳ್ಳುತ್ತದೆ - 'ನಾನೇ ಸತ್ತೆ' ಎಂದು. ಈ ಮಹಾನ್ ಪರಿಕಲ್ಪನೆಯನ್ನು ಮಹಾಕವಿ ಬೇಂದ್ರೆ ಮಾತ್ರ ಕೊಡಬಲ್ಲರು.

'ಶ್ರದ್ಧಾಂಜಲಿ'ಯಲ್ಲಿ ಗಾಂಧಿಜೀ ಕುರಿತು ಬೇಂದ್ರೆ ನುಡಿದಿರುವ ನುಡಿಗಳು ಅಪ್ರತಿಮವಾಗಿವೆ, ಅನುಪಮವಾಗಿವೆ, ಅನನ್ಯವಾಗಿವೆ. 'ಗಾಂಧಿ ದೇಹ ಸುಟ್ಟ ಬೆಳಕು, ಜಗದ ತಮವ ಕಳೆದಿದೆ', 'ಗಾಂಧಿ ಗಂಧ ದಿಗ್-ದಿಗಂತ ಕೀರ್ತಿ ರೂಪ ತಳೆದಿದೆ'. ಬದುಕಿದ್ದಾಗಲೂ ತಮ್ಮ ಬೆಳಕಿನಿಂದ ಜಗದ ತಮವ ಕಳೆದ ಗಾಂಧೀಜಿ, ಸತ್ತ ಮೇಲೆ, ಅವರ ದೇಹವನ್ನು ಸುಟ್ಟಾಗ, ಹೊರಹೊಮ್ಮಿದ ಬೆಳಕು ಕೂಡ ವಿಶ್ವದ ಅಂಧಕಾರವನ್ನು ನೀಗುವ ಕಾರ್ಯದಲ್ಲಿ ತೊಡಗುತ್ತದೆ

ಎಂಬುದು ಬೇಂದ್ರೆ ದೃಷ್ಟಿ. ಈ ದೇಹವನ್ನು ಸುಟ್ಟಾಗ ಬಳಸಿದ ಗಂಧದ ಕಟ್ಟಿಗೆಯ ಸುಗಂಧವು, ದಿಗ್‌ದಿಗಂತದಲ್ಲಿ ಕೀರ್ತಿರೂಪವನ್ನು ತಾಳಿ, ಚಿರಂತನತೆಯನ್ನು ಪಡೆದಿದೆ. ಅಂತೆಯೇ ತೀರ್ಥರೂಪನಾದ ಗಾಂಧಿಯು "ತೀರ್ಥಗಳ ಪವಿತ್ರ ಮಾಡಿದಂಥವನು; 'ಸೋಲನ್ನೆಲ್ಲ ಗೆಲವಿಗೊಲಿಸಿ ಮುಕ್ತನಾದ ಭೂಪನು!' ಇಂಥ ಗಾಂಧೀಜ್ಯೋತಿ, ಬೇಂದ್ರೆಯವರ ಮಾತಿನಲ್ಲಿ :

'ಬತ್ತಿ ಸುಟ್ಟು ಹೋದರೇನು ಬೆಳಕು ನಂದಿತೆಂಬರೆ?
ಹಾಕಿ ಬತ್ತಿ ದೀಪವೆತ್ತಿ ಇರುವ ಜ್ಯೋತಿ ಕಾಂಬರೆ!
ಎಣ್ಣೆ ತೀರಿತನ್ನ ಬೇಡಿ. ಬೇರೆ ನೇಹ ತುಂಬಿರೆ-ಬೇರೆ ನೇಹ ತುಂಬರೆ?'

ಗಾಂಧಿ ಸತ್ತರೂ, ಆ ಬೆಳಕು ನಂದುವದಿಲ್ಲ. ಅದು ನಂದದ ನಂದಾದೀಪ. ಬೇರೆ ಬತ್ತಿಯನ್ನು ಹಾಕಿ, ಆ ದೀಪದಲ್ಲಿಯ ಜ್ಯೋತಿಯನ್ನು ನಿರಂತರವಾಗಿಸುವ ಕರ್ತವ್ಯ ಮಾನವ ಕುಲದ್ದು. ಹೊಸ ಎಣ್ಣೆ ಹಾಕಬೇಕು, ಆ ಅಮರ ಜ್ಯೋತಿ ಬೆಳಗುತ್ತಲೇ ಇರುವಂತೆ ಕಾಯುವ ಧರ್ಮ ನಮ್ಮದು. ಬೇಂದ್ರೆಯವರ ಮಾತಿನಲ್ಲೇ ಹೇಳಬೇಕಾದರೆ "ಆರೋದಲ್ಲ ಈ ಆರತಿ".

ಇನ್ನು ಮೂರನೆಯ ಕವನ, 'ಅಮರ ಮರಣ'. ಹದಿನಾಲ್ಕು ಚತುಷ್ಪದಿಗಳ ಕವನ ಇದು. ಈ ಕವನದ ಪ್ರಾರಂಭ ಹೀಗಿದೆ- 'ಆ ಯುಗಾದಿ ಬರುವಂತೆ ಮರಳಿ ಓ ಶ್ರಾದ್ಧದಿನವೆ ಬಂದೆ, ಮರೆತ ಮರಣವನು ನೆನೆದ ಮನದಿ ಚೈತನ್ಯವನು ತಂದೆ'. 'ಯುಗಯುಗಾದಿ ಕಳೆದರೂ, ಯುಗಾದಿ ಮರಳಿ ಬರುತಿದೆ, ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ' - ಎಂದು ಹೊಸ ವರುಷಕ್ಕೆ ಹೊಸಗೀತೆಯ ಮೂಲಕ ಹೊಸ ಚೈತನ್ಯವನ್ನು ಕೊಟ್ಟ ಬೇಂದ್ರೆ, ಗಾಂಧಿ ಶ್ರಾದ್ಧದ ದಿನದಂದು ಈ 'ಯುಗಾದಿ ಬರುವಂತೆ ಮರಳಿ'ದನೆಂಬ ಹೊಸ ರೂಪಕವನ್ನು ಗಾಂಧಿ ನೆನಪು ತರುತ್ತದೆ ಎಂದು ಗಾಂಧಿಯನ್ನು ನೆನೆಯುತ್ತಾರೆ. ಗಾಂಧಿ ಮರಣದ ವರ್ಣನೆಯಲ್ಲಿ ಒಂದು ನವತೆಯಿದೆ. ಗಾಂಧಿ ತತ್ತ್ವಗಳನ್ನು ಸಾಧನೆಗಳನ್ನು ಬಣ್ಣಿಸುವ ರೀತಿ ಇದಾಗಿದೆ - 'ಇವನ ವರ್ಣನೆಯೆ ಅಮರವಹದು, ಇಂಥವನು ಮರ್ತ್ಯನೆಂತು?'. ಈ ಕವನದಲ್ಲಿ ಕವಿ, ಗಾಂಧಿಯನ್ನು ಗುರುತಿಸುವ ರೀತಿಯೇ ವಿಭಿನ್ನವಾಗಿದೆ. "ಆಡು ಹಾಲನುಂಡವನು ರೌದ್ರ ಕಾದಾಡಿದಂತೆ ಆನೆ', 'ಕೈಯಲ್ಲಿ ಕೋಲು, ಅದಕ್ಕಿಲ್ಲ ಸೋಲು, ಗೆಲವೊಂದೆ ಬಲ್ಲ ಅಧಟ', 'ಸ್ವಾತಂತ್ರ್ಯದುಪ್ಪು ಸಾಗರವವರೆಗೆ ಮುಟ್ಟಿಸುವ ಪಂಥ ತಳೆದ,' 'ಮೃತ್ಯು ಧ್ಯಾನವೇ ಮಾಡುತಿರುವ ರೌದ್ರಿಕರ ನಡುವೆ ನಡೆದ', 'ಸತ್ಯದನ್ನವನೆ ಉಂಡು ಬಾಳಿ ಎನ್ನುವುದು ಪುರುಷ ಭಾಷೆ' - ಈ ರೀತಿಯಾಗಿ ಗಾಂಧಿ ನುಡಿ-ನಡೆ, ತತ್ತ್ವ-ಆಚರಣೆಗಳು ಅತ್ಯಂತ ಮಾರ್ಮಿಕವಾಗಿ, ಹೊಸ ರೂಪಕಗಳಾಗಿ ಮೂಡಿ ಬಂದಿವೆ. ಬೇಂದ್ರೆಯವರ ದೃಷ್ಟಿಯಲ್ಲಿ ಗಾಂಧಿ ಒಬ್ಬ ವಿಶಿಷ್ಟ ಶಿಲ್ಪಿ; 'ಕಾರುಣ್ಯದಲ್ಲಿ ಮಾನವರ ಮರ್ಮ ಮೂರ್ತಿಸುವ ಶಿಲ್ಪಿಯಾಗಿ' 'ಸ್ವರಾಜ್ಯದೊಂದು ಘನ ಕನಸು ಕಂಡು ಕಟೆದಿಟ್ಟ ಆಗಿ ತ್ಯಾಗಿ, ಎಂದು ಬಣ್ಣಿಸುತ್ತಾರೆ.

'ನಿನ್ನ ಕೃತಿಯ ಸ್ಮೃತಿ ಶಾಂತಿಶ್ರುತಿಯ ತಂತಿಯನು ಮೀಟುತಿಹುದು,
ಮನದ ಜನ್ಮಗಳ ಕಳೆವ ಹಾಗೆ ತನ್ನನ್ನೆ ದಾಟುತಿಹುದು
ನಿನ್ನ ಮೂರ್ತಿ ಪ್ರೇರಿಸುವದಯ್ಯ ದಿಗ್ದರ್ಶಿ ನೇತ್ರದಂತೆ,
ಆಕರ್ಷಿಸುವದು ಒಳಹೊರಗೆ ನಮ್ಮ ಸ್ಮೃತಿರೂಪ ಚಿತ್ರದಂತೆ'

ಗಾಂಧಿ ಬದುಕಿದ್ದು ತನ್ನ ಕೃತಿಗಳ ಮೂಲಕ; ಆ ಸ್ಮೃತಿ ಶಾಂತಿಶ್ರುತಿಯ ತಂತಿಯನ್ನು ಮೊಟುತಿಹುದು, ಎಂಬ ವರ್ಣನೆ ಈ ಶಾಂತಿದೂತನ ಸ್ಮೃತಿ ಶ್ರುತಿಯ ನಿರಂತರತೆಯನ್ನು ಮೊಟುತ್ತದೆ. ಇವರ ಮೂರ್ತಿ ನೀಡುವ ಪ್ರೇರಣೆ 'ದಿಗ್ದರ್ಶಿನೇತ್ರ'. ಈ ತಾತ 'ದಾಯಾದಿತನದ ಸಾಗರದ ಮಥನದಿಂದೆದ್ದ ವಿಷವ ಕುಡಿದ' ಶ್ರೀಕಂಠ! ಈತನು ನೀಡಿದ್ದು ವಿಶ್ವಕ್ಕೆ ಶಾಂತಿಯ ಅಮೃತ. ಈತ ಮರ್ತ್ಯನಲ್ಲ; ಅಮರ್ತ್ಯ.

'ಅಮರವಾವುದೆಂಬುವದದೇನು ಅವಿವೇಕ ತಾನು ಬಲ್ಲ?
ದೇಹಧರ್ಮಕೋ ಸಾವು ಉಂಟು, ಆತ್ಮಕಗೆ ಸಾವು ಇಲ್ಲ'

ಎಂದು ಗಾಂಧಿಯ ಅಮರತ್ವಕ್ಕೆ ಬೇಂದ್ರೆ ಕನ್ನಡಿಯನ್ನು ಹಿಡಿದಿದ್ದಾರೆ.

ಇನ್ನು ಗಾಂಧಿ ಬಗ್ಗೆ ನಾಲ್ಕನೆಯ ಕವನ 'ಜಯ ಜಯಾ ಗಾಂಧಿ ಮೋಹನಾ' ಈ ಕವನದ ಧಾಟಿಯೇ ವಿಭಿನ್ನ. 'ನಿಮ್ಮ ಚರಿತವಾಯಿತೋ ಕಥೀ, ಧರ್ಮನ ಗತಿ' ಎನ್ನುವ ಬೇಂದ್ರೆ

'ನೀವಿಟ್ಟ ಒಂದೊಂದs' ಅಡಿ
ಮುಕ್ತಿಯ ಗಡಿ
ಬಂಧಹರಣಾ - ಬಂಧಹರಣಾ'

ಗಾಂಧಿಯ ಒಂದೊಂದು ಅಡಿಯೂ, ಭಾರತವನ್ನು ಪರಕೀಯರ ಬಂಧನದಿಂದ ಮುಕ್ತಗೊಳಿಸುವ ಅಡಿಗಳಾಗಿದ್ದವು. ಅವರ ನಡೆ ಭಾರತವನ್ನು ಬಂಧನದ ಹರಣದೆಡೆಗೆ ನಡಿಸಿದ ನಡೆಯಾಗಿತ್ತು. ಈ ಕವನ ಬೇಂದ್ರೆ ಕವಿ ಹೃದಯದಿಂದ ಚಿಮ್ಮಿದ ಕಾರಂಜಿಯಂತೆ ಪುಟಿದು ಬರುತ್ತದೆ, ಗಂಗೆಯಂತೆ ಹರಿದು ಹಾಯುತ್ತದೆ. ಇದಕ್ಕೆ ಸಾಕ್ಷಿ ಇಲ್ಲಿದೆ :

'ನಿಂ ಚಥಾಯಿ ಮಾಡುವ ನೀತಿ
ಅಸಲ್ ನಿರ್ಭೀತಿ
ಥಲಬಲ ಇದ್ದ ಧೀರs ಎಂಥ ಶೂರಾs
ಆಸಕ್ತಿ ಇಲ್ಲದಾ ವೀರಾ ಪುಟ್ಟ ಪೂರಾs
ನಿಂ ಸ್ಮರಣ ಸ್ವರಾಜ್ಯದ ಹರಣಾ-ದೀನ ಉದ್ಧರಣಾ
ನಿಂ ಚರಣ ದಾಸ್ಯ ಸಂತರಣಾ-ದೃಷ್ಟಿ ವಿಸ್ತರಣಾ-
ಸುತ್ತಿರಲು ತಿಮಿರದಾವರಣಾ-ಆಶೆಯಾ ಕಿರಣಾ.
ವರುಷವರುಷದ ಶ್ರಾದ್ಧದ ದಿನ- ಶ್ರದ್ಧೆಯ ಧನ
ಉಪ್ಪಿನರಿಣಾ-ಉಪ್ಪಿನರಿಣಾ
ಜಯ ಜಯಾ.............'

ಈ ಕವನ ಬೇಂದ್ರೆಯವರ ಮುದ್ರಿಕೆಯುಳ್ಳ ಕವನ. ಅಂತೆಯೇ ಇದಕ್ಕೆ ವಿಶೇಷ ಮಹತ್ವವಿದೆ.

'ತಿರಗತSದ ನೂಲಿನ ರಾಟ
ಕವನ ಹೊಸ ಥಾಟ
ಕೇಳು ಸುಗುಣಾ-ಕೇಳು ಸುಗುಣಾ
ನಿಂಗುಣ ಆಕಾಶದ ಚುಕ್ಕಿ
ಪಡೆಥಾಂಗ ರೆಕ್ಕಿ
ಕುಣಿತಾವ ಮುಂದ-ಕುಣಿತಾವ ಮುಂದ
ಅಂಬಿಕಾತನಯನ ಬಂಧ
ಸಮುದ್ರದ ಅಂದ
ಭಾವ ಭವನಾ - ಭಾವ ಭವನ
ಸ್ವಾತಂತ್ರ್ಯ ಜೇತ? ಜಯ ಜಯಾ
ಹುಟ್ಟಾ ನಿರ್ಭಯಾ
ದೇವಹವನಾ-ದೇವಹವನಾ
ಕವಿ ಹೃದಯ ದೀಪ್ತ ಭಾವನಾ
ಪ್ರೇಮ ಜೀವನಾ
ಕರುಣ-ಕವನಾ-ಸ್ಮರಣಕವನಾ'

ಎಂಥ ಅದ್ಭುತ 'ಸ್ಮರಣಕವನಾ' ಇದು! ಈ ಕವನದಲ್ಲಿ ಅಂಬಿಕಾತನಯನ ಬಂಧ, ಸಮುದ್ರದ ಅಂದ!' ಕವಿಯ ಭಾವಗಳು ಅಲೆಅಲೆಯಾಗಿ, ತೆರೆತೆರೆಯಾಗಿ ಹೃದಯ ಉಕ್ಕಿ ಹರಿಯುತ್ತವೆ. ಗಾಂಧಿಯ ನೂಲಿನ ರಾಟಿ ತಿರುಗಿದ ಹಾಗೆ ಬೇಂದ್ರೆ ಹೃದಯದ ರಾಟಿ, ವಿವೇಕದ ನೂಲನ್ನು ನೂಲುತ್ತದೆ. ಅದರ ಅಂದ, ಅದರ ಚೆಂದ ಅವರ್ಣನೀಯ. ಬೇಂದ್ರೆ ಹೃದಯ ದೀಪ್ತ ಭಾವನಾ ಹೊನಲು ಹರಿದು ಬಂದು ರಸಿಕರ ಹೃದಯದಾಗರವನ್ನು ಬೆಳಗುತ್ತದೆ.

ಗಾಂಧಿ ಕುರಿತಿದ್ದ ಬಡತನವನ್ನು ಬಿಂಬಿಸುವ ಕವನ 'ದರಿದ್ರ ನಾರಾಯಣ'. ಬೇಂದ್ರೆಯವರು ಸಾಮಾಜಿಕ ಸಮಸ್ಯೆಗಳನ್ನು ಕುರಿತು ಅನೇಕ ಕವನಗಳನ್ನು ಬರೆದಿದ್ದಾರೆ. ಆದರೆ ಬಡತನದ ಮೇಲಿನ ಈ ಕವನ ಕ್ರಾಂತಿಕಾರಿಯಾಗಿದೆ. ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಒಂದು ಅತ್ಯಂತ ನವೀನ ಅಂತರ್‌ದೃಷ್ಟಿಯನ್ನು ನೀಡುವ ಕವನ ಇದಾಗಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

"ಗಾಂಧೀ ಜಯಂತಿ ದಿನ ಸತ್ಯವನ್ನಾಡೋಣ
ಸುಳ್ಳಿಗೋ ಇಡಿ ವರುಷ ತೆರವೆ ಇಹುದು"

ಸತ್ಯಕ್ಕಾಗಿ ಬಾಳಿ, ಬದುಕಿ, ಹುತಾತ್ಮರಾದ ಗಾಂಧೀಜಿಯವರ ಜಯಂತಿಯ ದಿನವನ್ನಾದರೂ ಸತ್ಯವನ್ನೇ ಆಡೋಣ ಎಂಬ ವ್ಯಂಗ್ಯೋಕ್ತಿಯಿಂದ ಈ ಕವನ ಪ್ರಾರಂಭವಾಗುತ್ತದೆ. ಆದರೆ, ಈ ದಿನ ಕವಿ ಬೇಂದ್ರೆ, ನುಡಿಯ ಬಯಸುವ ಸತ್ಯವಾದರೂ ಯಾವುದು?

"ಬಡತನವು ಬದುಕಿಹುದು. ಯಾರು ಇಲ್ಲೆನಬಹುದು
ಯಾವ ತಂತ್ರಕ್ಕೆ ಅದು ಅಡಗಲಹುದು?"

ಯುಗಯುಗಗಳು ಕಳೆದರೂ, ಬ್ರಿಟಿಷರ ದಾಸ್ಯದಿಂದ ಭಾರತ ವಿಮೋಚನೆ ಹೊಂದಿತೆಂದು ಆರು ದಶಕಗಳ ಕಾಲ ಬೊಬ್ಬೆ ಕುಟ್ಟಿದರೂ ಇಂದಿಗೂ "ಬಡತನವು ಬದುಕಿಹುದು" ಎಂಬುದನ್ನು ಯಾರು ಅಲ್ಲಗಳೆಯಲು ಸಾಧ್ಯ? ಈ ಕಠೋರ ಸತ್ಯವನ್ನು ಗಾಂಧಿಜಯಂತಿಯ ದಿನ ಎಲ್ಲರೂ ಮನಗಾಣಬೇಕು. ಅಷ್ಟೇ ಅಲ್ಲ, "ಯಾವ ತಂತ್ರಕ್ಕೆ ಅದು ಅಡಗಬಹುದು?" ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕಿ, ಬಡತನದ ಮಹಾರೋಗಕ್ಕೆ ಚಿಕಿತ್ಸೆಯನ್ನು ಕಂಡು ಹಿಡಿಯುವ ದಿಕ್ಕಿನಲ್ಲಿ ಸಾಗಬೇಕೆಂಬ ಸತ್ಪ್ರಜ್ಞೆ ಮೂಡಬೇಕು ಎಂಬ ಮಹದಾಶೆಯನ್ನು ಬೇಂದ್ರೆ ಪ್ರಕಟಿಸಿದ್ದಾರೆ. ಈ ನಗ್ನ ಸತ್ಯವನ್ನು ಬೆಳಕಿಗೆ ತರುವ ಉದ್ದೇಶ ಏನು? ಏಕೆಂದರೆ "ಬಡತನವು ಇದ್ದುದಕ್ಕೆ ದುಃಖವಿಲ್ಲ"- ಇದು ನಮ್ಮ ಸಮಾಜದ ಮಾನವರ ರೋಗಗ್ರಸ್ಥ ಮನಸ್ಥಿತಿ. ಇದು ದುರಂತ ಸತ್ಯ.

ಈ ಕವನದ ವಿಸ್ತಾರ ೨೧ ನುಡಿಗಳಲ್ಲಿ ಹರಡಿದೆ. ಎಲ್ಲ ನುಡಿಗಳೂ ನಾಲ್ಕು ಚರಣಗಳನ್ನು ಹೊಂದಿದ್ದರೆ ೧೪ ಮತ್ತು ೧೯ನೇ ನುಡಿಗಳಲ್ಲಿ ಮಾತ್ರ ವಿಭಿನ್ನತೆ ಇದೆ. ಒಂಭತ್ತನೇ ನುಡಿಯಲ್ಲಿ ೬ ಚರಣಗಳಿದ್ದರೆ, ಹತ್ತೊಂಭತ್ತನೆಯ ನುಡಿಯಲ್ಲಿ ೯ ಚರಣಗಳಿವೆ. ಹೀಗಾಗಿ "ದರಿದ್ರ ನಾರಾಯಣ" ಕವನವು ಒಟ್ಟು ೯೧ ಚರಣಗಳನ್ನು ಹೊಂದಿದ್ದು (ಇದು ೯+೧=೧೦) ಪೂರ್ಣತೆಯ ಒಂದು ಸಂಕೇತವಾಗಿದೆ. ಅಂತೆಯೇ ೧೪ನೆಯ ಹಾಗೂ ೧೯ನೆಯ ನುಡಿಗಳು ಆರು ಹಾಗೂ ಒಂಭತ್ತು ಚರಣಗಳಿರುವುದೂ ಸಂಖ್ಯಾದೃಷ್ಟಿಯಿಂದ ಔಚಿತ್ಯಪೂರ್ಣವೇ. ಹತ್ತೊಂಭತ್ತು ಕೂಡ ಪೂರ್ಣತೆಯ ಸಂಕೇತವೇ ಆಗಿದ್ದು, ಈ ನುಡಿಯಲ್ಲಿ ಒಂಭತ್ತು ಚರಣಗಳಿರುವುದು ಸಮೃದ್ಧಿಯ ಸಂಕೇತವಾಗಿದೆ. ಅಂತೆಯೇ ಹದಿನಾಲ್ಕು ಐದರ ಸಂಕೇತವಾಗಿದ್ದು (೧+೪=೫) ಇದರಲ್ಲಿ ಆರು ಚರಣಗಳಿರುವುದೂ ಒಂದು ಔಚಿತ್ಯವೇ ಸರಿ. ಆರು (ಇದು [illegible]) ಇದರ [illegible] ಆಗುತ್ತದೆ. ಇಲ್ಲಿ ನುಡಿಯ ಸಂಖ್ಯೆ ಹಾಗೂ ಆ ನುಡಿಯ ಚರಣಗಳ ಸಂಖ್ಯೆಯಲ್ಲಿ ಸಮಾನತೆ ಇದೆ. ಐದು, ಸಂಖ್ಯಾಶಾಸ್ತ್ರದಲ್ಲಿ ಒಂದು ಮಹತ್ವದ ಸಂಖ್ಯೆಯಾಗಿದೆ. ಹೀಗಾಗಿ ಒಟ್ಟಾರೆ ದರಿದ್ರ ನಾರಾಯಣ ಕವನವು ಸಂಖ್ಯೆಗಳ ದೃಷ್ಟಿಯಿಂದಲೂ ಮಹತ್ವವನ್ನು ಹೊಂದಿದ್ದಾಗಿದೆ. ಇನ್ನು ಈ ಕವನದಲ್ಲಿ ಅಡಕವಾಗಿರುವ ಸಿದ್ಧಾಂತದ ಅಂತರ್ಯವನ್ನರಿಯೋಣ.

ಬೇಂದ್ರೆಯವರ ದೃಷ್ಟಿಯಲ್ಲಿ ಸರ್ವೋದಯ, ಪರ್ವೋದಯಗಳು ಆಗುತ್ತಿದ್ದರೂ, ಅವೆಲ್ಲವೂ ಕೂಡ ಗರ್ವೋದಯದ ಅಸ್ತಿಭಾರದ ಮೇಲೆಯೇ ನಡೆದಿದ್ದು, ಕೆಲಸವಿಲ್ಲದಿರುವ ಬಡವರು ಮಾತ್ರ ಕಳ್ಳಕೇಶರ ಕೈಗೊಂಬೆಗಳಾಗಿದ್ದಾರೆ. ಗಾಂಧೀ ಹುಟ್ಟಿದ್ದರೂ, ಯೇಸು ಸತ್ತಿದ್ದರೂ, ಬುದ್ಧ ಧರ್ಮದ ಹೆಸರಿನಲ್ಲಿ ಅತ್ತಿದ್ದರೂ ಬಡತನ ಮಾತ್ರ ಬದುಕಿಯೇ ಇದೆ. ಇದು ವಿಪರ್ಯಾಸ. ಈ ಬಡವರ ಬಾಳಿನ ಚಿತ್ರಣವನ್ನು ಬೇಂದ್ರೆ ಮಾಡಿರುವ ರೀತಿಯನ್ನು ಗಮನಿಸೋಣ–

"ಕೂಲಿಕುಂಬಳಿ ಕಷ್ಟ ಅನ್ನವೋ ಅಪರೂಪ,
ಮಾನಕ್ಕೆ ತೆರೆ ಸಾಕು ಲಾಂಗು ಲಂಗೋಟಿ
ಸಾವಿರದ ಲೆಕ್ಕದಲಿ ಬದುಕುಳ್ಳವರ ಬಾಳು
ಲಕ್ಷದೊಳಗೇ ಬರದು ಕೋಟಿ ಕೋಟಿ."

"ಕಳ್ಳರಿಗೆ ಸೆರೆಮನೆಯು, ಸೂಳೆಗೋ ಅರಮನೆಯು,
ಬೈರಾಗಿ ದಂಪತಿಗೆ ಧರ್ಮಶಾಲೆ,
ಬಡವರಿಗೆ ಬಯಲೆ ಗತಿ! ಜನನ-ಮರಣಕ್ಕೆಲ್ಲ
ಉಳ್ಳವರ ಲೋಭ ಬಡತನದ ಮೂಲೆ."

"ಮುಸಲನಾದರು ಏನು, ಕ್ರೈಸ್ತನಾದರು ಏನು
ಸುಡುಗಾಡು ಸೇರಿದರು ಬಿಕ್ಕೆ ಬಿಡದು
ದಾನಕ್ಕೆ ಪಾತ್ರಗಳು ಹಲಕೆಲವು ಇರಲೆಂದು
ದೈವಪೂಜಕರ ಕೈ, ಭಿಕ್ಷೆ ಕೊಡದು."

"ಧನಪತಿ ಎಂದಿಗೂ ರಾಜನು ಮಹಾರಾಜ
ಶಕ್ತಿಪತಿ ಶಿವನಿಗೊ ತಿರುಕ ರೂಪ.
ಮೂಲೋಕ ತುಂಬಿದವ ಕುಳ್ಳನಾದನು ಬೇಡಿ
ಕೊಡುವವನ ಕೈ ಮೇಲು, ಬಲಿಯೆ ಭೂಪ!"

ಬಡವರ ಬಡತನದ ಬಗೆ ಎಂಥ ದಾರುಣಸ್ಥಿತಿ. 'ಪುರಾತನ ಕಾಲದಿಂದ ಇಂದಿನವರೆಗೆ ಜಾತಿ-ಮತಗಳ ಭೇದವಿಲ್ಲದೆ ಇವರ ಸ್ಥಿತಿ ಅನಾಥ-ಅಶ್ರುಮಯ. ದುಡಿಯುವ ಬಡವರು ಅನ್ನಕ್ಕೆ ಆರ್ತನಾದವಿಡುತ್ತಾ, ಮಾನಮುಚ್ಚಿಕೊಳ್ಳಲು ಲಂಗೋಟಿ ಬಿಟ್ಟು ಗತಿಯಿಲ್ಲದೆ, ಸಾವಿರದಲ್ಲಲ್ಲ, ಲಕ್ಷಗಟ್ಟಲೆ ಕೋಟಿ ಕೋಟಿ ಸಂಖ್ಯೆಯಲ್ಲಿ ಬದುಕುತ್ತಿದ್ದಾರೆ. ಕಳ್ಳಕಾಕರಿಗೆ ಸೆರೆಮನೆಯಿದ್ದರೆ, ಶೀಲಹೀನ ಸೂಳೆಗೆ ಅರಮನೆಯು ಭದ್ರ. ಬೈರಾಗಿಗೂ ಕೂಡ ದಂಪತಿ ಸಮೇತ ಇರಲು ಧರ್ಮಸಾಲೆಗಳು ತೆರೆವಿವೆ. ಆದರೆ ಬಡವನ ಜನನಕ್ಕೆ ಹಾಗೂ ಮರಣಕ್ಕೆ ಗತಿ ಬಯಲು, ಬಯಲು ಮಾತ್ರ. ಈ ಹೀನಾಯಮಾನ ಸ್ಥಿತಿಯು ಬಡವನು ಮುಸಲನಾದರೇನು? ಕ್ರೈಸ್ತನಾದರೇನು? ತಪ್ಪಿದ್ದಲ್ಲ. ಇವರಿಗೆ ಮಸಣ ಸೇರಿದರೂ, ಬಿಕ್ಕ ಬೇಡುವ ಸ್ಥಿತಿಯಿಂದ ವಿಮೋಚನೆಯಿಲ್ಲ. ದಾನ ಧರ್ಮ ಮಾಡುವ ಪೌರಾಣಿಕ, ಐತಿಹಾಸಿಕ ಪಾತ್ರಗಳಿಗೇನು ಕಡಿಮೆ? ಇವೆಲ್ಲವೂ ವೈರುಧ್ಯಗಳ ಕಂತೆ. ಏಕೆಂದರೆ, ರಾಜನು-ಮಹಾರಾಜನು ಧನಪತಿಯಾದರೆ, ದುಡಿತದ ಸಾಂಕೇತಿಕ ಶಕ್ತಿಯು ಪತಿ ಶಿವನಿಗೆ ತಿರುಕ ರೂಪ! ಇದು ಅಂದಿನಿಂದ ಇಂದಿನವರೆಗೆ ನಡೆದು ಬಂದ ದಾರಿ. ವರ್ಗಗುಣ ಸಮಾಜದ, ಶೋಷಕ-ಶೋಷಿತ ಸಮುದಾಯಗಳ, ನಿರಂತರ ಶೋಷಣೆಯು ಅಮಾನುಷ ಸತ್ಯ.

ಸೂರ್ಯಪಾನ - ಕವನ ಸಂಕಲನ : ಲೇ : ದ. ರಾ. ಬೇಂದ್ರೆ (ಅಂಬಿಕಾತನಯದತ್ತ)

"ಬಡತನದ ಸಸಿಗೆ ನೀರೆರೆಯಬೇಡೆಲೊ ಗೆಳೆಯ !
ಬಡತನಕೆ ಉಪಕಾರಿ, ಸಾಕು ಜಂಭ.
ನಿನ್ನ ಸೇವೆಯ ಪುಣ್ಯದಿಂದ ಹಬ್ಬಿಹುದಣ್ಣ
ಬಡತನದ ಹುಲುಸುಬೆಳೆ ಜಗದ ತುಂಬ."

ಬಡತನದ ಸಸಿಯ ನೆಟ್ಟು, ಅದಕ್ಕೆ ನೀರೆರಚಿ, ಗೊಬ್ಬರ ಹಾಕಿ, ಬಡವರ ಸೇವೆಯ ಸೋಗಿನಿಂದ, ಬಡತನಕ್ಕೆ ಉಪಕಾರ ಮಾಡುತ್ತಿರುವೆವೆಂಬ ಜಂಭದಿಂದ, ನಾವು ಮಾಡುತ್ತಿರುವ ಘನ ಕಾರ್ಯ- ಜಗದ ತುಂಬ ಬಡತನದ ಹುಲುಸು ಬೆಳೆಯನ್ನು ಬೆಳೆಯುವಂತೆ ಮಾಡಿ, ಅದರ ನಿರಂತರತೆಗೆ ಕಾರಣವಾಗುವುದು. ಅಂಬಿಕಾತನಯದತ್ತರು ಗುರುತಿಸಿರುವ ಸತ್ಯವು ಈ ಕುರಿತು ಮಾರ್ಕ್ಸ್ ಪ್ರತಿಪಾದಿಸಿದ ಸತ್ಯವನ್ನು ಬಿಂಬಿಸುತ್ತದೆ.

"ಕಣ್ಣು ಇದ್ದೂ ಕುರುಡು, ಕಿವಿಯು ಇದ್ದೂ ಕಿವುಡು,
ಎದೆಯು ಇದ್ದೂ ಕೂಡ ಜೊಳ್ಳು-ಪೊಳ್ಳು
ದುಡ್ಡು, ದುಡಿವವರ ಕುಣಿಸುತ್ತಲಿದೆ. ಇದು ಸತ್ಯ.
ಬಡತನದ ತತ್ತ್ವ ಅಪ್ಪಟೆಯ ಸುಳ್ಳು."

ಬಡತನದ ಬಗ್ಗೆ ಪ್ರತಿಪಾದಿಸುತ್ತಾ ಬಂದ ತತ್ತ್ವಗಳೆಲ್ಲವೂ ಅಪ್ಪಟ ಸುಳ್ಳಿನ ಕಂತೆ. ಸ್ಫುಟವಾದ ಸತ್ಯವೆಂದರೆ "ದುಡ್ಡು ದುಡಿವವರ ಕುಣಿಸುತ್ತಲಿದೆ" ಎನ್ನುವುದು. ಬಂಡವಾಳಶಾಹಿಯು ದುಡಿಯುವ ವರ್ಗದ ಬಡ ಬಡಪಾಯಿಗಳನ್ನು ಆಳುತ್ತಾ, ಶೋಷಿಸುತ್ತಾ, ತನ್ನ ಸ್ವಲಾಭವನ್ನು ಮಾಡಿಕೊಳ್ಳಲು, ತನ್ನ ಹಿರಿತನವನ್ನು ಬೆಳೆಸಿಕೊಳ್ಳುತ್ತಾ, ಶೋಷಣಾಮಯ ಅಮಾನುಷ ವ್ಯವಸ್ಥೆಯ ಶಾಶ್ವತೀಕರಣಗೊಳಿಸುತ್ತಿರುವುದು. ಈ ಕಟು ವಾಸ್ತವ ಕುರಿತು ಕಣ್ಣಿದ್ದೂ ನಾವು ಕುರುಡರಾಗಿದ್ದೇವೆ, ಕಿವಿ ಇದ್ದೂ ನಾವು ಕಿವುಡರಾಗಿದ್ದೇವೆ. ಎದೆ ಇದ್ದೂ ಕೂಡ ಅದು ಪೊಳ್ಳು ಜೊಳ್ಳಾಗಿರುವುದರಿಂದ ಹೃದಯಹೀನರಾಗಿದ್ದೇವೆ. ಈ ದಾರುಣತೆಯ ಚಿತ್ರಣವನ್ನು ಎದೆತಟ್ಟುವಂತೆ ಬೇಂದ್ರೆ ಚಿತ್ರಿಸುತ್ತಾರೆ :

"ಜನತಾ ಜನಾರ್ದನಾ ! ದರಿದ್ರ ನಾರಾಯಣಾ !
ಅಳಬುರುಕ ರಾಮಾಯಣಾ ! ಮತ್ತೆ ಮತ್ತೆ ಪಾರಾಯಣಾ !!
ಶಿವ ಶಿವಾ ಮಹಾದೇವ ಶಿವಾ ! ಕಣ್ಣಿಲ್ಲದವರಿಗೆ ನೀನೆ ಶಿವಾ !!
ಯಾ ಅಲ್ಲಾ! ಬಡತನದಷ್ಟು ಹಿರಿತನವಿಲ್ಲಾ!
Oh God! If thou art
Tell man, if he has a heart."

"ಯಾವ ಭಾಷೆಯಲಿ ಎಷ್ಟು ಕೂಗಿದರು
ಬಡತನವಾಗದು ನಿರ್ಬೀಜ !
Virus, Parasite ಸಂಪತ್ ವೃದ್ಧಿಗೆ
ಪ್ರಾಣಿಗೊಬ್ಬನವು ಇದೇ ನಿಜ."

ನಾವು ಮಾಡುತ್ತಾ ಬಂದಿರುವುದು ಅಳಬುರುಕ ರಾಮಾಯಣದ ಮತ್ತೆ ಮತ್ತೆ ಪಾರಾಯಣ! ಶಿವನ ಹೆಸರಿನಲ್ಲಿ ಅಲ್ಲಾ ಹೆಸರಿನಲ್ಲಿ ಮಾಡುತ್ತಾ ಬಂದದ್ದು ಭಿಕ್ಷಾಟನೆ! "ಕಣ್ಣಿಲ್ಲದವನಿಗೆ ನೀನೆ ಶಿವಾ" ಎಂದೇ ಬೇಡುವುದು ದಂಧೆಯಾಗಿದೆ. ಪ್ರಜಾಸತ್ತೆ ಬಂದರೂ, ನಮಗೆ ಜನತೆಯೇ ಜನಾರ್ದನ! ದರಿದ್ರರೇ ನಾರಾಯಣ! ಅವರ ಹೆಸರಿನಲ್ಲೇ ರಾಜ್ಯ ನಡೆಸುತ್ತೇವೆ. "ಬಡತನದಷ್ಟು ಸಿರಿತನವಿಲ್ಲಾ" ಎಂಬುದು ವಸ್ತು ಸ್ಥಿತಿ. ಅಂತೆಯೇ ಬೇಂದ್ರೆ ದೇವರಲ್ಲಿ ಮೊರೆಯಿಡುತ್ತಾರೆ, "oh God! if thou art tell man, if he has a heart" ಎಂದು. ಓ ದೇವರೇ! ನಿನಗೆ ಸಾಧ್ಯವಿದ್ದರೆ ಮನುಷ್ಯನಿಗೆ ಹೇಳು; ನಿನಗೆ ಹೃದಯವಿದೆಯೇ?" ಆ ದೇವರಿಗೂ ಮಾನವನಿಗೆ ಹೇಳಲು ಅಸಾಧ್ಯವಾಗಿಬಿಟ್ಟಿದೆ. ಮಾನವ, ಹೃದಯಹೀನನಾಗಿ ಬಿಟ್ಟಿದ್ದಾನೆ. ಯಾವ ಭಾಷೆಯಲಿ ಕೂಗಿದರೇನು? ಎಷ್ಟು ಅರಚಿದರೇನು? ಸಾರ್ವತ್ರಿಕ ಸತ್ಯವೆಂದರೆ- 'ಬಡತನವಾಗದು ನಿರ್ಬೀಜ!". ಈ ಸಿರಿವಂತ Virus, Parasiteಗಳಿಗೆ, ಇವರ ಸಂಪತ್ ಅಭಿವೃದ್ಧಿಗೆ ಬಡವರು "ಪ್ರಾಣಿಗೊಬ್ಬರವು ಇದೇ ನಿಜ". ಬಡಮನುಷ್ಯಪ್ರಾಣಿಯೇ ಸಿರಿವಂತರ ಸಿರಿವಂತಿಕೆಯ ಹುಲುಸು ಬೆಳೆಗೆ ಗೊಬ್ಬರ. ಈ ಸತ್ಯವನ್ನು ಗಾಂಧೀಜಯಂತಿ ದಿನ ಆಡಬೇಕೆನ್ನುತ್ತಾರೆ ಕವಿ ಅಂಬಿಕಾತನಯದತ್ತ. ಬೇಂದ್ರೆಯವರ ಅಂತರಾಳದ ನೋವು, ಬಡತನ ನಿರ್ಬೀಜವಾಗಲೊಲ್ಲದಲ್ಲ ಎಂಬುದು. ಬಡತನವನ್ನು ಬೇರು ಸಮೇತ ಕಿತ್ತುವುದಕ್ಕಿಂತಲೂ ಮಹಾನ್ ಕಲ್ಪನೆ ಬಡತನವನ್ನು ನಿರ್ಬೀಜಗೊಳಿಸುವುದು. ಇದು ಹುಟ್ಟಲೇಬಾರದಂತೆ ಶಸ್ತ್ರಚಿಕಿತ್ಸೆ, ಇದನ್ನು ವಿನಾಶ ಮಾಡುವ ಕ್ರಿಯಾಚರಣೆ ಆಗಬೇಕಾಗಿರುವುದು. ಈ ತಂತ್ರಮಾತ್ರ ಬಡತನವನ್ನು ಅಡಗಿಸಬಹುದು. ಅಂತೆಯೇ ಬೇಂದ್ರೆ ಕೊಡುವ ಕರೆ-

"ದಾರಿದ್ರ್ಯವನೇ ನಷ್ಟಗೊಳಿಸೆ ಬಾ
ಬೇಡ ದರಿದ್ರರ ಸೇವೆ!
ಪರೋಪಕಾರಕೆ ಅದನಿರಿಸಿರುವಾ
ಹೃದಯದರಿದ್ರರು ನಾವೇ."

ನಾವು ದಾರಿದ್ರ್ಯವನ್ನು ಪರೋಪಕಾರದ ಹೆಸರಿನಲ್ಲಿ ದರಿದ್ರರ ಸೇವೆಯ ನೆಪದಲ್ಲಿ ಉಳಿಸಿ ಬೆಳೆಸಿರುವ ಹೃದಯದರಿದ್ರರು. ಅದಕ್ಕೆಂದೇ ಅವರು ಕೊಡುವ ಕರೆಯೆಂದರೆ-"ದಾರಿದ್ರ್ಯವನೇ ನಷ್ಟಗೊಳಿಸು ಬಾ" ಎಂದು. ಅಂತೆಯೇ ಕವಿವಾಣಿ ಕರೆಯುತ್ತಿದೆ:

"ಇಕೋ ನೆಲ-ಅಕೋ ಜಲ
ಅದರ ಮೇಲೆ ಮರದ ಫಲ
ಮನದೊಳಿದೆ ಪಡೆವ ಛಲ
ಬೆಳೆವಗೆ ನೆಲವೆಲ್ಲ ಹೊಲ
ಜಲಧಿವರೆಗು ಒಂದೆ ಕುಲ
ಅನ್ನವೆ ಧರ್ಮದ ಮೂಲ
ಪ್ರೀತಿಯೆ ಮೋಕ್ಷಕ್ಕೆ ಬಲ
ಇದೇ ಶೀಲ ಸರ್ವಕಾಲ
ಇಕೋ ನೆಲ-."

ಇದು ವೈಶ್ವಿಕ ಸತ್ಯ. ಬೆಳೆವಗೆ ನೆಲವೆಲ್ಲ ಹೊಲ. ಜಲಧಿವರೆಗೆ ಒಂದೆ ಕುಲ. "ಅನ್ನವೆ ಧರ್ಮದ ಮೂಲ, ಪ್ರಿತಿಯೇ ಮೋಕ್ಷಕ್ಕೆ ಬಲ". ಇದೇ ಸರ್ವಕಾಲಿಕ ಶೀಲ. ಇದುವೇ ಸರ್ವಕಾಲದ ಸತ್ಯ. ಇದು ಬೇಂದ್ರೆವಾಣಿ. ಬೇಂದ್ರೆಯವರು ಎಚ್ಚರಿಸುತ್ತಾರೆ :

"ಲಕ್ಷ್ಮೀಪತಿಯನು ಜೇಷ್ಠಾದೇವಿಯ ಗಂಡನ ಮಾಡದಿರಣ್ಣ
ವಸುಂಧರೆಯನೇ ಬಂಜೆಯು ಎನಿಸಿ ಏನೋ ಹಾಡದಿರಣ್ಣ"

ಎಂದು. ನಾವು 'ಲಕ್ಷ್ಮಿಪತಿ'-ನಾರಾಯಣನನ್ನು 'ಜ್ಯೆಷ್ಠಾದೇವಿಯ ಗಂಡ'-ದರಿದ್ರನನ್ನಾಗಿ ಮಾಡಿ "ದರಿದ್ರ ನಾರಾಯಣ" ಎಂದು ಕರೆಯುತ್ತೇವೆ. ಹಾಗೆ ಮಾಡಬೇಡಿ ಎಂದು ಎಚ್ಚರಿಸುವ ಬೇಂದ್ರೆ, ವಸಂಧರೆಯನ್ನೇ ಬಂಜೆಯನ್ನು ಮಾಡಿ, ಹಾಡೋ ಪರಂಪರೆಯನ್ನು ಕೊನೆಗಾಣಿಸಲು ಕೇಳಿಕೊಳ್ಳುತ್ತಾರೆ. ಬಡವರ ಕಟ್ಟುವ ಕೆಲಸ ನಡೆದಿದೆ ಬಡವರ ಸೇವೆಯ ಹೆಸರಿನಲ್ಲಿ. ಇದು ನಿಲ್ಲಬೇಕು. ಬಡತನ ನಿರ್ಬೀಜಗೊಳ್ಳಬೇಕು. ದರಿದ್ರನಾರಾಯಣನ ಸೇವೆ ಎಂಬ ದೃಷ್ಟಿಯಗೊಂಬೆಯನ್ನು ನಿಲ್ಲಿಸಿ, ವಿಶ್ವದೆಲ್ಲೆಡೆ ಸಿರಿವಂತನು ತನ್ನ ಸಿರಿಯ ಅಭಿವೃದ್ಧಿಯನ್ನು ಮಾಡಿಕೊಳ್ಳುತ್ತಿದ್ದಾನೆ. ಇದು ಮೋಸ. ಅಂತೆಯೇ ಬೇಂದ್ರೆ ಹೇಳುತ್ತಾರೆ-ಬಡತನ ಕಣ್ಣಿಗೆ ಕಾಣುತ್ತಿರುವವರೆಗೆ "ದರಿದ್ರ ನಾರಾಯಣನ ಸೇವೆ" ಅನ್ನೋ ತಿರುಮಂತ್ರವನ್ನು ತಾವು ನಂಬುವುದಿಲ್ಲವೆಂದೂ, ಅದು ಅಮೆರಿಕೆಯ ಧನತತ್ತ್ವವೆ ಇರಲಿ, ರಶಿಯದ ಜನಹಿತತತ್ತ್ವವೆ ಇರಲಿ. ಎಲ್ಲಿಯವರೆಗೆ ಮಾನವನ ಮನತತ್ತ್ವವು, ಬಡವರ ಪ್ರಾಣಸತ್ತ್ವವನ್ನೇ ಹೀರುತ್ತದೆಯೋ ಅಲ್ಲಿಯವರೆಗೆ ನಿಜವಾದ ಮಾನವೀಯತೆ ನೆಲಸುವುದಿಲ್ಲ ಎಂಬ ಕಟು ಸತ್ಯವನ್ನು ಕೊನೆಯ ನುಡಿಯಲ್ಲಿ ಸಾರುತ್ತಾರೆ, ಬೇಂದ್ರೆ-

"ದರಿದ್ರನಾರಾಯಣನ ಸೇವೆಯೊ ಅದುವೇ ದೃಷ್ಟಿಯ ಗೊಂಬೆ
ಬಡತನ ಕಣ್ಣಿಗೆ ಬೀಳುವವರೆಗೂ ಈ ತಿರುಮಂತ್ರವ ನಂಬೆ
ಅಮೇರಿಕೆಯ ಧನತತ್ತ್ವವೆ ಇರಲಿ, ರಸಿಯದ ಜನಹಿತತತ್ತ್ವ
ಮಾನವ ಮನತತ್ತ್ವವೆ, ಹೀರುತ್ತಿದೆ ಬಡವರ ಪ್ರಾಣದ ಸತ್ತ್ವ."

ಈ ಚಿರಂತನ ಸತ್ಯವನ್ನು ಗಾಂಧಿ ಜಯಂತಿಯಂದು ನಾವೆಲ್ಲರೂ ಅರಿಯೋಣ. ಬಡತನವನ್ನೇ ನಿರ್ಬೀಜಗೊಳಿಸುವ ಹೊಸ ವ್ಯವಸ್ಥೆಯನ್ನು ನಿರ್ಮಿಸೋಣ. ಬಡವರ ಪ್ರಾಣಸತ್ತ್ವವನ್ನೇ ಹೀರುವ ಧನತತ್ತ್ವ, ಜನಹಿತತ್ತ್ವಗಳಿಗೆ ಶರಣು ಹೊಡೆದು, ಬಡತನವಿಲ್ಲದ ನವಮಾನವ ವಿಶ್ವಸಮಾಜ ನಿರ್ಮಾಣಕ್ಕೆ ಮುಂದಾಗೋಣ. ಇದು ಗಾಂಧಿ ಜಯಂತಿಯ ಆಚರಣೆಗೆ ಬೇಂದ್ರೆ ನೀಡಿದ ಕ್ರಾಂತಿಕಾರಿ ಸಂದೇಶ. "ಗಾಂಧಿ ಜಯಂತಿ ದಿನ ಸತ್ಯವನ್ನಾಡೋಣ; ಸುಳ್ಳಿಗೋ ಇಡಿ ವರುಷ ತೆರೆವೆ ಇಹುದು".

ಹೀಗಿದೆ ಬೇಂದ್ರೆ ಗಾಂಧಿ ಕವನ ಪಂಚಕ.

ಇನ್ನು "ಊರು ಮತ್ತು ಖಾಲ್ಡಿಯಾ" ಕವನವನ್ನು ಕುರಿತು ಅವಲೋಕಿಸೋಣ. ಈ ಕವನ ಅತ್ಯಂತ ವಿನೂತನ ದೃಷ್ಟಿಯುಳ್ಳ, ಸಮಗ್ರ ಇತಿಹಾಸ, ಇತಿಹಾಸದ ಅಧ್ಯಯನ, ಪ್ರಾಚ್ಯವಸ್ತು ಸಂಶೋಧನ, ಸಂಸ್ಕೃತಿ, ನಾಗರೀಕತೆಗಳ ಬಗ್ಗೆ ಹೊಸ ಅಂತರ್‌ದರ್ಶನವನ್ನು ನೀಡುವ

ಕವನವಾಗಿದೆ. ಬೇಂದ್ರೆಯವರು ವಿಶ್ವ ಇತಿಹಾಸವನ್ನು ಅಧ್ಯಯನಮಾಡಿ, ವಿಶ್ವಮಾನವ ದೃಷ್ಟಿಯಿಂದ ಮಾನವೀಯ ಮೌಲ್ಯಗಳ ಮೌಲ್ಯಮಾಪನದ ಕಾರ್ಯವನ್ನು ಮಾಡುತ್ತಾರೆ. ಒಂದು ದೃಷ್ಟಿಯಲ್ಲಿ ಈ ಕವನವು ಬೇಂದ್ರೆಯವರು 'ನಾನು' ಕವನದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಂತೆ-

''ವಿಶ್ವದೊಳನುಡಿಯಾಗಿ ಕನ್ನಡಿಸುತಿಹನಿಲ್ಲಿ
ಅಂಬಿಕಾತನಯನಿವನು''

ಎಂಬುದನ್ನು ಸಾರ್ಥಕಗೊಳಿಸಿದ್ದಾರೆ. ಈ ಕವನದ ಮೊದಲ ಎರಡು ನುಡಿ ಹೀಗಿವೆ :

''ಊರು ಮತ್ತು ಖಾಲ್ದಿಯಾ
ಬಾಬಿಲೋನ ಅಸೀರಿಯಾ
ಮಡಕೆಚೂರು ಬಳೆಯ ಚೂರು
ಮಣ್ಣ ಹೊಟ್ಟೆ ಸೇರಿಯಾ?

ಪೃಥು ಮೇದಿನಿ ಪರ್ಶಿಯಾ
ಆರ್ಯಯಾಣ ಹಿಂದಿಯಾ
ದೇವ ಅಸುರ ಆರ್ಯನಾರ್ಯ'
ನಿನ್ನ ನೀನೆ ಕೊಂದೆಯಾ?
ಮತ್ತೆ ಬಂಧು ಎಂದೆಯಾ?''

ಪುರಾತತ್ವಶಾಸ್ತ್ರ ಉತ್ಖನನಗೊಂಡ ಅವಶೇಷಗಳ ಅಧ್ಯಯನವು, ಇತಿಹಾಸ ಅಧ್ಯಯನದ ಒಂದು ಪ್ರಧಾನ ಭಾಗ. ಇದನ್ನು ಬೇಂದ್ರೆಯವರು ಹೀಗೆ ಸ್ವಾರಸ್ಯವಾಗಿ ಬಣ್ಣಿಸಿದ್ದಾರೆ-

''ಮಡಕೆಚೂರು ಬಳೆಯ ಚೂರು
ಮಣ್ಣ ಹೊಟ್ಟೆ ಸೇರಿಯಾ?''

ಎಂದು. ಖಾಲ್ದಿಯಾ, ಬಾಬಿಲೋನ್, ಅಸೀರಿಯಾ ಇವುಗಳ ಇತಿಹಾಸ ಆಧ್ಯಯನೀಯ. ಗ್ರೇಟ್ ಬ್ರಿಟನ್‌ನ ಉತ್ತರ ಭಾಗಕ್ಕೆ ಪ್ರಾಚೀನ ರೋಮನ್ ಹೆಸರು ''ಖಾಲಿಡೋನಿಯಾ''. ಖಾಲಿಡೋನಿಯಾದ ಪ್ರಾಚೀನ ಸ್ಥಳೀಯ ಗಿರಿಜನರನ್ನು ಹತ್ತಿಕ್ಕಲು ನಿರಂತರ ಪ್ರಯತ್ನ ಮಾಡಿದರೂ ಯಶಸ್ವಿಯಾಗಲಿಲ್ಲ ಎನ್ನುವುದು ಪ್ರಾಚೀನ ಇತಿಹಾಸ. ಅಂತೆಯೇ ಬಾಬಿಲೋನಿಯಸ್ ಹಾಗೂ ಅಸೀರಿಯನ್‌ಗಳ ನಡುವಣ ಸಂಘರ್ಷವೂ ಪ್ರಾಚೀನವಾದುದೇ. ಅಸೀರಿಯನ್ನರು ಬಾಬಿಲೋನಿಯನ್ನರನ್ನು ಗೆದ್ದುಕೊಂಡರು. ಆದರೆ ತದನಂತರ ಬಾಬಿಲೋನಿಯನ್ನರು ಸಂಘರ್ಷ ನಡೆಸಿ, ವಿಮೋಚನೆ ಪಡೆದರು. ಅಸೀರಿಯಾ ಎಂದರೆ ಉತ್ತರ ಇರಾಕ್ (ಮೆಸಪಟೋಮಿಯ)ದ ಭಾಗವಾಗಿತ್ತು, ಶಿಲ್ಪಶಾಸ್ತ್ರ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಪ್ರಾಚೀನ ಅಸಿರಿಯಾ ಒಳ್ಳೆಯ ಹೆಸರನ್ನು ಪಡೆದಿತ್ತು. ಜ್ಯೂ ಜನಾಂಗದ ಬಾಬಿಲೋನಿಯಾಗಳ ಇತಿಹಾಸವು ಸಂಘರ್ಷದ ಇತಿಹಾಸವಾಗಿದೆ. ಇವೆಲ್ಲವೂ ಕ್ರಿ. ಪೂ. ೬ನೆಯ ಶತಮಾನದ ಕಾದಾಟಗಳು. ಈ ಇತಿಹಾಸದ ದೃಢೀಕರಣಕ್ಕಾಗಿಯೇ ಬಳಸುವುದು ಉತ್ಖನನದ ವಿಧಾನ. 'ಮಣ್ಣು ಹೊಟ್ಟೆ ಸೇರಿದ' ಮಡಕೆ

ಚೂರ, ಬಳೆಯ ಚೂರುಗಳನ್ನು ಅಗೆದು ತೆಗೆದು, ಈ ಇತಿಹಾಸದ ವಿವರಣೆನ್ನು ನೀಡುವುದೇ ಇದರ ವೈಶಿಷ್ಟ್ಯ. ಈ ಕಾದಾಟಗಳಲ್ಲಿ ಎಷ್ಟು ಮಹಿಳೆಯರ ಮಾನ ಮಣ್ಣುಪಾಲಾಯಿತು ಎಂಬುದನ್ನು ಬಳೆಯ ಚೂರು ಸ್ಥಿರಪಡಿಸಿದರೆ, ಎಷ್ಟು ಮನೆಗಳು ನೆಲಸಮವಾದವೆಂಬುದನ್ನು ಮಡಕೆ ಚೂರು ಸಿದ್ಧಪಡಿಸುತ್ತದೆ. ಎಂಥ ವಿಪರ್ಯಾಸ ಇತಿಹಾಸ! ಅಂತೆಯೇ ಪುರಾಣದ ದೇವ ಅಸುರರ ಕಾಳಗವಾಗಲಿ, ಪೃಥು ಮೇದಿನಿಯ ಪರ್ಷಿಯಾದ ಕಥೆಯಾಗಲಿ, ಇಂಡಿಯಾದ ಆರ್ಯ ಅನಾರ್ಯರ ಯುದ್ಧಗಳಾಗಲಿ, ಒಬ್ಬರನ್ನೊಬ್ಬರು ಸಂಹಾರ ಮಾಡುವುದಾಗಲಿ, ಒಬ್ಬರೊಡನೆ ಒಬ್ಬರು ಬಾಂಧವ್ಯವನ್ನು ಬೆಳೆಸುವುದಾಗಲಿ, ಇದೆಲ್ಲವೂ ಕತ್ತಿ-ಕಠಾರಿಗಳ ಬಳಕೆಯಿಂದ ನಡೆಯುವ ಕಾಳಗಗಳ ಫಲಿತಾಂಶದ ವಿವರಣೆಯಿಂದಲೇ. ವೈಪರೀತ್ಯವೆಂದರೆ, ಶಾಂತಿಸಾಗರದ ಆಚೆಗೆ ಚೀನಿಯರು ಯುದ್ಧಗಳನ್ನು ನಡೆಸಿ, ಶಾಂತಿಯನ್ನು ಕಳೆದುಕೊಂಡದ್ದೇ ಅಲ್ಲವೇ ಇತಿಹಾಸ. ಸಮುದ್ರದ ಈಚೆಗಿನ ಆಚೆಗಿನ ಬೀಚಿನಲ್ಲಿ ಯುದ್ಧದಿಂದ ಕಾವೇರಿದ ತೆರೆಗಳು-ಅಲೆಗಳು ಕುದ್ದು ಕುದ್ದು ಎಸರು ಹೋಗಿದ್ದವು. ಅಂತೆಯೇ ಕುರುಕ್ಷೇತ್ರದಲ್ಲೂ ಕೌರವ-ಪಾಂಡವರ ಯುದ್ಧವೇ ಪುರಾಣದ ರಣಗೀತೆ. ಇವರೆಲ್ಲರೂ ಕೂಡ ಮಾನವತೆಯ ಕೊರಳಸೂತ್ರ ಹರಿಯಲು ಕಟಿಬದ್ಧರಾದವರೇ. ಗೆದ್ದರೂ ಬಿದ್ದರೂ ಸತ್ತು ಬದುಕಿ ಇದ್ದವರೇ ಆಗಿದ್ದಾರೆ. ಅಂತೆಯೇ ಬೇಂದ್ರೆ ಹೇಳುತ್ತಾರೆ :

''ಸಿವಿಲಿಝೇಶನ್ ವ್ಹಲ್ಚರು
ಕಲ್ಚರೋ ಸೆಪಲ್ಚರು
ನೆಲವೆಲ್ಲವು ಮಸಣ ಮಸಣ
ನೋಡಿದಲ್ಲಿ ಇಲ್ಲ ಹಸನ.''

ಎಂದು ಇತಿಹಾಸವೆಲ್ಲವೂ ಸಿವ್ಹಿಲಿಸೇಷನ್ (ನಾಗರಿಕತೆಯ) ರಣಹದ್ದು, ಸಂಸ್ಕೃತಿಯ ಸಮಾಧೀಕರಣ. ನೆಲವನ್ನೆಲ್ಲ ಮಸಣವನ್ನು ಮಾಡುವ ನಿರಂತರ ಕ್ರಿಯೆ. ಎಲ್ಲಿಯೂ ಶಾಂತಿಯಿಲ್ಲ, ಸ್ವಾಸ್ಥ್ಯವಿಲ್ಲ. ಅಂತೆಯೇ ಬೇಂದ್ರೆ ಹೇಳುತ್ತಾರೆ :

''ಅತಳಾಂತಿಕ ಸಾಗರ
ಕುದಿಯುತಿದೆ ಸಳಮಳಾ
ಅತಳ ವಿತಳ ತಳತಳಾ
ಪಾತಾಽಳ ರಸಾತಳಾ
ಇದ್ದವರೂ ಸತ್ತವರೂ
ಅತ್ತರಲ್ಲೋ ಗಳಗಳಾ!''

ಅಟಲ್ಯಾಂಟಿಕ್ ಓಷನ್ (ಅತಳಾಂತಿಕ ಸಾಗರ) ಕುದಿಯುತ್ತಿದೆ ಸಳಮಳಾ. ಭೂಲೋಕ, ಪಾತಾಳಲೋಕ ಎಲ್ಲವೂ ಹೀಗೆಯೇ ನಿರಂತರ ಯುದ್ಧದಲ್ಲಿ ತೊಡಗಿವೆ. ಈ ಯುದ್ಧದ ಪರಿಣಾಮವಾಗಿ ಸಂಭವಿಸುವ ಸಾವು-ನೋವುಗಳ ಕಾರಣ 'ಇದ್ದವರೂ ಸತ್ತವರೂ ಗಳಗಳ ಅಳೋದೇ' ನಮ್ಮ ಚರಿತೆಯಾಗಿದೆ. ಅಂತೆಯೇ :

''ಹುಗಿದುವೆಂದು ಬಗೆವರು
ನಾಳೆ ಅಗಿದು ತೆಗೆವರು
ಅದು ಸಂಸ್ಕೃತಿ ದರ್ಶನ
ಪಾಂಡಿತ್ಯ ಪ್ರದರ್ಶನ

ಇದ್ದ ಜಗಳ ಸಾಲದೆಂದು
ಹಳೆದ ಹಡ್ಡಿ ತರುವರು
ಈ ಕುರುಂಬರು ಬರುವರು,''

ಸಂಸ್ಕೃತಿಯ ದರ್ಶನವೆಂದರೆ- ಇಂದು ಹುಗಿದುದ್ದನ್ನು ನಾಳೆ ಅಗೆದು ತೆಗೆದು ಅವುಗಳ ಉಲ್ಲೇಖವನ್ನು ನೀಡಿ ಪಾಂಡಿತ್ಯ ಪ್ರದರ್ಶನವನ್ನು ನೀಡುವುದೇ ಆಗಿದೆ. ಪ್ರಚಲಿತ ಜಗಳಗಳು ಸಾಲವೆಂಬಂತೆ ಹಳೆಯ ಜಗಳಗಳನ್ನೂ ಹಡ್ಡಿ ತೆಗೆದು ವಿಶ್ವವನ್ನೇ ಕುರುಕ್ಷೇತ್ರವನ್ನಾಗಿಸಿದ್ದೇವೆ. ಈ ರೀತಿಯ ಐತಿಹ್ಯದಿಂದ ರೋಸಿಹೋದ ಬೇಂದ್ರೆ ಹೇಳುತ್ತಾರೆ :

''ಎಲೊ ದುಷ್ಕೃತಿ ಮಾನವಾ
ಹೊಗಳಿಕೊಳುವೆ ದಾನವಾ
ನಿಲ್ಲಿಸು ಕ್ಷುದ್ರಗಾನವಾ.''

ಈ ಶತಶತಮಾನಗಳ ಕ್ಷುದ್ರಗಾನದಿಂದ ಬೇಂದ್ರೆ ಬೇಸತ್ತು, ಮಾನವರ ದುಷ್ಕೃತಿಗಳನ್ನೇ ನಾವು ಸಂಸ್ಕೃತಿಯೆಂದು ಬಿಂಬಿಸುತ್ತಿರುವುದನ್ನು, ಇದನ್ನೇ ಹೊಗಳಿಕೊಳ್ಳುವ ದಾನವ ಸ್ವಭಾವವನ್ನು ಹೀಗಳೆಯುತ್ತಾರೆ. ಈ ಕ್ಷುದ್ರಗಾನವನ್ನು ನಿಲ್ಲಿಸಲು ಕರೆ ನೀಡುತ್ತಾರೆ. ಇದಕ್ಕೆಲ್ಲ ಮರಗಿ ನುಡಿಯುತ್ತಾರೆ :

''ಮರೆವಿನ ಮಾಗಡಲಿನಲ್ಲಿ
ತೇಲುತಿಹುದು ವೇದವು
ಆ ಅನಂತ ಭೇದವು
ನೆತ್ತಿಯಲ್ಲಿ ಎತ್ತಿಕೊಂಡು
ನಡುಗತಿಹ ವಿಶೇಷನು
ಅವನೆ ಜೀವಶೇಷನು.''

ಎಂದು. ನಾಗರಿಕತೆ, ಸಂಸ್ಕೃತಿಗಳ ಹೆಸರಿನಲ್ಲಿ ನಡೆಯುವ ಅಪಾರ ಸಂಶೋಧನೆಗಳು, ಅಖಂಡ ಉಲ್ಲೇಖಗಳು. ಎಲ್ಲವೂ ಪಂಡಿತರು, ತಮ್ಮ ತಮ್ಮ ಸ್ವಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವ ಭೇದ ಇವರನ್ನು ವಿಡಂಬಿಸಿ ಬರೆದ ಕವನ ಇದು. ಬೇಂದ್ರೆಯವರ ಸಂದೇಶವೆಂದರೆ ಇಡೀ ಜ್ಞಾನವೇ ದ್ವೇಷ, ಅಸೂಯೆಗಳ ಪ್ರದರ್ಶನಗಳಾದರೆ, ಶಾಂತಿ-ಸೌಹಾರ್ದತೆಯ ಪ್ರತಿಪಾದನೆಯನ್ನು ಯಾರು ಮಾಡಬೇಕು? ಇತಿಹಾಸದಿಂದ ಹಿಡಿದು ಮಹಾಕಾವ್ಯ, ಮಹಾಪ್ರಬಂಧಗಳವರೆಗೆ ಯುದ್ಧ ದ್ವೇಷ ಸಾಧನೆಗಳ ಇತಿಹಾಸವೇ ಆದರೆ ''ಶಾಂತಿ ರಸವೇ ಪ್ರೀತಿಯಿಂದ ಮೈದೋರಿತಣ್ಣ'' ಎಂಬ ಬೇಂದ್ರೆ ಕಣಸಿನ ಬೆಳಗು ಕಾಣುವುದು ಎಂದು?

ಸಾಂಪ್ರದಾಯಿಕ ಮಹಾಕಾವ್ಯ ಬೇಂದ್ರೆ ಬರೆಯದಿರಲು ಈ ಜೀವನದೃಷ್ಟಿಯೇ ಕಾರಣವೆಂದು ತೋರುತ್ತದೆ. ಅಂತೆಯೇ ಅವರು 'ಜೀವನ ಮಹಾಕಾವ್ಯ'ವನ್ನು ರಚಿಸಿದರು, ಅದಕ್ಕೆ 'ಔದುಂಬರಗಾಥೆ'ಯ ರೂಪವನ್ನು ಡಾ॥ ವಾಮನ ಬೇಂದ್ರೆ ನೀಡಿದ್ದಾರೆ.

''ಮಧುವಾತಾ ಋತಾಯತೆ!'' ಇದೊಂದು ಭವಿಷ್ಯಗಾಮಿ ಕವನ. ನವಯುಗದ ಆವಿರ್ಭಾವದ ನಿರೀಕ್ಷೆಯ ಕವನ. ಬೇಂದ್ರೆಯವರು ಈ ಕವನದ ಭಾವ ಸಂದರ್ಭದಲ್ಲಿ ಹೀಗೆಂದು ಬರೆದಿದ್ದಾರೆ. ''ನವಯುಗವು ಅನಿವಾರ್ಯವಾಗಿ ಬಂದಂತೆ ತೋರಿದರೂ ಒಳಗೆ ಸಿದ್ಧತೆ ಇರದೆ, ಹೊರಗೆ ಪಾತ್ರ ಬರಲಾರದು. ಒಳಗೆ ಬರಿಯ ಕ್ಷೋಭವಿದ್ದರೆ ಹೊರಗೂ ಅದೇ ಫಲ'' - ಈ ಕವನದ ಆಂತರ್ಯವನ್ನು ಅರಿತಾಗ, ಕಾರ್ಲ್‌ಮಾರ್ಕ್ಸ್ ಮಾಡುವ ಪ್ರತಿಪಾದನೆಗೆ ಹೋಲುವಂತಿದೆ. ಯಾವುದೇ ಕ್ರಾಂತಿಗೆ ಬಾಹ್ಯ ಸಂದರ್ಭಗಳು ಪರಿಪಕ್ವವಾಗಿದ್ದರೂ ನೊಂದ-ಬೆಂದ-ಶೋಷಿತ ವರ್ಗಗಳು, ಈ ಹೊರಗಿನ ವಸ್ತುಸ್ಥಿತಿಯನ್ನು ಬಳಸಿಕೊಂಡು, ಶೋಷಿತ ವರ್ಗವನ್ನು ಸಂಘರ್ಷದ ಮೂಲಕ ಪರಾಭವಗೊಳಿಸಿ, ರಾಜ್ಯಾಧಿಕಾರವನ್ನು ಪಡೆಯದೇ ಹೋದರೆ, ಶೋಷಕ ಸಾಮ್ರಾಜ್ಯ ನಿರಾತಂಕವಾಗಿ ಮುಂದುವರಿಯುತ್ತದೆ. ಅಂತೆಯೇ ನವಯುಗ ಆರಂಭವಾಗಲು ಎಲ್ಲ ಸ್ಥಿತಿಗತಿಗಳು ರೂಪುಗೊಂಡಿದ್ದರೂ, ಆ ಬದಲಾವಣೆಯನ್ನು ತರುವ ಶಕ್ತಿಗಳು ಹೊರಬಂದು ನವಯುಗವನ್ನು ತರದೇಹೋದರೆ, ಯಥಾಸ್ಥಿತಿ ಹಾಗೆಯೇ ಉಳಿಯುತ್ತದೆ. ಯಾವುದೋ ಬಾಹ್ಯಶಕ್ತಿ ಬದಲಾವಣೆಯನ್ನು ತನ್ನಷ್ಟಕ್ಕೆ ತಾನೇ ತರಬಲ್ಲದು ಎಂಬ ಭಾವನೆ ನಿರುಪಯುಕ್ತ ಎಂಬ ಸತ್ಯದ ಪರಿಚಯ ಇಲ್ಲಿ ಮಾಡಿಕೊಡಲಾಗಿದೆ.

'ಕಲ್ಲು ಕೋಳಿಯು ಕೂಗುವ ತನಕ ಕಲ್ಕಿಯು ಬರನು'-ಕಲ್ಲು ಕೋಳಿ ಕೂಗುವುದಿಲ್ಲ, ಕಲ್ಕಿಯು ಬರುವುದಿಲ್ಲ. ಆದರೆ ಭೂತಳದಲ್ಲಿ ನೆಲೆಸಿರುವ ಅನ್ಯಾಯಗಳ ವಿರುದ್ಧ ಬಂಡಾಯವೆದ್ದು, ನ್ಯಾಯಸ್ಥಾಪನೆಗೆ ಜನತೆ ಹೋರಾಡಲು ಸಿದ್ಧವಾದಾಗ, ನವಯುಗಾರಂಭವಾಗುತ್ತದೆ. ''ಸಭ್ಯತೆಗೆ ಹತ್ತಿದೆ ತೊನ್ನು, ಮಣ್ಣು-ಹೆಣ್ಣು-ಹೊನ್ನು'' - ನಿಜ! ಹೊನ್ನು-ಮಣ್ಣು-ಹೆಣ್ಣುಗಳಿಗಾಗಿ ನಡೆಯುವ ಕಾಳಗಗಳಲ್ಲಿ ಇವುಗಳನ್ನು ಮೀರಿನಿಂತ ಹೊಸವರ್ಗ, ಇದರ ಬದಲಾವಣೆಗೆ ಸಿದ್ಧವಾಗಬೇಕು. ಬರಿ ಮಾತಿನಿಂದ ಮಾವಿನಕಾಯಿ ಉದುರುವುದಿಲ್ಲ. ಫಲಬೇಕಾದರೆ ಅನ್ಯಾಯದ ವಿರುದ್ಧ ಹೋರಾಟಕ್ಕೆ ಸಿದ್ಧರಾಗಬೇಕಾಗುತ್ತದೆ.

''ಹಳೆಯವನು ಬಿದ್ದ, ಹೊಸಹೊಸಬ ಗೆದ್ದ, ಕೋಡಂಗಿ ನಡುವೆ ಎದ್ದ,
ನವೋನವದ ಬಯಲಾಟ ಭಾರಿ ತಾಂಡವವೆ ರಾಷ್ಟ್ರದುದ್ದ.

ಫ್ರೂಡು, ಮಾರ್ಕ್ಸು, ಆಡ್ಲರು, ಜುಂಗು, ಮೇಲೀಗ ಐನಸ್ಟೀನು,
'ಕ್ಯಾಪಿಟಲ್ಲು' ಏನು? ಆಟಮ್ಮು ಬಾಂಬು, ತಲೆತುಂಬ ತಿಂಡಿ, ಹೇನು!
ಬಾಯಲ್ಲಿ ಶಾಂತಿ, ತಲೆಯಲ್ಲಿ ಭ್ರಾಂತಿ, ಸಂಕ್ರಾಂತಿ ಎದೆಯ ತುಂಬ,
ಚಂಡಮುಂಡರಾ ಹಳೆಯ ದಂಡು ಅಭಿನವ ನಿಕುಂಭ ಕುಂಭ.''

ಫ್ರ್ಯೂಡ್-ಮಾರ್ಕ್ಸ್-ಜುಂಗು-ಐನ್‌ಸ್ಟಿನ್ - ಇವರೆಲ್ಲರ ವಿಚಾರಗಳು ಬರೀ ತಲೆತುಂಬಿಕೊಂಡರೆ, ಆಗುವುದು ಭ್ರಾಂತಿ ಮಾತ್ರ. ಅದು ಬಾಯಲ್ಲಿ ಶಾಂತಿ ಮಂತ್ರವನ್ನು ಜಪಿಸಿದಂತಲ್ಲ. ಇದು ಕ್ರಿಯಾಶೀಲವಾಗಬೇಕಾಗುತ್ತದೆ. ಬೇಂದ್ರೆ ಹೇಳುತ್ತಾರೆ :

"ಹೊಡೆಗಾಡಿ ಮುಂದೆ, ಫಾಲ್ಗುನವು ಹಿಂದೆ, ಆ ಮುಂದೆ ಚೈತ್ರದುದಯ"

ಫಾಲ್ಗುನ ಮಾಸ ಬಂದು ಹೋದಮೇಲೆ ಚೈತ್ರ ಬರಲೇಬೇಕು. ಇದು ಪ್ರಕೃತಿ ನಿಯಮ. ಇನ್ನು ಮುಂದೆ ಚೈತ್ರ ಬರುತ್ತದೆ. ಆದರೆ ಸಾಮಾಜಿಕ ಕ್ಷೇತ್ರದಲ್ಲಿ ಪ್ರಕೃತಿಯಲ್ಲಿಯಂತೆ ತನ್ನಷ್ಟಕ್ಕೆ ತಾನೇ ಹಳೆಯದು ಹೋಗಿ ಹೊಸತು ಬರುವುದಿಲ್ಲ. ಅದಕ್ಕೆ ಪರಿಶ್ರಮ-ಸಂಘರ್ಷ ಬೇಕೇಬೇಕು. ಆ ನವಯುಗಕ್ಕಾಗಿ ನಾವೆಲ್ಲರೂ ಕ್ರಿಯಾಶೀಲರಾಗೋಣ.

ಈ ಕವನದಲ್ಲಿಯ ಕೆಲವು ಮಹತ್ವದ ಸಾಲುಗಳು ಹೀಗಿವೆ : 'ಸೇದಬೇಡಿ, ಸೇದಿದರೆ ಬೇಂದ್ರೆ ಬೀಡಿ" - ಈ ಬ್ರಾಂಡ್ ಯುಗದ ಮನೋಧರ್ಮವನ್ನು ಸಂಕೇತಿಸುವ ಇಂಥ ಹೇಳಿಕೆಗಳು ಬೇಂದ್ರೆ ಕಾವ್ಯದಲ್ಲಿ ಅನೇಕಾನೇಕ ಇವೆ.

"ಹೈಕ ನೈ! ಹೈ ಕ ನೈ! ನಹಿ! ನಹಿ! ಹಯ್ ಹಯ್-
ಅಲ್ಲದುದನಹುದೆಂಬ ಅಜ್ಞಾನಿಯೊಡನಾಟ
ಕಲ್ಲು ಹಾಯ್ದಂತೆ-'ಸೈ' ಎಂದಿತಾಗ."

ಈ ಇಗೋಕ್ಲ್ಯಾಷಸ್‌ನಲ್ಲೇ ಪ್ರಚಲಿತ ವಿದ್ಯಮಾನಗಳು ಅಡಗಿವೆ ಎಂಬ ಸಂಕೇತ ಇಲ್ಲಿ ಬಿಂಬಿಸಲಾಗಿದೆ.

"ಕ್ಷಣವೊಂದು ಮೌನ ಇಹುದೆಂದು ನಿನಗೆ ತಿಳಿದೀತು ಎಂದು ಬಂಧು
ತೆರೆಮರೆಯ ಕೆಳಗೆ, ಇಲ್ಲದರ ಒಳಗೆ, ಗಾಂಭೀರ್ಯ ಭಾವಸಿಂಧು
ಇದು ಯಾವ ಧಾಟಿ ಕಿರಿಚಾಟ ವಾಟಿ ಪೈಶಾಚ್ಯನೃತ್ಯಬಂಧ.
ಹುಳಿಜೊಟ್ಟ ಮದ್ಯ, ನಿನಗಹುದೆ ಹೃದ್ಯ? - ಗಂಧಕದ ಸುಡುವ ಗಂಧ?"

ಗಂಧಕದ ಸುಡುವ ಗಂಧವೇ ಹೃದ್ಯವಾಗಿಬಿಟ್ಟರೆ, ಮುಂದಿನಗತಿ-ಅಧೋಗತಿ. ನವಯುಗವು ಕೂಡ ಕೇವಲ ಕನಸಾಗಿ ಬಿಡುತ್ತದೆ.

"ಓ ಚಾರ್ವಾಕು" ಕವನದ ಸಂದೇಶವು ಮಾರ್ಮಿಕವಾಗಿದೆ. ನಾಸ್ತಿಕವಾದವನ್ನು ಹುಟ್ಟುಹಾಕಿದ ಪ್ರಾಚೀನ ಋಷಿ ಚಾರ್ವಾಕು.

"ಋಣಂ ಕೃತ್ವಾ ಘೃತಂಪಿಬೇತ್ ಭಸ್ಮೀಭೂತಸ್ಯ ದೇಹಸ್ಯ ।
ಕುತಃ ಪುನರಾಗಮನಂ"

ಇದು ಚಾರ್ವಾಕ ಸಿದ್ಧಾಂತದ ತಿರುಳು. ಪೂರ್ವಜನ್ಮ ಪುನರ್ಜನ್ಮಗಳಲ್ಲಿ ನಂಬಿಗೆ ಇಲ್ಲದೆ, ಇದೇ ಜೀವನದ ಸುಖ-ದುಃಖಗಳನ್ನೇ ಅವಲಂಬಿಸಿ, ತನ್ನ ತತ್ವಗಳನ್ನು ಹೆಣೆದಿದ್ದಾನೆ ಚಾರ್ವಾಕ. ಈ ಭೌತವಾದವು ಪಾಶ್ಚಿಮಾತ್ಯರ ವಿವೇಚನೆಯಲ್ಲಿ ಗತಿತಾರ್ಕಿಕ ಭೌತವಾದ (ಡಯಾಲೆಕ್ಟಿಕಲ್ ಮೆಟೀರಿಯಲಿಸಮ್) ಆಗಿ, ಮಾರ್ಕ್ಸ್ ಹಾಗೂ ಎಂಗೆಲ್ಸ್ ಇವರ ಸೈದ್ಧಾಂತಿಕ ಪ್ರತಿಪಾದನೆಯಲ್ಲಿ ವೈಜ್ಞಾನಿಕ ಸಮಾಜವಾದವಾಗಿ ರೂಪುಗೊಂಡಿತು. ಆದರೆ ಭಾರತದಲ್ಲಿ ಆಧ್ಯಾತ್ಮವಾದದ ಪ್ರಬಲತೆ ಹಾಗೂ ಆಧ್ಯಾತ್ಮವಾದಕ್ಕೆ ಆಳುವ ರಾಜ ಮಹಾರಾಜರ ಬೆಂಬಲದೊಂದಿಗೆ, ಪ್ರಬಲ

ಸಿದ್ಧಾಂತವಾಗಿ, ಚಾರ್ವಾಕ-ಲೋಕಾಯತ ಸಿದ್ಧಾಂತದ ಸಮಾಧಿಗೆ ಎಡೆಯಾಯಿತು. ಈ ಚಾರಿತ್ರಿಕ ಹಿನ್ನೆಲೆಯಲ್ಲಿ ''ಓ ಚಾರ್ವಾಕ!'' ಕವನವನ್ನು ಅಧ್ಯಯನ ಮಾಡಬೇಕು. ಇಲ್ಲಿ ಅಧ್ಯಾತ್ಮವಾದದ ದೃಷ್ಟಿ ಅಭಿವ್ಯಕ್ತಗೊಂಡಿರುವುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಇದರ ಔಚಿತ್ಯವನ್ನು ಅರ್ಥೈಸಬೇಕು. ಗತಿತಾರ್ಕಿಕ ಭೌತವಾದ ಪ್ರತಿಪಾದಕರು ಈ ಕವನದಲ್ಲಿಯ ವಿಚಾರಗಳನ್ನು ಸರಿಯಾಗಿ ಅರಿಯಬೇಕು. ಈ ಕವನದ ಭಾವ ಸಂದರ್ಭದಲ್ಲಿ ''ಬಾಯ್ಬಡಕ ರಾಜಕೀಯ ವೇದಾಂತಿಗಳಿಗೆ ಕೊರತೆ ಇಲ್ಲದ ಕಾಲವದು. ಚಾರ್ವಾಕ ಅದರ ಮೂಲ ಪುರುಷ'' ಎಂದಿದೆ. ಈ ದೃಷ್ಟಿಯಿಂದ ಈ ಕವನವನ್ನು ಬಾಯ್ಬಡಕ ರಾಜಕೀಯ ವೇದಾಂತಿಗಳ ಚೇಷ್ಟೆ-ಕುಚೇಷ್ಟೆಗಳ ಪ್ರತೀಕವೆಂಬ ಅರ್ಥದಲ್ಲೂ ಪರಿಶೀಲಿಸಬಹುದಾಗಿದೆ.

''ದಂಡ ತಪ್ಪಿಸುತ ಪಿಂಡ ಗಳಿಸಿ ಉಂಡಾಡಿ ಭಟ್ಟನಾಗಿ
ಯಾರ ಮಂತ್ರಿಯೋ, ಯಾರ ತಂತ್ರಿಯೋ ಶಿಷ್ಟಧಿಟ್ಟನಾಗಿ,
ಕೀರ್ತಿಯಿರಲಿ ಅಪಕೀರ್ತಿಯಿರಲಿ ದಿನ ವರ್ತಮಾನದಲ್ಲಿ
ದಪ್ಪ ಅಕ್ಷರದ ಪದವಿ ಪಡೆದು ಇಹೆ ಮೇಲುಸಾಲಿನಲ್ಲಿ.''

ಇದು ಇಂದಿನ ಅವಕಾಶವಾದಿ ರಾಜಕಾರಣಿಗಳ ನೈಜ ಚಿತ್ರಣವಾಗಿದೆ. ಅವರು ಏನಕೇನ ಪ್ರಕಾರೇಣ ಪ್ರಸಿದ್ಧಿ ಪುರುಷೋಭವ ಎಂಬಂತೆ ಹೇಗೋ ಪ್ರಚಾರದಲ್ಲಿರುತ್ತಾರೆ, ದಪ್ಪ ಅಕ್ಷರದ ಪದವಿ ಪಡೆದು ಮೇಲು ಸಾಲಿನಲ್ಲೇ ಇರುತ್ತಾರೆ.

ಬೇಂದ್ರೆಯವರು ಚಾರ್ವಾಕ ಬುದ್ಧಿಮತ್ತೆ, ಶಕ್ತಿ ಸಾಮರ್ಥ್ಯಗಳ ಬಗ್ಗೆ ಮೆಚ್ಚುಗೆ ತೋರುತ್ತಾರಾದರೂ, ಅವರ ಗುರಿಗಳ ಬಗ್ಗೆ ಅವರಿಗೆ ಸಮ್ಮತಿಯಿಲ್ಲ. ಅಂತೆಯೇ ಈ ಕೆಳಗಿನ ಎರಡು ನುಡಿಗಳು ಗಮನಾರ್ಹವಾಗಿವೆ :

''ಹದಿನೆಂಟು ಜಾತಿ ಹದಿನೆಂಟು ನೀತಿ ಹದಿನೆಂಟು ಕಾರಭಾರಾ
ಅಠಾರಾ ಕಚೇರಿ ಅಠಾರಾ ವಿಚಾರಿ ತೀಂತೇರಾ ನೌ ಅಠರಾ
ಚೌರ್‍ಯಾಂಶಿ ಲಕ್ಷ ಯೋನಿಯಲಿ ತಿರುಗಿ ಆಸನವ ಕಲಿತೆ ನೀನು.
ಚೌಸಷ್ಟಿ ಕಲೆಯ ತಿರಸಷ್ಟಿ ನಿನಗೆ ನಾ ಬೇರೆ ಹೇಳಲೇನು?

ಛಪ್ಪನ್ನ ದೇಶ ಛಪ್ಪನ್ನ ಭಾಷೆ ಏನೇನೊ ಗಂಟು ಹಾಕಿ,
ಹಿಂದಿಯನು ಮುಂದೆ ಗುರಿಮಾಡಿ ಹಿಡಿದೆ ಬೆದರಿಕೆಯ ಆ ತುಪಾಕಿ;
ಬ್ರಹ್ಮಾಂಡವಾದಿ ಗೃಹಭೇದಿ ನೀನು ಕಾಂಬುದಕೆ ಅತಿ ಉದಾರ;
ಬಲೆಯೊ ಉರಲೊ ಬೀಸಿರುವೆ, ಸುತ್ತ ನವನೀತಿ ಸೂತ್ರಧಾರ.''

ಚಾರ್ವಾಕನ ಸಾಮರ್ಥ್ಯ, ಪಾಂಡಿತ್ಯದ ಬಗ್ಗೆ ಅಪಾರ ಮೆಚ್ಚುಗೆಯನ್ನು ಇಲ್ಲಿ ತೋರಲಾಗಿದೆ. ಹದಿನೆಂಟು ಜಾತಿ, ಹದಿನೆಂಟು ನೀತಿ, ಹದಿನೆಂಟು ಕಾರಭಾರಾ, ಹದಿನೆಂಟು ಕಚೇರಿ. ಹದಿನೆಂಟು ವಿಚಾರಿ, ಅರವತ್ನಾಲ್ಕು ಕಲೆಗಳನ್ನು ಕಲಿತ ಹಟವಾದಿ, ಇಂಥವನಿಗೆ 'ನಾ ಬೇರೆ ಹೇಳಲೇನು?' ಎಂದು ಕವಿ ಕೇಳುತ್ತಾನೆ. ಆದರೆ ಕವಿ ದೃಷ್ಟಿಯಲ್ಲಿ ಉದ್ಭವವಾಗಿರುವ ಯಕ್ಷಪ್ರಶ್ನೆಯೆಂದರೆ :

"ಬ್ರಹ್ಮಾಂಡವಾದಿ ಗೃಹಭೇದಿ ನೀನು ಕಾಂಬುದಕೆ ಅತಿ ಉದಾರ;
ಬಲೆಯೊ ಉರಲೊ ಬೀಸಿರುವೆ ಸುತ್ತ ನವನೀತಿ ಸೂತ್ರಧಾರ."

ಚಾರ್ವಾಕ ಕಾಣಲು ಅತಿಉದಾರ, ಆದರೆ ಇವನು ಬೀಸಿರುವುದು "ಬಲೆಯೊ" "ಉರಲೊ" ತಿಳಿಯಲಾರದಂತಿದೆ. ಇವನು "ನವನೀತಿಸೂತ್ರಧಾರ!" ಆದಕಾರಣ, ಈ ಸೂತ್ರ ಯಾರನ್ನು ಎಲ್ಲಿಗೆ ಒಯ್ಯುತ್ತದೆಯೋ ತಿಳಿಯಲಾರದೆ ಪ್ರಶ್ನಾರ್ಥಕವಾಗಿದೆ. ಈ ಪ್ರಶ್ನೆಗೆ ಉತ್ತರ ಅನ್ವೇಷಣಾರ್ಹ.

"ಯುದ್ಧ ಬಂತು ಮನೆಯವರೆಗೆ" ಕವನವನ್ನು ೧೯೪೦-೪೩ರಲ್ಲಿ ನಡೆಯುತ್ತಿದ್ದ ವಿಶ್ವಯುದ್ಧದ ಕಾಲದಲ್ಲಿ ಬರೆದ ಕವನ. ಇದು ಅತ್ಯಂತ ಮಾರ್ಮಿಕವಾಗಿದೆ. ಇಲ್ಲಿ ಅಭಿವ್ಯಕ್ತಗೊಂಡಿರುವ ಪ್ರತಿಯೊಂದು ವಿಚಾರವು ಚಿಂತನೀಯವಾಗಿದೆ. ಇಲ್ಲಿಯ ಸಂದೇಶ ಆಚರಣೀಯವಾಗಿದೆ. ಯುದ್ಧ ಬಂದಾಗ ಎಲ್ಲರೂ ಒಂದಾಗಲೇಬೇಕು ಎಂಬ ಸಂದೇಶ ಇಲ್ಲಿದೆ. ಒಳಜಗಳಗಳನ್ನು ತೊರೆದು, ತಾಯಿನೆಲವ ರಕ್ಷಿಸಲು ಶತ್ರುಗಳ ಮೇಲೆ ಐಕಮತ್ಯದ ದಾಳಿಯನ್ನು ಮಾಡಿರಿ ಎಂಬ ಹಿತೋಪದೇಶವಿದೆ. ಅತಿಮುಖ್ಯವಾಗಿ ಇಲ್ಲಿ ಬೇಂದ್ರೆ ಜಾಗತಿಕ ಸಂದೇಶ ಪ್ರತಿಬಿಂಬಿತವಾಗಿದೆ :

"ನರಮನುಷ್ಯ ಒಂದೆ ಜಾತಿ
ಎಲ್ಲ ಜನಕೆ ಒಂದೆ ನೀತಿ
ಹಾಡಿರಿ ನವಕರ್ಮಗೀತಿ
ಹಾಡಿ ಮುಂದೆ ಸಾಗಿರಿ
ನೋವ ಕಂಡು ನೋಯಿರಿ
ಕೊಲೆಯಿಂದಲು ಕಾಯಿರಿ
ಅಮೃತರಾಗಿ ಸಾಯಿರಿ."

....

....
ಬಾಳ ಗೆದ್ದು ಬಾಳಿರಿ
ನಿಮ್ಮ ನೀವೆ ಆಳಿರಿ
ಬಂದ ಕಷ್ಟ ತಾಳಿರಿ.

ಜಗಕೆ ಬಂತು ಮಹಾಪ್ರಳಯ
ಒಡಿಯಾಯಿತು ಭೂಮಿವಳಯ
ಇಳಿಯಲಿಲ್ಲಿ ಸ್ವರ್ಗನಿಳಯ
ದೇವಜಾತಿಯಾಗಿರಿ."

ಎಂದು ಹೇಳುವ ಬೇಂದ್ರೆ 'ಒಲವಿನೊಲವ ಬೆಳೆಯಿರಿ' ಎಂದು ಕರೆಕೊಟ್ಟಿದ್ದಾರೆ. ಇಲ್ಲಿ ಗಮನಿಸಬೇಕಾದ ಮಹತ್ವದ ಅಂಶವೆಂದರೆ, ಮಹಾಯುದ್ಧ ಕಾಲದಲ್ಲಿ 'ಜಗಕೆ ಬಂತು

ಮಹಾಪ್ರಳಯ ಹಿಡಿಯಾಯಿತು ಭೂಮಿವಳಯ' ಎನ್ನುವುದು. ಇಡೀ ಭೂಮಂಡಲವೇ ಒಂದು ಹಿಡಿಯಷ್ಟು ಸಣ್ಣದಾಗಿಬಿಟ್ಟದ್ದು 'ಬಾಳಗೆದ್ದು ಬಾಳಿರಿ, ನಿಮ್ಮ ನೀವೆ ಆಳಿರಿ' ಎನ್ನುತ್ತಾರೆ. ಸ್ವಾತಂತ್ರ್ಯಪೂರ್ವದ ಈ ಕವನದಲ್ಲಿ 'ನಿಮ್ಮ ನೀವೆ ಆಳಿರಿ' ಎಂಬ ಸಂದೇಶ ಅತ್ಯಂತ ವೈವಿಷ್ಟ್ಯಪೂರ್ಣವಾಗಿದೆ. ಅಂತೆಯೇ ಈ ಕವನದಲ್ಲಿ ಬೇಂದ್ರೆಯವರ ಅಮರ ಸಂದೇಶ- "ಒಲವೆ ನಮ್ಮ ಬದುಕು"- ನೀಡಿದ್ದಾರೆ.

"ಸ್ವಾತಂತ್ರ್ಯದೇವಿಗೆ" - ಈ ಕವನವು ಸಾರ್ವತ್ರಿಕ ಮೌಲ್ಯವುಳ್ಳ ಒಂದು ಮಹಾನ್ ಗೀತೆಯಾಗಿದೆ. ಇಲ್ಲಿ ಸಾರ್ವಕಾಲಿಕ ಸಂದೇಶವಿದೆ, ಕನ್ನಡಕ್ಕೇ ಒಂದು ವಿಶೇಷ ಆದೇಶವಿದೆ. ಸ್ವಾತಂತ್ರ್ಯದ ಹುಟ್ಟು ಹಬ್ಬವು ಸಾವಿರದ ಕಬ್ಬವನ್ನು ಕರೆವುದು ಎಂದು ಹೇಳುವುದರಲ್ಲಿ ಬೇಂದ್ರೆಯವರು ಈ ಕವಿತೆಗೆ ಅಮರತ್ವವನ್ನು ನೀಡಿದ್ದಾರೆ. ಇದು 'ಸಾವಿರದ' (ಸಾವು+ಇರದ) ಕಬ್ಬವಾಗಿದೆ. ಇಂಥ ಕವನಕ್ಕೆ ಗೆಜ್ಜೆ ಬೇಡ, ರಾಗ ಬೇಡ, ಇದು ತನ್ನಷ್ಟಕ್ಕೆ ತಾನೇ ಮೆರೆವ ಗೀತೆ. ಈ ಸಾಲುಗಳು ಬೇಂದ್ರೆಯವರ 'ಕುಣಿಯೋಣು ಬಾರ' ಕವನವನ್ನು ನೆನಪಿಸುತ್ತದೆ. 'ಸೆಜ್ಯಾಕೆ, ಗೆಜ್ಯಾಕೆ, ತಾಳದ ಚಿಂತ್ಯಾಕೆ, ಕುಣಿಯೋಣು ಬಾರಽ ಇದು ಇಲ್ಲಿಯ ಸ್ಫೂರ್ತಿಬಿಂಬ. ಈ ಕವನವನ್ನು ಜನವರಿ ೨೬ರ ಅನುಸ್ಮರಣೆಗೆಂದು ಬರೆದಿದ್ದರೂ ಕೂಡ, ಇದನ್ನು ರಚಿಸಿದಾಗ ಕೊರಿಯಾ ಯುದ್ಧ ನಡೆದಿತ್ತು, ಇದು ಮಹಾಯುದ್ಧದಂತೆ ವಿಶ್ವವ್ಯಾಪಿಯಾಗುವ ಲಕ್ಷಣಗಳನ್ನು ಪ್ರಕಟಿಸಿದ್ದರಿಂದ ಈ ಕವನದಲ್ಲಿ ಸ್ವಾತಂತ್ರ್ಯ ರಕ್ಷಣೆಗೆ, ಯುದ್ಧ ಸನ್ನದ್ಧತೆಯ ಅವಶ್ಯಕತೆಯನ್ನು ಬಿಂಬಿಸಲಾಗಿದೆ. ರಾಷ್ಟ್ರದ ರಕ್ಷಣೆಗೆ ರಾಷ್ಟ್ರಜರು ಹೇಗೆ ನಿರಂತರ ಜಾಗರೂಕತೆಯನ್ನು ಹೊಂದಿರಬೇಕೆಂಬ ಸಂದೇಶವಿದೆ.

"ಶಾಂತ ಜಲಧಿಯಂತರಂಗ
ಕಾರಿತಣ್ಣ ಬೆಂಕಿಯ;
ಕೋರಿಯಾದ ಕುರುಕ್ಷೇತ್ರ
ಮುರಿಯಿತಗೋ ಶಂಕೆಯ
ಮರೆಯಿಸುವದೊ ನೆನೆಯಿಸುವದೊ
ರಾವಣನಾ ಲಂಕೆಯಾ !

ಮಹಾಕಾಳಿ ಇಳಿದಳಣ್ಣ
ತನ್ನ ರುದ್ರಲೀಲೆಗೆ.
ಸೋದರರಾ ರಕ್ತ ಕುಡಿಯೆ
ಚಾಚಿ ಒಂದೆ ನಾಲಿಗೆ.
ಬೇರೆ ದೇವಿ ಬರುತಲಿಹಳು
ನೋಡು ಸ್ವಲ್ಪ ಮೇಲಿಗೆ.

ಇಲ್ಲಿ ಕೊರಿಯಾ ಯುದ್ಧದ ಉಲ್ಲೇಖವಿದೆ. ಈ ಯುದ್ಧ ರಾವಣನ ಲಂಕೆಯನ್ನು ಹೇಗೆ ನೆನಪಿಸುತ್ತದೆ ಎಂದು ಹೇಳುವುದರೊಡನೆ, ಹೇಗೆ ಯುದ್ಧದ ಮಹಾಕಾಳಿ ಸೋದರರ ರಕ್ತ ಕುಡಿಯಲು ತನ್ನ ನಾಲಿಗೆಯನ್ನು ಚಾಚಿದೆ ಎಂಬ ರೌದ್ರವನ್ನು ಬಣ್ಣಿಸುತ್ತಿದ್ದಂತೆಯೇ 'ಬೇರೆ ದೇವಿ

ಬರುತಲಿಹಳು, ನೋಡು ಸ್ವಲ್ಪ ಮೇಲಿಗೆ' ಎಂದು ಹೇಳುವುದರಿಂದ ಸ್ವಾತಂತ್ರ್ಯದೇವಿಯ ಆಗಮನ ಕುರಿತು ಮುನ್ಸೂಚನೆ ನೀಡುತ್ತಾರೆ. ಅಂತೆಯೇ ಮಲಗಿರುವ ಮಾನವರನ್ನು ಎಚ್ಚರಿಸುತ್ತಾರೆ ಕೂಡ:

"ಮರು ಮುಸುಕು ಎಳೆದುಕೊಂಡು
ಮಲಗಿದೇಕೆ ಮಾನವಾ ?
ಸುಡಿಸಿ ಸುಟ್ಟು ಕೆಡಿಸಿ ಕೆಟ್ಟು
ಕುಣಿಯುತಿಹನು ದಾನವಾ
ಧೀರೆ ಇಳೆಯ ಸೀರೆ ಸೆಳೆವ ;
ಉಳಿಸೊ ಉಳಿಸು ಮಾನವಾ"

ಎಂದು ನುಡಿಯುವ ಮೂಲಕ, ಯುದ್ಧ ಹೂಡುವವರು ಇಳೆಯ ಸೀರೆಯನ್ನೇ ಸೆಳೆವ ದಾನವರು' ಎಂದು ಅವರ ಅಮಾನುಷ ರಾಕ್ಷಸೀ ಕೃತ್ಯವನ್ನು ಬಯಲಿಗೆಳೆದು, ಭೂತಾಯಿಯ ಮಾನವನ್ನು ಉಳಿಸೋ, ಎಚ್ಚರಾಗೋ ಮಾನವಾ ಎಂದು ಕರೆನೀಡುತ್ತಾರೆ.

ಈ ಕವನದಲ್ಲಿ ಗಮನಿಸಬೇಕಾದ ಮಹತ್ವದ ಅಂಶವೆಂದರೆ ವಿಶ್ವಮಾನವತ್ವದ ಪ್ರತಿಪಾದನೆ.

"ಅದೇ ಅನ್ನ ಅದೇ ನೀರು
ವಿಶ್ವನರನ ಹಸಿವೆಗೆ ;
ಬೆಳಕು ಗಾಳಿ ಸುತ್ತು ಒಂದು
ಪ್ರಾಣದ ಒಳ ಅಸುವಿಗೆ ;
ಒಂದೆ ಬಯಲು ಬದುಕಲುಂಟು
ವಸುಂಧರೆಯ ಹಸುವಿಗೆ."

ಹೀಗಿದ್ದಾಗಲೂ ಏಕೆ ಯುದ್ಧ? ಏಕೆ ದಾನವತೆ? ಎಂಬುದು ಬೇಂದ್ರೆಯವರ ಪ್ರಶ್ನೆಗಳು. ಆದರೆ ರಣರಂಗಕ್ಕೆ ಧುಮುಕುವ ಛಾತಿ ಇರಲೇಬೇಕು. ಏಕೆಂದರೆ ಭೂತಾಯಿಯ ರಕ್ಷಣೆ ನಮ್ಮ ಕರ್ತವ್ಯ. ಅಂತೆಯೇ ಬೇಂದ್ರೆ ಗುಡುಗುತ್ತಾರೆ :

"ನುಗ್ಗಿರಣ್ಣ ರಣದ ಕಣಕೆ,
ಅಸುರರಿಂದ ಬಿಡಿಸಿರಿ-
ತಾಯ ಸೆರೆಯ, ಎಲ್ಲರಿಂದ
ಗೆಲವಿನ ಗುಡಿ ಹಿಡಿಸಿರಿ.
ಭೂಮಿದೇವಿ ನಲಿಯುವಂತೆ
ವಿಜಯಗೀತ ನುಡಿಸಿರಿ."

ಇಲ್ಲಿ ಬೇಂದ್ರೆಯವರ ವಿಶ್ವಪ್ರಜ್ಞೆ ಪ್ರಜ್ವಲಿಸುತ್ತದೆ. ವಿಶ್ವಮಾತೆಯನ್ನು ಸೆರೆಯಿಂದ ಬಿಡಿಸಲು

''ನುಗ್ಗಿ ರಣರಂಗಕ್ಕೆ'' ಎಂದು ಕರೆಯನ್ನು ಕೊಡುತ್ತಾರೆ ಹಾಗೂ ಭೂದೇವಿ ನಲಿಯುವಂತೆ ವಿಜಯ ಗೀತೆಯನ್ನು ನುಡಿಸಿರಿ ಎಂದು ಆಶಿಸುತ್ತಾರೆ.

ಈ ಕವನದ ಕೊನೆಯ ನುಡಿ ಅತ್ಯಂತ ಸ್ವಾರಸ್ಯಕರವಾಗಿದೆ. ಇದು ಕನ್ನಡಕ್ಕೆ ಅಂಬಿಕಾತನಯ ಕೊಟ್ಟ ಕರೆಯಾಗಿದೆ :

''ಕನ್ನಡವೂ ಕನ್ನಡಿಸಲಿ
ನಾಳೆ ಬಾಳಿನೊಸಗೆಯ;
ಜೀವನಕಲೆ ಬೆಳಗಲಲ್ಲಿ
ತಿಳಿದು ಕರಣ ಹಸುಗೆಯ ;
ಪೂರ್ಣಪ್ರಜ್ಞರಾಗಿ ಪಡಲಿ
ಜೀವ-ದೇವ ಬೆಸುಗೆಯ.''

'ಅಂಬಿಕಾತನಯನು ವಿಶ್ವದ ಒಳನುಡಿಯಾಗಿ ಕನ್ನಡಿಸುತಿಹನಿಲ್ಲಿ'- ಎಂಬುದಕ್ಕೆ ಸಾಕ್ಷಿಯಾಗಿ ಈ ನುಡಿ ಒಳಮೂಡಿದೆ. ಕನ್ನಡದ ಕರ್ತವ್ಯ ನಾಳೆಯ ಬಾಳಿಗಾಗಿ, ಜೀವನ ಕಲೆ ಬೆಳಗಲೆಂದು, ಪೂರ್ಣಪ್ರಜ್ಞರಾಗಿ ಜೀವ-ದೇವ ಬೆಸುಗೆಯಿಂದ ಬಾಳುವಂತಾಗಲಿ ಎಂಬ ಕಣಸು ಇಲ್ಲಿ ಅಭಿವ್ಯಕ್ತವಾಗಿದೆ. ಇದುವೆ ಜೀವ ಹಾಗೂ ಪ್ರಕಾಶಗಳ ಬೆಸುಗೆ.

ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ತಮ್ಮ ೬೦ನೆಯ ಹುಟ್ಟುಹಬ್ಬದ ಸವಿನೆನಪಿಗಾಗಿ ಕನ್ನಡಿಗರಿಗೆ ಕೊಟ್ಟಿರುವ ''ಸೂರ್ಯಪಾನ'', ಅವರನ್ನು ಜ್ಞಾನಪಿಪಾಸುಗಳಾಗುವಂತೆ ಮಾಡುವುದರೊಡನೆ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಹೊಸ ದೃಷ್ಟಿಯನ್ನು, ನಾಡಿನ ಬಗ್ಗೆ ಹೊಸ ಪ್ರಜ್ಞೆಯನ್ನು, ರಾಷ್ಟ್ರದ ಬಗ್ಗೆ ನವಪ್ರೇಮವನ್ನು, ವಿಶ್ವದ ಬಗ್ಗೆ ಹೊಸ ನಿಷ್ಠೆಯನ್ನು ಹೊಂದಿದ ವಿಶ್ವಮಾನವರಾಗಲು ಅನುವುಮಾಡಿಕೊಟ್ಟಿದ್ದಾರೆಂದು ಹೇಳಬೇಕಾಗಿದೆ. ಇಂದು ದತ್ತಾತ್ರೇಯರು ನಮ್ಮೊಡನೆ ದೈಹಿಕವಾಗಿ ಇಲ್ಲದಿದ್ದರೂ, ಅವರ ವಿಚಾರಧಾರೆ ಕರ್ನಾಟಕದ ಸುವರ್ಣ ಮಹೋತ್ಸವದ ಹಾಗೂ ಭಾರತ ಸ್ವಾತಂತ್ರ್ಯದ ವಜ್ರಮಹೋತ್ಸವದ ಸಂಧಿಕಾಲದಲ್ಲಿ ನಮ್ಮೆಲ್ಲರನ್ನು ಕೈ ಹಿಡಿದು ಮುನ್ನಡೆಸಲಿ. ಬೇಂದ್ರೆಯವರ 'ಜಗದೇಳಿಗೆಯಾಗುವದಿದೆ ಕರ್ನಾಟಕದಿಂದೆ' ಎಂಬ ಕನಸು ನನಸಾಗಲಿ ಎಂದು ಆಶಿಸೋಣ.

''ಬೇಂದ್ರೆ ಕುಟೀರ'',
ಹುಬ್ಬಳ್ಳಿ - ೩೦
೧೮-೫-೨೦೦೭

ಡಾ|| ಕೆ. ಎಸ್. ಶರ್ಮಾ
ನಿರ್ದೇಶಕರು
ವರಕವಿ ಡಾ|| ದ. ರಾ. ಬೇಂದ್ರೆ
ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡಮಿ.

ಕಾರ್ಯಸ್ಥಳ : ''ಬೇಂದ್ರೆ ಕುಟೀರ''. ವಿಶ್ವಶ್ರಮ ಚೇತನ, ಗೋಕುಲ ರಸ್ತೆ ಹುಬ್ಬಳ್ಳಿ-೫೮೦ ೦೩೦. ದೂರವಾಣಿ : ೨೩೩೦೪೬೬

ಸೂರ್ಯಪಾನ

ಸೂರ್ಯಪಾನ

ಸೂರ್ಯಪಾನ, ಕಮಲದಂತೆ ಆಕರ್ಷಕ ಪಕಳೆಗಳುಳ್ಳ ವಿಶಿಷ್ಟ ಹೂ. ಭಾರತೀಯ ಯೋಗಶಾಸ್ತ್ರವು ಕಮಲವನ್ನು ಪ್ರತಿ ಮನುಷ್ಯನ ಬೆನ್ನಹುರಿಯಲ್ಲಿ (ಮೇರುದಂಡ) ಕಂಡಿತು. ಅವುಗಳಿಗೆ ಮೂಲಾಧಾರ, ಸ್ವಾಧಿಷ್ಠಾನ, ಮಣಿಪುರ, ಅನಾಹತ, ವಿಶುದ್ಧ, ಆಜ್ಞಾ ಹಾಗೂ ಸಹಸ್ರದಲ ಕಮಲ ಎಂಬುದಾಗಿ ನಾಮಕರಣ ಮಾಡಿತು. ಈ ಕಮಲಗಳಿಗೆ ಚಕ್ರ ಎನ್ನುವ ಪದ್ಧತಿಯೂ ಇದೆ.

ಸೂರ್ಯ, ಜ್ಞಾನದ ಸಂಕೇತ. ಗಾಯತ್ರಿ ಮಂತ್ರ ಪಠನವು, ಮನುಷ್ಯನ ಧೀಯನ್ನು ಚುರುಕುಗೊಳಿಸುತ್ತದೆ. ಸೂರ್ಯಪಾನ ಮತ್ತು ಕಮಲ ಎರಡಕ್ಕೂ ಸೂರ್ಯನತ್ತ ಆಕರ್ಷಣೆ. ಇಂಥ ಇಚ್ಛೆ ಮನುಷ್ಯನಿಗೆ ಆದಾಗ ಮಾತ್ರ ಅವನು, ಷಟ್‌ಚಕ್ರ ಜಾಗೃತಿಗಾಗಿ ಒಲವು ಉಳ್ಳವನಾಗುವನು. ಅವನು ಗಿರಿನಾರ, ಕೈಲಾಸ ಅಥವಾ ಭೂಭಾಗದಲ್ಲಿ ಎಲ್ಲೇ ಇದ್ದು ಸಾಧನೆ ಮಾಡಿದರೆ ಸಾಕು, ಅವನು ತನ್ನ ದಿನನಿತ್ಯದ ಜೀವನದಲ್ಲಿ ದಿವ್ಯತೆಯನ್ನು ಅನುಭವಿಸಬಲ್ಲನು ಎಂಬ ತತ್ತ್ವದಲ್ಲಿ ವಿಶ್ವಾಸವಿದ್ದ ವರಕವಿ ಬೇಂದ್ರೆ ರಚಿಸಿದ ಅರವತ್ತು ಕವನಗಳ ಗುಚ್ಛ ಈ 'ಸೂರ್ಯಪಾನ' ಸಂಗ್ರಹ.

- ಸಂ.

೧ ಸೂರ್ಯಪಾನ

೧

ಏನಿದರ ಔನ್ನತ್ಯ ಏನಿದರ ಔದ್ಧತ್ಯ
ಕುಕ್ಕಿಸುವ ಕಣ್ಣುಗಳ ದಿಟ್ಟಿಸುವದು.
ಬಾನಗಣ್ಣಿನ ಬಿಸಿಯ ಹಸಿಯಾರದಲೆ ಕುಡಿದು
ಬೆಳಕ ನೀರಡಿಕೆಯನು ಹುಟ್ಟಿಸುವದು.

೨


ಗಿರಿನಾರ ಕೋಡಿನಲೊ ಕೈಲಾಸ ಶಿಖರದಲೊ
ವಿಶ್ವದೀಪಕ ದೃಷ್ಟಿ ಮೂಡುವಂತೆ
ದಿಂಬಿನಲಿ ಮೊಗದೋರಿ ಎಸಳನಾಯಾಳಿಸುತ
ಸಿಂಹಾವಲೋಕನದಿ ನೋಡುವಂತೆ.

೩

ಸೂರ್ಯಪಾನವ ನೋಡು ಹೇಗೆ ನಿಂತಿಹುದು.
ಎನುವಂತೆ-ದಿವ್ಯತೆಯ ದೀಕ್ಷೆ ಇಂತಿಹುದು.
ಮೇರುದಂಡವು ಚಿಗಿತು ಹೂತ ಹಾಗೆ.
ಹೃದಯದಾಕೂತಿಗಿದೆ ಕಣ್ಣು ಮೋಗೆ.

ಭಾವ : 'ಸೂರ್ಯಪಾನ' ವಿಜ್ಞಾನದ ಜ್ಯೋತಿಗಾಗಿ ತಪಿಸುವ ಹೃದಯಕಮಲವನ್ನು ಪ್ರತಿಮಿಸುವದು.

ಶಬ್ದಾರ್ಥ : ಕೋಡಿ=ನೀರುಹರಿವ ಹಾದಿ. ಔದ್ಧತ್ಯ=ಗರ್ವದ ಉಬ್ಬುವಿಕೆ. ದಿಂಬು (ದಿಂಬಿ)=ಕಮಲದ ಬೀಜಕೋಶ. ಎಸಳು=ಪಕಳೆ, ಆಯಾಳಿಸು=ಆಯಾಲಸ್ನು ಮಾಡಿಕೊಳ್ಳು. ಮೇರುದಂಡ=ಬೆನ್ನುಹುರಿಯ ಸಂವೇದನಾ ಮಾರ್ಗ. ಆಕೂತಿ=ಇಚ್ಛೆ, ಒಲವು, ಪ್ರೀತಿ.



೨ ಸಪ್ತಕಲಾ

೧

ಸ್ಪಂದಽ ಬಂಧಾ ಸ್ವಚ್ಛಂದಾ
ಸ್ವೈರಾಽ ನಿರ್ವೈರಾಽ ಸಹಜಽ ಅಂದಾಽ
ಆಡಲೂ ಬರದಾಽ ಸುಮ್ಮನಿರದಾಽ
ಕಾದುಽ ಕಾದುಽ ನಾದಾಽ
ಭೇದಾಽ ಅಭೇದಾ, ಮೀರಿ
ಭಾವಽ ನೋವಽ ತಾಳದೇ
ತನ್ನಽ ತಾ ನುಂಗೀ
ಎದೆಯೊಳಗಿಂಗೀ
ಸ್ವಾತಂತ್ರ್ಯಽ ಪಡೆಯುವದಣ್ಣಽ
ಅರ್ಕಽ ಚಂದ್ರಽ ಸಾಂದ್ರವಾಗಿಽ
ವಾಚಾತೀತಽ ಗೀತಽ
ಸ್ವರಮೇಳಽ-ತಾಳಽ-ರಾಗಽ
ರೀತಿಯಲ್ಲಿ
ಆತ್ಮಽ ಪ್ರೀತಿಯಲ್ಲಿ,
ಸ್ವಾತಂತ್ರ್ಯಽ ಪಡೆಯುವದಣ್ಣಽ

೨
ಇದೋ ಅರೆವೋ ಮರೆವೋ
ಆವಳಿಽ ಜವಳಿಽ ತೆರವೋ
ಧ್ರುವಾಸ್ಮೃತಿಯಾ ಕರೆವೋ
ಆಕಾಶ ರೇಖಾ ಲೇಖಾ
ಹೃದಯಾಂತರ್ರೇಕಾ
ಭಾವಽ ನೋವಽ ತಾಳದೇ
ಅದೃಶ್ಯ ಹೊಳೆದೂ
ಕಾಣ್ಕೆಽ ರೂಪಽ ತಳೆದು
ಸ್ವಾತಂತ್ರ್ಯ ಪಡೆಯುವದಣ್ಣಽ
ಟಂಕಾಽ ಆತಂಕಾ ಸರಿಪಿಽ
ವ್ಯಂಗ್ಯಾಽ ವಕ್ರಽ ಬೆರೆಸಿ,
ಎಲ್ಲೂಽ ಕಲ್ಲೂಽ ಚಿತ್ರಽ
ಮೂರ್ತಿಯಲ್ಲಿ
ಕೀರ್ತಿಽ ಆರ್ತಿಯಲ್ಲಿ.
ಸ್ವಾತಂತ್ರ್ಯಽ ಪಡೆಯುವದಣ್ಣಽ
೩
ತಂತ್ರಽ ಅರಿಯದೇಽ
ಮಂತ್ರಽ ಮಣಮಣಗುಟ್ಟೀ
ಕೆಟ್ಟಽ ಯಂತ್ರದಂತೇ
ಕೈತಪ್ಪಽ ಎತ್ತೆತ್ತೊ
ಕತ್ತರಿಸುತ್ತಿರಲು
ಭಾವಽ ನೋವಽ ತಾಳದೆ,-
ಮೌನಽ ಕೂಡಿಽ
ಮೌನಽ-ಮೂಡಿಽ
ಸ್ವಾತಂತ್ರ್ಯಽ ಪಡೆಯುವದಣ್ಣಽ
ಆವೇಶಽ-ಅಂಗಾಂಗಽ-ತುಂಬಿಽ
ನರನರಽ ನಲುಗಿಽ ಅಲುಗೀಽ
ಗೊಂದಣಽ-ತಾಂಡವಽ ಲಾಸ್ಯಽ
ನೃತ್ಯದಲ್ಲೀ
ಇಲ್ಲೀಽ ಮರ್ತ್ಯದಲ್ಲಿ
ಸ್ವಾತಂತ್ರ್ಯಽ ಪಡೆಯುವದಣ್ಣಽ

೪

ಕರ್ಮಾಽ ಅಕರ್ಮದ ತಂತ್ರಽ
ಫಲವಿಫಲತೆಯೊಳತಂತ್ರಽ
ಈಶ್ವರೀ ಯಂತ್ರಽ-
ಸ್ವರೂಪಽ ತೋರ್ಪಽ ದೀಪಽ
ಮಿಂಚಿಗೂ ಸಮೀಪಽ
ಭಾವಽ ನೋವಽ ತಾಳದೇಽ
ಪ್ರಕೃತಿಯೂಽ ದುಡಿದೂಽ
ದೈವಽ ತಡೆದೂಽ
ಸ್ವಾತಂತ್ರ್ಯಽ ಪಡೆಯುವದಣ್ಣಽ
ಅವಿದಿತಽ ವಿದಿತಽ ಉದಿತಾಽ
ಸಾತ್ವಿಕಾಽ-ಭಾವಾಽ-ಜೀವಾಽ
ಅಭಿನಯಽ ವಚನಽ-ನಾಟ್ಯಾಽ-
-ಕೃತಿಯಲ್ಲಿ
ದೃಷ್ಟೀಽ ಶ್ರುತಿಯಲ್ಲಿ.
ಸ್ವಾತಂತ್ರ್ಯಽ ಪಡೆಯುವದಣ್ಣಽ.

೫

ಶಾಂತಾಽ ಶಿವಾಽ ಸೀಮಾತೀತಾಽ
ಸತ್‌ಶಕ್ತೀ ಸಹಿತಾ
ಚೇತಾಽ ಜಗನ್ನೇತಾ
ಸ್ವಾಲಿಂಗಿತ ದ್ವೈತಾ ಅದ್ವೈತಾ
ಸಂತತಾಽ ಅನಂತಾಽ
ಭಾವಽ ನೋವಽ ತಾಳದೇ
ಬಯಕೆಽ ಬೇನೆಗೆಽ ಬೆಂದು,
ತನ್ನೊಳು ತಾ ನಿಂದು
ಸ್ವಾತಂತ್ರ್ಯಽ ಪಡೆಯುವದಣ್ಣಽ
ಬೀಜಽ ಬಿಂದೂದ್ಭೂತಾ
ಕಲಲಾ ಜಾತಾ
ಇದು ಅಕಲಽ ವಿಕಲಽ ಸಕಲಽ
ಸುಕಲೆಯಲ್ಲಿ
ಈಽ ಕಳೇವರದಲ್ಲಿ
ಸ್ವಾತಂತ್ರ್ಯಽ ಪಡೆಯುವದಣ್ಣಽ.

೬

ಜನ್ಮಾಽ ಜನ್ಮಾಂತರ ತರತಮಭಾವಾ
ಪ್ರಕಟಸ್ವಭಾವಾ
ಪ್ರತಿಸರ್ಗೋತ್ಸುಕತಾ ಪ್ರತಿಭಾ
ನಿರಾಲಂಬಾ ಸ್ವಯಂಭಾ
ಕಲ್ಪನಾಗರ್ಭಿತ ಬಿಂಬಾ
ಭಾವಽ ನೋವಽ ತಾಳದೇ
ಅನನ್ಯಾ ಈಶ್ವರ ಪ್ರಭವಾ
ಕಲಾ ವಿಭವಾ
ಸ್ವಾತಂತ್ರ್ಯಽ ಪಡೆಯುವದಣ್ಣಽ
ಲೋಕಾಽ ಲೋಕ ಪ್ರಕಾರಾ
ದೇವತಾಕಾರಾ
ಇದು ದರ್ಶನ ಮುಖರಾ ಶಿಖರಾ
ವಾಸ್ತುವಲ್ಲಿ
ಗುಡಿ ಗೋಪುರದಲ್ಲಿ
ಸ್ವಾತಂತ್ರ್ಯಽ ಪಡೆಯುವದಣ್ಣಽ.

೭

ಸಕಲಾऽ ಸಿದ್ಧಾऽ ಸರಸ್ವತಿ ವೀಣಾಪಾಣಿ
ಪಶ್ಯಂತಿಯ ವಾಣಿ
ಛಂದಾರೂಢಾ ನವೋಢಾ
ಮುಗ್ಧಾ, ರಸಿಕಾ, ಅನೂನಾ
ಧ್ವನಿತ ಪ್ರಾಣಾ
ಭಾವऽ ನೋವऽ ತಾಳದೇ
ಸ್ಫೂರ್ತಾ, ಅಮೂರ್ತಾ, ಆವಿರ್ಭೂತಾ
ಭವಮಂಥನ ಮಂತ್ರಾ
ಸ್ವಾತಂತ್ರ್ಯऽ ಪಡೆಯುವದಣ್ಣऽ
ಅಕಾವ್ಯಾ ರವ್ಯಾ
ಶ್ರೋತ್ರಿಯುಗವ್ಯಾ
ಭವ್ಯऽ ನವ್ಯऽ ಹೃದಯದ್ರವ್ಯ.
ಕವಿಯಲ್ಲಿ
ದಿವ್ಯऽ ಕಾವ್ಯದಲ್ಲಿ.
ಸ್ವಾತಂತ್ರ್ಯऽ ಪಡೆಯುವದಣ್ಣ.

ಭಾವ : ಸಂಗೀತ, ಶಿಲ್ಪ, ನೃತ್ಯ, ನಾಟಕ, ಜೀವನ, ವಾಸ್ತು ಸಾಹಿತ್ಯ ಇವು ಸಪ್ತಕಲೆಗಳು. ಈ ಕಲಾ ಲಹರಿಯಲ್ಲಿ ಮಾನವನ ಬಹುಮುಖ ಅಭಿವೃದ್ಧಿಯು ಸಪ್ತಕಲೆಗಳಲ್ಲಿ ಗುಮ್ಮಟದಲ್ಲಿ ನಿನಾದಗೊಂಡು ಸಾಮಗಾನವಾಗಿ ಕೇಳಿಸಿದೆ.

ಶಬ್ದಾರ್ಥ : ಟಂಕ=(ಟಂಕೆ) ಉಳಿ, ಕಲ್ಲುಳಿ. ಗೊಂದಣ=ಸಮೂಹ. ಕಲಲಾ=ಭ್ರೂಣ. ನವೋಢಾ-ಮದುವೆಯಾದ ನವ ವಧು.

೩. ವಿಶ್ವರೂಪ ದರ್ಶನ

೧
ವಿಶ್ವರೂಪ ನೋಡುತ್ತಿರೆ ಮೈಮರೆತರ್ಜುನನು
ಎಚ್ಚತ್ತನು ಮೈ ಅರಿವಿಗೆ ಕಂಪಿಸಿತೆಲ್ಲ ತನು
'ಭೀಷ್ಮಂಚ ದ್ರೋಣಂಚ ಜಯದ್ರಥಂಚ ಕರ್ಣಂಚ'
ಅಬ್ಬಬ್ಬಾ ತನ್ಮಧ್ಯೇಽ ತಾ ನೋಡುವದೇನು ?

೨
ಇದ ನೋಡಲು ಕಣ್ತೆರೆದೆನೆ? ಅದ ಬೇಡಿದರಾರು ?
ಈ ಧಗೆಯಲಿ ನಗೆಯಾಟದ ಹಗೆ ಹೂಡಿದರಾರು ?
ಧರ್ಮಾ, ಭೀಮಾ, ನಕುಲಾ, ಮತ್ತಾ ಸಹದೇವಾ
ನಾನಿರುತಿರೆ, ನೀನಿರುತಿರೆ, ವಧೆ ಮಾಡಿದರಾರು ?

೩
ಕೃಷ್ಣಾ ಹರಿಹರಿ, ಕೃಷ್ಣಾ ಹರಿ ಹರಿ ಈ ಕಣಸು
ಎಚ್ಚರದಾ ಭ್ರಮೆಗಿಂತಲು ಹಿರಿ ಹುಚ್ಚೀ ಕನಸು
ಕನಸೋ ಕಣಸೋ ನನಸೋ ಹರಿ ಹರಿ ಹರಿ ಕೃಷ್ಣಾ-
ಸತ್ತಿಲ್ಲವು ಇನ್ನೂ ಈ ನರನಾ ನರಮನಸು.

೪
ನನಗೊಲ್ಲದ ಬದುಕನು ನಾನೆಂದೆಂದೂ ಒಪ್ಪೆ
ಎಂಬೆನೆ? ಕಾಂಬೆನೆ ನಿಜವನು? ಸುಳ್ಳಿನ ಈ ತಿಪ್ಪೆ
ಸುತ್ತೂ ಮುತ್ತೂ ಮತ್ತೂ ಸುತ್ತುತ್ತಿದೆ ಹಾಗೇ
ಹೇಳದೆ ಕೇಳದೆ ತಾವೇ ಮುಚ್ಚಿದವೀ ರೆಪ್ಪೆ.

೫
ಕಣ್ಮುಚ್ಚಿದರೂ ಕಾಂಬುದು ಏನೀ ವೈ-ಚಿತ್ರ್ಯ
ಕಣ್ತೆರೆದರು ಕೆತ್ತಿದ್ದಿದೆ ಮರೆಯದ ಸ್ಮೃತಿ ಮಾತ್ರ
-ಖೂಳರು, ಮೂಳರು, ಕಾಳರು, ಇದು ನಾಚಿಕೆಗೇಡು-
ಕರುಳನೆ ಹೊತ್ತಿಸಿ ಯಾಕೋ ಉರಿವುದು ಒಳಗಾತ್ರ.

೬
ಕಣ್ಣೀರಿಗೆ ತೊಳೆದಿಳಿವುದು ಕಾಡಿಗೆ ಎಂಬಂತೆ
ದಿವ್ಯಾಂಜನವೂ ಹಾರಿತು, ರಣ ಮರಣದ ಸಂತೆ
ಮಾರಾಟಕೆ ಏರಾಟಕೆ, ಹೊರಚಲ್ಲಿದೆ ಇಲ್ಲಿ
ನಾರಾಯಣನಾ ಮಾಯೆಗೆ ನರನಾಗುತ ನಿಂತೆ.

೭

ಒಪ್ಪಿದೆ ಒಪ್ಪಿದೆ ಕೃಷ್ಣಾ ನೀ ನಾಟಕಕಾರಾ
ಮೊದಲೇ ತೋರಿಸು ಎಂದೆನೆ ನಾಟಕದಾಧಾರಾ
ನೋಟಕ, ಬೂಟಕ, ಮಾಟಕ ಏನೇನೋ ಮಾಡಿ
ಸೂತ್ರವ ಹಿಡಿದೂ ರಂಗವ ತುಂಬಿದೆ ಹೇ ಧೀರಾ !

೮

ನೈಜವ ನೋಡಲು ನಿಜವೂ ಬೇಕಿವೆ ಸನ್ನೇತ್ರಾ
ಹುಟ್ಟೂ ಇರವೂ ಸಾವೂ ಅಲ್ಲಿವೆ ಚಿನ್ಮಾತ್ರಾ
ಕಥೆ ನಿನ್ನದು, ವ್ಯಥೆ ನಿನ್ನದು, ನಿನ್ನದೆ ಉಸಿರಾಟಾ
ಆಡುವ, ನೋಡುವ, ಮೂಡುವದೊಂದೇ ತ್ರೀಪಾತ್ರಾ.

೯

ಎಳೆನಗೆಯಲಿ ಇಳೆ ಚಿಗಿಯಲಿ ಮರುಕೊಳಿಸಲಿ ಹೂವು
ಹಿಮ ಶಿಶಿರದ ಸ್ಮೃತಿ ಕಳಚಲಿ, ಇದೊ ಇಗೊ ಈ ತಾವು
ತುಂಬಲಿ ತುಳುಕದೆ ಸೂಸಲಿ, ಮೀಸಲು ಮುರಿಯದೆಯೆ
ಮಿಕ್ಕಲಿ, ಒಕ್ಕಲುಗೊಳ್ಳಲಿ ಆ ನಾವೂ ನೀವೂ.

೧೦

ಕೃಷ್ಣಾ ಆಡೈ ಆಟವ ನಿನ್ನಾಕ್ರಮದಂತೆ
ಸುಳ್ಳೇ ಬಣ್ಣವ ಕೊಡದಿರು ನಮ್ಮೀ ಭ್ರಮದಂತೆ
ಉಡುಗಿಸು, ನಡುಗಿಸು, ಅಡಗಿಸು, ದಿವ್ಯದ ತಾಳದಲಿ
ನೀನೋ ಗುರು, ನಾ ಶಿಷ್ಯನು, ರಣ ಆಶ್ರಮದಂತೆ.

ಭಾವ : ವಿಶ್ವರೂಪದರ್ಶನಕ್ಕಾಗಿ ಹಾತೊರೆದು ಅದನ್ನು ಅರ್ಜುನ ನೋಡಿದನು. ಅದರಲ್ಲಿ ಅಭಿಮನ್ಯು ವಧೆಯನ್ನು ಮೊದಲೇ ಕಂಡು, ದರ್ಶನ ಬೇಡ, ಶ್ರದ್ಧೆಯೇ ಸದ್ಯಕ್ಕೆ ಸಾಕು ಎನ್ನುತ್ತಾನೆ. ನರನ ನರಮನಸು ಸಾಯದೆ, ನಿಜವನ್ನು ಕಾಣುವ ಸನ್ನೇತ್ರಗಳು ಬಾರವು.



೪ ಕೇಳಿರೊಂದು ಸೋಜಿಗ

ಹೀಗು ಉಂಟು ಈ ಜಗ
ಕೇಳಿರೊಂದು ಸೋಜಿಗ! ॥ ಪಲ್ಲವಿ ॥
೧
ಗಾಂಧಿ ದೇಹ ಬಿಟ್ಟರಂತೆ
ಜನರು ಅದನು ಸುಟ್ಟರಂತೆ
ಹೌದು, ಗಾಂಧಿ ಸತ್ತರಂತೆ
ಜನರು, ನಿಜವೆ, ಅತ್ತರಂತೆ.
ದಿನದ ದಿನದ ದಿನದ ಹಾಗೆ
ಗಾಂಧೀಜಿಗೆ ಬಿನದವಾಗೆ
ಪ್ರಾರ್ಥನೆಗೇ ಬಂದರಂತೆ
ಆಗದವರು ಕೊಂದರಂತೆ
ಗಾಂಧಿಯುವರು ಬಿದ್ದರಂತೆ
ನೋಡುವವರು ಇದ್ದರಂತೆ
ಪಾಪ, ಪಾಪ, ಅಯ್ಯೋ ಪಾಪ
ಇದಕು ಇರಲಿ ಉಶ್ಯಾಪ!
ಗಾಂಧಿಜೀ ಮಹಾತ್ಮರಂತೆ
(ಆದರೂನು) ಅಂತೂ ಒಮ್ಮೆ ಸತ್ತರಂತೆ!
ಕೇಳಿರೊಂದು ಸೋಜಿಗ!

೨

ಶಾಂತಿದೂತನಾಗಿ ಬಂದ
ಮಹಾಧೀರ ಶಿವನ ಕಂದ
ಪ್ರೇಮ ಮಂತ್ರವನ್ನು ತಂದ
ಅದೇ ಅಂದ, ಅಂದೇ ಅಂದ.
ಕೈಯ ಮುಗಿದು ಕಣ್ಣ ಮುಚ್ಚಿ
ಮೈಯನೊಗೆದು ಹೃದಯ ಬಿಚ್ಚಿ
ಹೊರಟಿತೊಂದು ಶಬ್ದವು
ಅದರ ಧ್ವನಿಯು ಅಬ್ದವು
ಬಾನುಲಿಯೇ ಕಂಪಿಸಿ
ವಿಶ್ವವೆಲ್ಲ ಝೋಂಪಿಸಿ
ಏನನರ್ಥ ಏನನರ್ಥ
ಎಂದು ಕೂಗೆ ಕೂಗಿತು.
ಅದರ ಬೆನ್ನಿಗೊಂದೆ ಅರ್ಥ
ಒಂದೆ ಭಾವ ಸಾಗಿತು.
ಜೀವಕ್ಕೆಲ್ಲ ಧಾವತಿ
ಪ್ರೇಮಕೊಂದು ಆಹುತಿ !
ಕೇಳಿರೊಂದು ಸೋಜಿಗ !

೩

ಸಾಕ್ರೆಟೀಸ ಆತ್ಮವೀರ
ಕುಡಿದನಲ್ಲ ವಿಷದ ನೀರ!
ಧೀರ ಕ್ರೈಸ್ತ ಇದ್ದನೆಲ್ಲಿ?
ಅವನ ದೇಹ ಸಿಲುಬೆಯಲ್ಲಿ!
ನ್ಯಾಯದೊಂದು ನೆಪವ ಮಾಡಿ
ವಿಚಾರಣೆಯ ಆಟ ಆಡಿ
ಕೊಂದರಾಗ ಧೂರ್ತರು.
ಅದೂ ಬೇಡವಾಯ್ತೆ ಇಲ್ಲಿ?
ಮುಗಿಸಿದರೋ ಮೂರ್ಖರು.
ಇನ್ನು ಗುಂಡು ತಾಕದಲ್ಲಿ
ಕೊಲೆಪಾತಕ ಸೋಂಕದಲ್ಲಿ
ದೃಷ್ಟ ತೀರ ಅದೃಷ್ಟದಲ್ಲಿ
ಆದರಿಲ್ಲೆ ಭೂಮಿಯಲ್ಲಿ
ನಡೆವುದದರ ಪರಿಣತಿ
ಗಾಂಧಿಗಂಧಸಂಗತಿ.
ಕೇಳಿರೊಂದು ಸೋಜಿಗ!

೪

ದೇವನುಂಟು ದೈವವುಂಟು
ಅದಕು ನಮಗು ಇಹುದು ನಂಟು
ದುರ್ವಾಸನೆ ಸಾರದಲ್ಲಿ
ಅಹಂಕಾರ ಸೇರದಲ್ಲಿ
ವಿಶ್ವಹೃದಯ ಹಾರದಲ್ಲಿ
ಪ್ರೇಮದೊಂದು ರತ್ನವು
ಅದಕೆ ವಿಶ್ವಯತ್ನವು.
ಅದೇ ನಮ್ಮ ನಿಮ್ಮ ಗುರಿಯು
ಅದು ಇಲ್ಲದ ವಿಶ್ವ ಉರಿಯು
ದ್ವಂದ್ವ ಮೀರಿದೊಂದಿದೆ
ದ್ವಂದ್ವ ಎಂದೊ ಕೊಂದಿದೆ
ಸಾವಿನಲ್ಲಿ ಸಾವಿದೆ
ನೋವಿನಲ್ಲಿ ನೋವಿದೆ.
ಸಾವು ನೋವು ಮೀರಿದಾ
ಗಾಂಧಿ ಹೇಗೆ ತೀರಿದಾ ?
ಕೇಳಿರೊಂದು ಸೋಜಿಗ !

೫
ಬಾಳು ಜಗವೆ ಬಾಳೆಲೋ
ಪ್ರೇಮದಿಂದ ತಾಳೆಲೋ
ಎಂದು ಕೊನೆಗು ಸಾರಿದಾ
ಗಾಂಧಿ ಸ್ವರ್ಗಕೇರಿದಾ.
ಆದನೆ ಇಲ್ಲಿ ತರುವನೋ ?
ಮತ್ತೆ ಮರಳಿ ಬರುವನೋ ?
ಏಕೆ ಹರಟೆ? ಏಕೆ ಪ್ರಶ್ನೆ?
ಬೇಕು ಜೀವದುತ್ತರ.
ಜೀವನದೊಳು ಎತ್ತರ.
ಗಾಂಧಿ ಅಲ್ಲೆ ನಾವು ಇಲ್ಲೆ
ಹಳೆಯ ವಾದ ನಡೆದರೆ
ಗಾಂಧಿ, ರಾಮ, ಕೃಷ್ಣ ಅಲ್ಲಾ
ಕ್ರೈಸ್ತ ಬುದ್ಧ ಎಲ್ಲ ಎಲ್ಲಾ
ಪ್ರೇಮಮಾರ್ಗ ಹಿಡಿದರೆ ?
ಒಂದೆ, ಶಾಂತಿ ಪಡೆದರೆ ?
ಕೇಳಿರೊಂದು ಸೋಜಿಗ !

ಭಾವ : ಮಹಾತ್ಮಾ ಗಾಂಧಿಯವರ ಕೊಲೆಯನ್ನು ಕೇಂದ್ರಬಿಂದು ಮಾಡಿ ಚಿಂತನೆ ನಡೆಸಿದ ಶ್ರದ್ಧಾಂಜಲಿ ಕವನ.

ಶಬ್ದಾರ್ಥ : ಬನದ=ವಿನೋದ, ತಮಾಷೆ. ಉಶ್ಶಾಪ=ಆಮಂಗಲದ ಪರಿಹಾರ ಮಾರ್ಗ. ಆಬ್ದ=ಮೋಡ. ಝೋಂಪಿಸು=ಮೈಮರೆಯುವಂತೆ ಮಾಡು. ಧಾವತಿ=ಶ್ರಮ, ದಣಿವು. ಧೂರ್ತರು=ಮೋಸಗಾರರು, ವಂಚಕರು. ಸೋಕು-ಸೋಂಕು=ತಾಕು, ಸ್ಪರ್ಶಿಸು.

೫ ಶ್ರದ್ಧಾಂಜಲಿ

೧

ಹಿಂಸೆ ಕೊನೆಗಹಿಂಸೆಯನ್ನು ಗುಂಡುಹಾಕಿ ಕೊಂದಿತೋ ?
ತನ್ನ ಕೊಲೆಯ ಕೊನೆಗಾಣಿಸಿ ಇವಗೆ ಶರಣು ಬಂದಿತೋ ?
'ಅಯ್ಯೊ ಇವನು ಅಮರ, ನಾನೆ ತಾನೆ ಸತ್ತೆ' ಎಂದಿತೋ ?
'ನಾನೆ ಸತ್ತೆ' ಎಂದಿತೋ ?

೨

ಗಾಂಧಿ ದೇಹ ಸುಟ್ಟ ಬೆಳಕು, ಜಗದ ತಮವ ಕಳೆದಿದೆ,
ಗಾಂಧಿ ಹೋದರೆಂಬ ಸುದ್ದಿ ಬಾನ ತುಂಬಿ ಉಳಿದಿದೆ,
ಗಾಂಧಿಗಂಧ ದಿಗ್ - ದಿಗಂತ ಕೀರ್ತಿರೂಪ ತಳೆದಿದೆ-
ಕೀರ್ತಿರೂಪ ತಳೆದಿದೆ !

೩

ತೀರ್ಥಗಳ ಪವಿತ್ರ ಮಾಡಿದಂಥ ತೀರ್ಥರೂಪನು
ಯಜ್ಞವಾದ ಬಾಳಿನಲ್ಲಿ ತಾ ಸುಖಸ್ವರೂಪನು
ಸೋಲನೆಲ್ಲ ಗೆಲವುಗೊಳಿಸಿ ಮುಕ್ತನಾದ ಭೂಪನು-
ಮುಕ್ತನಾದ ಭೂಪನು.

೪

ಬತ್ತಿ ಸುಟ್ಟು ಹೋದರೇನು ಬೆಳಕು ನಂದಿತೆಂಬರೆ ?
ಹಾಕಿ ಬತ್ತಿ ದೀಪವೆತ್ತಿ ಇರುವ ಜ್ಯೋತಿ ಕಾಂಬರೆ !
ಎಣ್ಣೆ ತೀರಿತೆನ್ನಬೇಡಿ ಬೇರೆ ನೇಹ ತುಂಬರೆ-
ಬೇರೆ ನೇಹ ತುಂಬರೆ ?

೫

ಹಿಂಸೆ ಕೊನೆಗಹಿಂಸೆಯನ್ನು ಗುಂಡುಹಾಕಿ ಕೊಂದಿತೋ ?
ತನ್ನ ಕೊಲೆಯ ಕೊನೆಗಾಣಿಸೆ ಇವಗೆ ಶರಣು ಬಂದಿತೋ ?

ಭಾವ : ಮಹಾತ್ಮಾ ಗಾಂಧಿಯವರನ್ನು ಕುರಿತು ಶ್ರದ್ಧಾಂಜಲಿಯ ಕವನ. ಆಕಾಶವಾಣಿಗಾಗಿ ರಚಿಸಿದ್ದು.

ಶಬ್ದಾರ್ಥ: ಕಾಂಬರೆ-ಕಾಣ್ಬರೆ=ಕಾಣುವರೆ.

ವಿಶೇಷ : ಹಿಂಸೆ ಅಹಿಂಸೆಯನ್ನೇ ಕೊಂದ ವಿಪರ್ಯಾಸ-ದುರಂತದ ಪ್ರತಿಬಿಂಬ ಇಲ್ಲಿ ಅಭಿವ್ಯಕ್ತ.

೬ ಅಮರ ಮರಣ

೧
ಆ ಯುಗಾದಿ ಬರುವಂತೆ ಮರಳಿ ಓ ಶ್ರಾದ್ಧದಿನವೆ ಬಂದೆ
ಮರೆತ ಮರಣವನು ನೆನೆದ ಮನದಿ ಚೈತನ್ಯವನ್ನು ತಂದೆ
ಹರಿಜನರ ಬಳಗ ಉಳಿದವರ ಒಳಗೆ ಬಳಸಿದೆಯೊ ನಾಡತಂದೆ
ಮಾನವತೆ ಒಂದು, ಭಾರತಿಯರೆಲ್ಲ ಒಂದಲ್ಲವೇಕೆ ಎಂದೆ.

೨
ಬರಿಯಮೈಯ ಬಾಳುವೆಯ ಮರ್ತ್ಯ ಮೈ ಕಳಚಿಬೀಳಲಾಗಿ
ಅವನ ನೆನಪೆ ಅಳಿಯುವದು ಅವನ ಮೈಯೊಡನೆ ಮಾಯವಾಗಿ
ಸತ್ಯವಂತನವ ಸತ್ತನೆಂದು ಪರಮಾರ್ಥದಲ್ಲಿ ನಂಬೆ.
ಪ್ರೇಮಧರ್ಮವನು ಸಾರಿದವಗೆ ಎಲ್ಲಿಹುದು ಮರಣವೆಂಬೆ.

೩
ಸಾವು ಯಾರಿಗಿದೆ? ನೋವ ಧಿಕ್ಕರಿಸಿ ನಿಂತ ಧೀರಗೇನೇ
ಮೃತ್ಯು ಮುಖದಲ್ಲಿ ರಾಮನಾಮವನು ಬಿತ್ತಿದವಗೆ ತಾನೇ?
ಸಾವುಗೀವು ಉಂಟೆಂಬ ಮಾತು ನಂಬುವರು ಯಾರು ತಾನೇ?
ಆಡ ಹಾಲನುಂಡವನು ಕಾದ, ಕಾದಾಡಿದಂತೆ ಆನೆ.

೪
ನಿಃಶಸ್ತ್ರವೀರ, ಸಾಮ್ಯೈಕಶೂರ, ಅತಿ ದಾಂತವಿನಯಧೀರ,
ವ್ಯಾಪಾರಚತುರ, ಉತ್ತೀರ್ಣನಾದ ಶಾಂತಿಯ ಅಪಾರತೀರ
ಇಲ್ಲವರ ಕೂಡ ಉಳ್ಳವರ ಜೋಡಿ ಸರಿಸಮವು ಇವಗೆ ನಂಟು
ಇವನ ವರ್ಣನೆಯೆ ಅಮರವಹುದು, ಇಂಥವನು ಮರ್ತ್ಯನೆಂತು?

೫
ಕುಂಭಮಾಸದೀ ಗಾಳಿ ತಾನೆ ವೈತಾಳಿಯಾಗಿ ಬಂದು
ಕಳೆವ ಎಲೆಗಳಲಿ ಚಿಗುರುಮೊಳೆಗಳಲಿ ಉಲಿಯುತಿಹುದು ನಿಂದು
ಅಳಿವುದಷ್ಟೆ ಅಳಿದೀತು, ಬದುಕುವದು ಪ್ರಾಣಜಾತ ಸತ್ಯ
ರೂಪಕಳೆವುಂಟು ಆ ಸ್ವರೂಪ ಆಕಾಶಕ್ಕಿಂತ ನಿತ್ಯ.

೬
ಕೀರ್ತಿದೇಹಿಗೆಲ್ಲಿಹುದು ಮರಣ? ಸತ್ಕೀರ್ತಿಯೊಂದು ಬೆಳಕು.
ಕಳೆದ ಬಟ್ಟೆ ತೊಳೆದಂತೆ ಹರಿದು ಹೋಗುವದು ಮಲಿತ ಕೊಳಕು.
ಹಗಲು ಬಂದೀತು ಹಗಲು ಹೋದೀತು ಚಿಕ್ಕೆ ಬೆಳಗುತಿಹುದು.
ಜೀವ ಜೀವ ಸಂಗ್ರಾಮಗಳಲಿ ಆ ಶಾಂತಿ ಮೊಳಗುತಿಹುದು.

೭
ನೆಲವ ಮುದ್ದಿಡುವ ಚಾರಿಯಲ್ಲಿ ಪದಚಾರಿಯಾಗಿ ಹೊರಟ.
ಕೈಯಲ್ಲಿ ಕೋಲು, ಅದಕ್ಕಿಲ್ಲ ಸೋಲು, ಗೆಲವೊಂದೆ ಬಲ್ಲ ಅಥಟ,
ಸ್ವಾತಂತ್ರ್ಯದುಪ್ಪು ಸಾಗರದವರೆಗೆ ಮುಟ್ಟಿಸುವ ಪಂಥ ತಳೆದ.
ಅಂಥ ಉಪ್ಪಿನಲೆ ಜೀವ ರುಚಿಗೊಳಿಸಿ ಸಪ್ಪೆತನವ ಕಳೆದ.
೮
ನಿನ್ನ ತಪ್ಪುಗಳೆ ಒಟ್ಟಿ ನಿಂತು ಆ ಹಿಮಾಲಯವೆ ಆಗೆ,
ಅದರ ತಲೆಯನ್ನೆ ಮೆಟ್ಟಿ ಮುಂದೆ ಹಾದಿಯನು ಹಿಡಿದು ಸಾಗೆ,
ಶಾಂತಿಧ್ರುವದಿ ಕಣ್ಣಿಟ್ಟೆ ಹೆಜ್ಜೆಹೆಜ್ಜೆಯಲಿ ಗುರಿಯು ತಾಗೆ,
ಬುದ್ಧಬೋಧ ಪ್ರಸರಿಸಲು ಹೊರಟ ಆ ಪ್ರವಾಸಿಕರ ಹಾಗೆ.
೯
ಜನಕೆ ಬಯಲು ಕಂಡಲ್ಲಿ ತೆರೆದೆ ಜೀವನದ ರೂಪರೇಖೆ,
ಉಷೆಯ ಸ್ವಪ್ನದನಿರುದ್ಧನನ್ನು ಬರೆದಂತೆ ಚಿತ್ರರೇಖೆ,
ಬಣ್ಣ ಬಳಸದೇ ಬರೆದ ಚಿತ್ರದಲಿ ಬೇರೆಯೊಂದು ಚೆನ್ನು.
ಶಾಂತಿಶ್ರದ್ಧೆ ಬದುಕಿರುವವರೆಗೆ ಮರೆತಾರು ಯಾರು ಇನ್ನು?
೧೦
ಇವ ಬಿಳಿಯ ಕರಿಯ, ಇಸ್ಲಾಮಿ ಹಿಂದು, ಆರ್ಯನು ಅನಾರ್ಯನೆಂದು
ಜೀವಬಾಂಧವ್ಯ ಒರೆಗೆ ಹಚ್ಚಿರಲು ಪರಸ್ಪರರ ಕೊಂದು,
ಮೃತ್ಯುಧ್ಯಾನವೇ ಮಾಡುತಿರುವ ರೌದ್ರಿಕರ ನಡುವೆ ನಡೆದೆ;
ದಾಯಾದಿತನದ ಸಾಗರದ ಮಥನದಿಂದೆದ್ದ ವಿಷವ ಕುಡಿದೆ.
೧೧
ನಿನ್ನಹಿಂಸೆಗಾ ಹಿಂಸೆ ಕಾಣಿಕೆಯೆ? ಯಾವ ನ್ಯಾಯನೀತಿ?
ಎಂಥ ಪೌರುಷದ ಏನು ನೀತಿಯಿದು? ಯಾರ ವೀರಜಾತಿ?
ಸಾಧು ಸಾಧು ಜಗ ಕೂಗುತಿಹುದು ತವ ಮರಣ ಸಾರ್ಥವಹುದು.
ಸತ್ತರೇನು ಸಾರ್ಥಕತೆ, ದಮ್ಮಿನಲಿ ಕೆಮ್ಮಿ ನವಿದು ನವಿದು.
೧೨
ಇಂದ್ರಿಯದ ತೃಪ್ತಿ ಉಳಿದೆಲ್ಲ ಸುಪ್ತಿ ಜೀವನದ ಆಸರಾಗಿ
ಅಲ್ಲಗಳೆದು ಆತ್ಮವನು ಬಾಳುತಿರೆ ಬಲಿಯ ದಾಸರಾಗಿ
ಸ್ವಾರಾಜ್ಯವೊಂದು ಘನಕನಸು ಕಂಡು ಕಟೆದಿಟ್ಟೆ ಆಗಿ ತ್ಯಾಗಿ.
ಕಾರುಣ್ಯದಲ್ಲಿ ಮಾನವರ ಮರ್ಮ ಮೂರ್ತಿಸುವ ಶಿಲ್ಪಿಯಾಗಿ.

೧೩
ನಿನ್ನ ಕೃತಿಯ ಸ್ಮೃತಿ ಶಾಂತಿಶ್ರುತಿಯ ತಂತಿಯನು ಮೀಟುತಿಹುದು.,
ಮನದ ಜನ್ಮಗಳ ಕಳೆವ ಹಾಗೆ ತನ್ನನ್ನೆ ದಾಟುತಿಹುದು.
ನಿನ್ನ ಮೂರ್ತಿ ಪ್ರೇರಿಸುವದಯ್ಯ ದಿಗ್ದರ್ಶಿ ನೇತ್ರದಂತೆ.
ಆಕರ್ಷಿಸುವದು ಒಳಹೊರಗೆ ನಮ್ಮ ಸ್ಮೃತಿರೂಪ ಚಿತ್ರದಂತೆ.

೧೪
ಏನನಾದರೂ ಹೇಗೊ ತಿಂದು ಬದುಕುವದೆ ಬಹಳರಾಸೆ,
ಸತ್ಯದನ್ನವನೆ ಉಂಡು ಬಾಳಿ ಎನ್ನುವದು ಪುರಷಭಾಷೆ.
ಅಮರವಾವುದೆಂಬುವದದೇನು ಅವಿವೇಕಿ ತಾನು ಬಲ್ಲ?
ದೇಹಧರ್ಮಕೋ ಸಾವು ಉಂಟು, ಆತ್ಮಕಗೆ ಸಾವು ಇಲ್ಲ.

ಭಾವ : ಗಾಂಧಿಯವರ ಅಮರತ್ವ ಕುರಿತು ಚಿಂತನ

ಶಬ್ದಾರ್ಥ : ಕುಂಭಮಾಸ=ಮಾಘಮಾಸ. ವೈತಾಳಿ=ವಂದಿಮಾಗಧ, ಸ್ತುತಿಪಾಠಕ. ಮಲೆತ=ಹೆಚ್ಚಾದ. ಚಾರಿ=ಸಂಚಾರದ ರೀತಿ. ನವಿದು=ಕ್ಷೀಣವಾಗಿ, ಶಕ್ತಿಗುಂದಿ.



೭ ಜಯ ಜಯಾ ಗಾಂಧಿ ಮೋಹನಾ

ಬಿಂದು

೧
ಜಯ ಜಯಾ ಗಾಂಧಿ ಮೋಹನಾ
ರಾಷ್ಟ್ರದೋಹನಾ
ಸತ್ಯಶರಣಾ-ಸತ್ಯ ಶರಣಾ
ಕಾದಿದಿರಿ ಶಾಂತಿಗೆ ಅಂತು
ಅಂತನಽ ಬಂತು
ಭೀಷ್ಮಮರಣಾ-ಭೀಷ್ಮಮರಣಾ.

೨
ಅಸರಂತ ನಿಮ್ಮ ಜೀವನಾ
ಒಂದೆ ಸಮ ರಣಾ
ಆತು ಕೊನೆಗೂ-ಆತು ಕೊನೆಗೂ
ಸೀಳಿದಿರಿ ಸಾವಿನ ತಲೀ
ಕೊಟ್ಟಿರಿ ಬಲೀ
ಕೀರ್ತಿಶನಿಗೂ-ಕೀರ್ತಿಶನಿಗೂ

೩
ಒಡದರ ನಿಮ್ಮ ಒಡಲೋ
ಬಂತು ಸಿಡಿಲು
ರಣಬೊಬ್ಬಿ ನಿಮ್ಮ ಹೆಸರೊ
ಏನು ಕುಸುರು

೪
ಮಿಡಿದಿತ್ತು ಮಿಂಚಿನ ಕಾಂತಿ
ಮುಗಿಲಿನ ತಂತಿ
ಬಯಲಾತು ಮಾತಿನ ಭ್ರಾಂತಿ
ತಣ್ಣಸಿತು ಶಾಂತಿ
ಊದ್ಯಽದ ಕಾಳಿಯ ಕ್ರಾಂತಿ
-ಮಾನವೋತ್ಕ್ರಾಂತಿ.

೫

ಸ್ವಾತಂತ್ರ್ಯದೂತ ಜಯಜಯಾ
ಜಾತ ನಿರ್ಭಯಾ
ರಾಷ್ಟ್ರಪವನಾ-ರಾಷ್ಟ್ರಪವನಾ
ಕವಿಹೃದಯ ಜಾತ ಪ್ರೇರಣಾ
ಪ್ರೇಮಕಾರಣಾ
ಇಗೋ ಕವನಾ-ಇಗೋ ಕವನಾ.

೬

ಕರ್ನಾಟ ದೇಶದ ಜನಾ
ಕನ್ನಡಿಸಿತು ಮನಾ
ಹಾಡಿತು ಕವಿಗಣಾ
ಜಯಜಯಾ.....

[illegible]

೧

ನೆನಸೇವು ನಿಮ್ಮ ಆ ನಗೀ
ಒಳಗ ಇಲ್ಲ ಧಗಿ
ಬರೇ ಬೆಳಕು-ಬರೇ ಬೆಳಕು!
ನಿಂಮಾತು ಮಿಂಚಿನ ಗೆರಿ
ಎಲ್ಲಿ ಸರಿದೊರಿ
ಇಲ್ಲ ಅಳಕು-ಇಲ್ಲ ಅಳಕು

೨

ನಿಮ ಕಾರ್ಯಾ-ಕಿರಿಬೆಳ್ಳಿನಾ ಸೆಲಿ
ಹಿಗ್ಗಿಧಾಂಗ ಹೊಳಿ
ಮುಂದ ಹರವು-ಮುಂದ ಹರವು
ನಿಮ್ ಹೃದಯದಾಗ ಇಲ್ಲ ಪಾಪ
ಶುದ್ಧನಿರ್ಲೇಪ
ಸದಾ ತೆರವೋ-ಸದಾ ತೆರವು.


೩

ನಿಮ ಚರಿತವಾಯಿತೋ ಕಥೀ
ಧರ್ಮನ ಗತೀ
ನಿಮ್ನೊಲುಮಿಗಿಲ್ಲವೋ ನೆಲೀ
ಎಲ್ಲಿಯು ಬೆಲೀ

೪
ವೈರಿಯನು ಕೂಡ ಒಳಗೊಂಡು
ಪ್ರೇಮವ ಕಂಡು
ಅಬಲೆಯರ ಬಾಲಕರ ಹಿಂಡು
ಮಾಡಿದಿರಿ ದಂಡು,
ಮುರಿದಿರಿ ಭೇದದ ಸಂದು
ವಿಶ್ವದ ಬಂಧು
೫
ನಿಮ ಸೋಲಿಗೂ ಕೊನೆಗೂ ಜಯಾ
ಯಾರಿಗಿದೆ ಭಯಾ
ನಿತ್ಯಕರುಣಾ-ನಿತ್ಯಕರುಣಾ.
ನೀವಿಟ್ಟ ಒಂದೊಂದs ಅಡಿ
ಮುಕ್ತಿಯ ಗಡಿ
ಬಂಧಹರಣಾ-ಬಂಧಹರಣಾ
೬
ರಾಮನಾಮದಾಗ ನಿಮ್ಮ ಪ್ರೇಮಾ
ಅದೇ ನಿಂ ನೇಮಾ
ಕೊನೀಮೊದಲು-ಕೊನೀಮೊದಲು
ಜಯಜಯಾ.....

ಮೂರು

೧
ಎಲ್ಲರಿಗು ಅವರವರs ರೀತಿ
ಬೇರೆ ಬೇರೆ ಪ್ರೀತಿ
ಇಲ್ಲ ತೊದಲು-ಇಲ್ಲ ತೊದಲು
ಬಟಾಬಯಲಿನ್ಯಾಗ ನಿಂರಾಜ್ಯ
ಮೋಸದ ಕೂಡ ವ್ಯಾಜ್ಯ
ಸುತ್ತು ದಾಳಿ-ಸುತ್ತು ದಾಳಿ.



೨

ನಿಂ ಚಥಾಯಿ ಮಾಡುವ ನೀತಿ
ಅಸಲ್ ನಿರ್ಭೀತಿ
ಹೇಳಿಕೇಳಿ-ಹೇಳಿಕೇಳಿ
ಭಲಬಲ ಇದ್ದು ಧೀರಾಽ
ಎಂಥ ಶೂರಾಽ
ಆಸಕ್ತಿ ಇಲ್ಲದಾ ವೀರಾ
ಪುಟ್ಟ ಪೂರಾಽ

೩

ನಿಂ ಸ್ಮರಣ ಸ್ವರಾಜ್ಯದ ಹರಣಾ-
ದೀನ ಉದ್ಧರಣಾ
ನಿಂ ಚರಣ ದಾಸ್ಯ ಸಂತರಣಾ-
ದೃಷ್ಟಿ ವಿಸ್ತರಣಾ-
ಸುತ್ತಿರಲು ತಿಮಿರದಾವರಣಾ-
ಆಶೆಯಾ ಕಿರಣಾ.

೪

ವರುವರುಷದ ಶ್ರಾದ್ಧದ ದಿನ
ಶ್ರದ್ಧೆಯ ಧನ
ಉಪ್ಪಿನ ರಿಣಾ-ಉಪ್ಪಿನ ರಿಣಾ
ಜಯಜಯಾ.....

ನಾದ

೧

ತ್ರಿಜಗತ್ತದ ನೂಲಿನ ರಾಟಿ
ಕವನ ಹೊಸ ಧಾಟಿ
ಕೇಳು ಸುಗುಣಾ-ಕೇಳು ಸುಗುಣಾ.
ನಿಂಗುಣ ಆಕಾಶದ ಚುಕ್ಕಿ
ಪಡೆಧಾಂಗ ರೆಕ್ಕಿ
ಕುಣೀತಾವ ಮುಂದ-ಕುಣೀತಾವ ಮುಂದ

೨

ಅಂಬಿಕಾತನಯನ ಬಂಧ
ಸಮುದ್ರದ ಅಂದ.
ಭಾವ ಭವನಾ-ಭಾವ ಭವನಾ
ಸ್ವಾತಂತ್ರ್ಯಜೇತ ಜಯಜಯಾ
ಮುಟ್ಟಾ ನಿರ್ಭಯಾ
ದೋಹದವನಾ-ದೋಹದವನಾ

೩

ಕವಿಹೃದಯ ದೀಪ್ತ ಭಾವನಾ
ಪ್ರೇಮ ಜೀವನಾ
ಕರುಣ-ಕವನಾ-ಸ್ಮರಣಕವನಾ.

ಭಾವ : ಒಂದು ಕವಿಗೋಷ್ಠಿಯಲ್ಲಿ ಗಾಂಧಿಯವರನ್ನು ಸ್ಮರಿಸಿ, ಲಾವಣಿ ಛಂದದಲ್ಲಿ ಹಾಡಿದ ಕವನ.

ಶಬ್ದಾರ್ಥ : ದೋಹದಾ=ಅಪೇಕ್ಷೆಯನ್ನು ಪೂರ್ಣಗೊಳಿಸುವ. ಧಗಿ=ಉರಿಯ ದಾಹ. ಚಥಾಯಿ=ಏರಿಬರ
ದಾಳಿಮಾಡು.

೮ ನವಯುಗಾರಂಭ

೧
ಸಂಕ್ರಾಂತಿಗೆ ಮರ ಬಿರಿಯೆ,
ಪಡುವಲ ಗಾಳಿಯು ಹರಿಯೆ,
ನನೆದೋರಲು ಮೈ ಮುರಿಯೆ,
ಶಿಶಿರದ ಮಾಗಿ.

೨
ರಥವೇರಿದನಿನ್ನು ರವಿ
ಕಣ್ತೆರೆಸಿದ ಯುಗದ ಕವಿ
ಬೇವಿನಲ್ಲು ಮೂಡಿತು ಸವಿ
ಅಮೃತವು ತಾಗಿ.

೩
ಭಾರತಮುಣ್ಣೆಪೆ ಬಂತು:
ನಾನು ಮುಂತು ನೀನು ಮುಂತು
ಕಡಲು ಮೂರು ಮೊರೆವವಿಂತು
ಊದಿದೆ ಗಾಳಿ.

೪
ಉತ್ತರೋತ್ತರೋತ್ತರೊಂದು
ಕುಡಿ ಮೂಡಿ ಚಿಗುರು ಬಂದು
ತುತ್ತುತ್ತೂತ್ತುದಿಗೆಂದೂ
ಮುಗುಳ್ನಗೆ ತಾಳಿ.

೫
ಅಗಸ್ತ್ಯದೊಡನೆ ಆದುದುದಯ
ಸಂಕ್ರಾಂತಿಗೆ ಇದೆ ವಿಜಯ
ಮಾಘವು ಸಾರುವದಭಯ
ಹೊಸದೋ ದಿನದಿನವು.

೬
'ಮಾತೆ ಕೃತಿಯ ರೂಪ ತಾಳಿ
ಘೋಷ ಸಿದ್ಧಿಯಾಗಿ ಬಾಳಿ'
ತಮ್ಮ ತಾವೆ ಮೊದಲು ಆಳಿ
ಏಳಲಿ ಜನವು.

೭
ಜ್ಞಾನದಿ ಮತಮತವು ಕೂಡಿ
ರಸವು ಭಾವದಲ್ಲಿ ಮೂಡಿ
ದೈವಪೌರುಷಗಳ ಜೋಡಿ
ತಳಹದಿ ಕೃತಿಗೆ.
೮
ಹಳ್ಳಿ ಹಳ್ಳಿ ಸಕಲ ಭೋಜ್ಯ
ಭಾರತವಿದು ಅವಿಭಾಜ್ಯ
ಜಗತ್ತೆಲ್ಲ ಏಕರಾಜ್ಯ
ಸಾರಲಿ ಶ್ರುತಿಗೆ.
೯
ಅವರವರಿಗೆ ಅವರ ಹಾದಿ
ಪ್ರತಿಕಿರಣಕು ರವಿಯೆ ಆದಿ
ಸಪ್ತಸ್ವರಕು ಶ್ರುತಿ ಸನಾದಿ
ಸಂಗತಿ ಗೀತ.
೧೦
ಸೌಜನ್ಯದ ಶಕ್ತಿ ಬೆಳೆದು
ಸತ್ಯದಲ್ಲಿ ಪ್ರೀತಿ ವೊಳೆದು
ಆನಂದವೆ ರೂಪ ತಳೆದು
ಆಗಲಿ ಸುಪ್ರೀತ.
೧೧
ಹೃದಯಸಮತೆ ಮೊದಲ ಪಾಠ
ಬಾಂಧವ್ಯವೆ ಜೀವದಾಟ
ಮೂರು ಮುಖಕು ಒಂದೆ ಪೀಠ
ಸಿಂಹದ ದಾರಿ.
೧೨
ಆನೆಯಹಂಕಾರ ತುಳಿದು
ಕಾಮನ ಬಿಲ್ಲನ್ನು ಹಿಳಿದು
ಜಯಮಾಲೆಯ ಕರದಿ ತಳೆದು
ಬರುತಿರಲೇರಿ.

೧೩

ತಕ್ಕಡಿಗೋ ಬೇಡ ಕಾಣೆ
ತೂಗುತಿರಲಿ ಸತ್ಯವಾಣೆ
ಕಣ್ಮುಚ್ಚಿಯು ನ್ಯಾಯರಾಣೆ
ಭಾಗ್ಯವ ಕೊಡಲಿ.

೧೪

ಹೃದಯಕಮಲದೇಕಚಕ್ರ
ಮುರಿಯಲಿ ವಾಸನೆಯ ವಕ್ರ
ಉಷೆಯ ಹಣೆಗೆ ಬೆಳ್ಳಿ ಶುಕ್ರ
ತಿಲಕವನಿಡಲಿ.

೧೫

ತಾಯಿ ಸಿಂಹವಾಹಿನೀ,
ಗಜಾಂತಲಕ್ಷ್ಮಿದಾಯಿನೀ,
ಅತುಲೆ ಸರ್ವಸಾಹಿನೀ,
ವಿಶ್ವಮೋಹಿನೀ.

೧೬

ಅರಳಿಸು ಹೃದಯಾರವಿಂದ
ಸಾವಿರದೀ ಏಕಬಂಧ
ಕುಣಿಯಲಿ ಸ್ವಚ್ಛಂದದಿಂದ
ನವಯುಗದಿಂದ

ಭಾವ : ಸ್ವಾತಂತ್ರ್ಯದ ದಿನದ ಗೀತ.

ಶಬ್ದಾರ್ಥ : ಹಿಳಿ=ಹಿಂಡು. ಕಾಣೆ=ಚಿಕ್ಕತೂಕ. ಸಮತ್ವಕ್ಕೆ ತರುವ ತೂಕ.

ವಿಶೇಷ : ನುಡಿ - ೬ ಮಾತೆ, ಘೋಷ - ಪಾಂಡಿಚೇರಿಯ ಶ್ರೀ ಮಾತಾ ಹಾಗೂ ಶ್ರೀ ಅರವಿಂದರು.

೯ ಸಂಖ್ಯಾಂಕಿತ

೧

ಪತ್ತಾಗೆ ಅಯ್ದಕ್ಕೆ ಅದರ ತೋಳ್ ತೊಡೆ ಅದಕೆ,
ನೀರರು ಪರಸ್ಪರರ ತಿರುಳು ನೆರಳು.
ಪಾಡುಪಟ್ಟಿತು ಕರುಳು, ರಾಗರಂಜಿತ ಕೊರಳು
ತಂತಿಯಲಿ ಮೂಡಿಸಿತು ಒಲಿದ ಬೆರಳು.

೨

ಕಳೆವರೂ ಕೂಡಿಸಿಯೂ ಗುಣಿಸಿಯೂ ಭಾಗಿಸಿಯು
ಒಂಬತ್ತು ಇಹುದು ಒಂಬತ್ತರಂದ
ಅಂಕೆಯಲಿ ಸಂಖ್ಯೆಯಲಿ ಕೂಡಿಸಿಯು ಗುಣಿಸಿಯೂ
ಒಂಬತ್ತು ಏಗಳೊಂಬತ್ತರಂದ.

೩

ಸೊಲ್ಲು ಎಂಬುದು ನಾದ, ಭಾವದಲ್ಲಿದೆ ಸ್ವಾದ
ಸ್ವಗತವಿಲ್ಲದ ಮೋದ ಹೊಳಲುಗೊಡದು
ಓಹೋ ನವೋನವದ ಸೊಬಗ ಬಣ್ಣಿಸಬಹುದೆ
ಒಂಬತ್ತು ತನ್ನತನ ತಾನು ಬಿಡದು.

೪

ಎಂಟರಲ್ಲುಂಟು ದಿಗ್ಬಂಧವೆಂಬುವ ಚೆಂದ
ಘನವೆಷ್ಟೆ ಆದರೂ ಅಷ್ಟಕೋಣ.
ಮಲ್ಲಿಗೆಯ ಅಂಟು ಇದ್ದಂತೆ ನೇಹದ ನಂಟು.
ಮೈತುಂಬ ಅದಕುಂಟು ಮುಳ್ಳುತಾಣ.

೫

ಏಳು ನೆಲೆಯಲ್ಲಿ ನೆಲಸಿಹುದು ನಿಲುವಿನ ನಲುಮೆ
ನಿದ್ದೆಗನಸುಗಳಲ್ಲಿ ಮುಗಿಯಿತೇನು?
ಎದ್ದವರು ಗೆದ್ದವರು ಜಾಂದುಂಬ ಕಾಣುವರು
ಚುಕ್ಕೆ ತೋಟಗಟ್ಟುತಿಹ ಬೆಳಕು-ಜೇನು.

೬


ಆsರೆ ಏನಬೇಡಣ್ಣ! ಆರರೇ ಆರಾರೆ?
ಕಣ್ಣಾರೆ ಮನವಾರೆ ಬಾಳಬೇಕು.
ನಾಡನ್ನು ಕಾಡೆಂದು ಬೀಳುಗಳೆವರೆ? ಬೀಡ-
ಕಟ್ಟಿ ಪಟ್ಟಣವನ್ನು ಆಳಬೇಕು.

೭
ಕೈಯೊಳಿಲ್ಲವೆ ಕೈದು? ಬದುಕು ಗೈಮೆಯ ಗೈದು.
ಅಯ್ಯಕ್ಕೆ ಅಯ್ದೆ ಜತೆ ಹತ್ತಲುಂಟು.
ಮುತ್ತಯ್ಯ ಮುತ್ತಯ್ದೆ ದಾಂಪತ್ಯವನ್ನೈದೆ
ಮರಮರಳಿ ಬೀಜವನೆ ಬಿತ್ತಲುಂಟು.
೮
ನಾಲ್ಕು ಮೂಲೆಗು ಹಬ್ಬಿ ನಲಿವು ನಳನಳಿಸುವದು
ಚಾತುರ್ಯ ಚಾರುತ್ವ ಚರಿತವೆಂದು,
ಒಂದೆ ನಾಲಿಗೆಯಲ್ಲಿ ರಸವಿಸರ ಪಸರಿಸಿದೆ
ಪ್ರಕೃತಿ ಪೌರುಷ ಜಗದ್ಚರಿತವೆಂದು.
೯
ಮೂರರೊಳಗಿದೆ ಒಂದು, ಕೇಂದ್ರದೊಳು ಬಾ ಹೊಂದು
ಸಂದು ಬಿಡದಂತೆ ಕಲೆಗೂಡಿಕೊಂಡು;
ಅಧಮ ಉತ್ತಮ ಮಧ್ಯಮವನು ಬೇರ್ಪಡಿಸಿದರು
ಓಂಕಾರ ಮಂಡಲದಿ ಶೂನ್ಯಚೆಂಡು.
೧೦
ಎರಡಿಲ್ಲದೊಂದಿಲ್ಲ, ಒಂದಿರದ ಎರಡಿಲ್ಲ
ಎರಕದಲಿ ಹುಟ್ಟುವದು ಒಂದೆ ಮೂರ್ತಿ
ಅವಿಭಕ್ತ ಭಕ್ತಿಯಲಿ, ಸಮರಸದ ಶಕ್ತಿಯಲಿ
ಭಕ್ತ ಭಗವಂತರಲಿ ಒಂದೆ ಕೀರ್ತಿ.
೧೧
ಒಂದರಲಿ ಹಲವುಂಟು, ಬೀಜಫಲಗಳ ಗಂಟು
ಪ್ರಸ್ತಾರ ವಿಸ್ತಾರ ಆಗುಹೋಗು.
ಕಂದ ಮಾಕಂದಗಳ ತೋಪಿನಲಿ ಮೆರೆಯುವದು
ಅಂಬೆಯಮ್ಮಾಯೆಂದು ಕರೆವ ಕೂಗು.

೧೨
ಯಮನಿಯಮಗಳ ಗಂಟು ಮಾಯಾಮಯದ ನಂಟು
ವಾಮನಾಕಾರದಾ ಕುಬ್ಜನಂತೆ
ಹತ್ತೆಂದು, ನೂರೆಂದು ಸಾಸಿರದ ಲಕ್ಷವೋ
ಜೀವಕೋಟಿಯ ಕೊನೆಗೆ ಅಬ್ಜದಂತೆ.

ಭಾವ : ಬೇಂದ್ರೆಯವರಿಗೆ ಸಂಖ್ಯಾರಹಸ್ಯವನ್ನು ಭೇದಿಸುವದರಲ್ಲಿ ಆಸಕ್ತಿ ಬಹಳ. ಸಂಖ್ಯಾಧ್ಯಾನದಿಂದ ರೂಪುಗೊಂಡ ಈ ಸೂಕ್ತಿ ಮಾಲೆಯಲ್ಲಿ ವಿಶ್ವ-ರಚನೆಯ ವಿವರಣೆ ಸಂಖ್ಯಾಂಕಿತವಾಗಿ ಬಂದಿದೆ.

ಶಬ್ದಾರ್ಥ: ನೀರರು=ಪರಸ್ಪರ ಪ್ರೀತಿಯವರು. ಏಗಳ್-ಏಗಂ-ಅತಿನಿಶ್ಚಯ. ಆರ್-ಯಾರು, ಸಾಮರ್ಥ್ಯ, ತೃಪ್ತಿ ಒಣಗು, ಸಂಖ್ಯೆ. ಮಾಕಂದ=ಮಾವಿನ ಮರ. ಕುಬ್ಜ=ಗಿಡ್ಡ ಕುಳ್ಳ.



೧೦ ಮಾತುಮೌನ

೧
ದಿನದ ರವಿಯ ಪ್ರಭೆ ಚುಕ್ಕೆ ಚೂರಾಗಿ ದಿಕ್ಕು ದಿಕ್ಕಿನಲ್ಲಿ
ಸಿಕ್ಕಿಕೊಂಡಿತೋ ಕತ್ತಲಲ್ಲಿ ಇಕೊ ನಿಶೆಯು ನಕ್ಕಿತಿಲ್ಲಿ.

೨
ದುಂದುಗಾರ ಚಂದಿರನು ಇಣಕಿದನು ಬೆಳಕೆ ಸಾಲದಾಗಿ
ರಸಿಕ ನೀತಿಯಲಿ ಬೆರೆಸಿ ಬಳಸುವನು ತಮವ ಸಾಲವಾಗಿ

೩
ನಿದ್ದೆಯುಸಿರ ಶ್ರುತಿ ಹಿಡಿದು ಮೀಟುತಿದೆ ಮೌನವೀಣೆಯನ್ನು
ಕನಸು ಕುಣಿಸುವದು ಮನೋಮದಿರೆ ಪ್ರಜ್ಞಾಪ್ರವೀಣೆಯನ್ನು.

೪
ಇರುಳ ಗಸಿ ಇಳಿದು ನಸುಕು ಮಿಸುಕಲಿದೆ ತುಪ್ಪ ತೇಲುವಂತೆ
ಕಸರು ಕಳೆದು ತಮ ಹಿಂಜಿ ಬಂತು ರವಿಕಿರಣ ನೂಲುವಂತೆ.

೫
ಕೂಸು ಹಾಸಿನಲಿ ಹಕ್ಕಿ ಉಲಿಯುತಿವೆ ಬೇಲಿ ಬೇಲಿಯಲ್ಲಿ
ಕುಸುಮ ಸೌಸವಕೆ ಭಾವ ದನಿಗಿಳಿಸಿ ಉಷೆಯ ಸಾಲೆಯಲ್ಲಿ.

೬
ಮನವು ಮೌನದಲಿ ಹೆಪ್ಪುಗೊಂಡಿರಲು ಮಂಜು ದಿಣ್ಣೆಯಂತೆ
ರವಿಯ ಬಿಸಿಯ ಕಡೆಗೋಲು ಕಡೆಯೆ ಸಿಡಿದಿತ್ತು ಬೆಣ್ಣೆಯಂತೆ.

೭
ನಿನ್ನ ಕುರಿತು ಮಾತಾಡದಿರುವದೇ ಮೌನ ಯಜ್ಞವೆಂಬೆ.
ನನ್ನ ಬಣ್ಣನೆಯ ಸಣ್ಣ ಮಾತಿನಲು ನೀನೆ ಪೂಜೆಗೊಂಬೆ.

ಭಾವ : ಮಾತು-ಮೌನದ ಪ್ರತಿಮೆ; ಮೌನ ಮಾತಿನ ದೈವ ಎಂಬ ಭಾವಲಹರಿ ಈ ಕವನದಲ್ಲಿದೆ.

ಶಬ್ದಾರ್ಥ : ಮದಿರೆ=ಸುರೆ, ಸೆರೆ. ಸೌಸವ-ಸವುಸವ=ಸುಗಂಧ.

ವಿಶೇಷ : ಧಾರವಾಡ ಕುರಿತು ಮಾತಿನ ಮೌನಯಜ್ಞ.

೧೧ ನೃತ್ಯಯಜ್ಞ

೧
ಗಿರಿಶಿಖರದಿ ಶಿಖೆಯನೆತ್ತಿ ಶಿಖಿಯ ಕೇಕೆ ಕರೆವುದು;
''ಮೋಡ ಬಂತು ಮಿಂಚಿತಂತು ಗುಡುಗು ಮಳೆಯು ಬರುವುದು''
೨
ಜಗವೆಲ್ಲವು ಮೊರೆಯಿಡುತಿರೆ ಕುಣಿಯುತ್ತಿದೆ ಕೇಕೀ
ಸಖಿ ಸಂಮುಖ ತಲ್ಲೀನತೆಯಲಿ ಏಕಾಕಿ.
೩
ಹೇ ಶಿಖಂಡಿ ಹೇ ತ್ರಿದಂಡಿ ನಿನ್ನೊಡ ಚಾಮುಂಡೀ!
ತಾಂಡವಕ್ಕೆ ಹಾಸ್ಯಲಾಸ್ಯ ಬೆರೆಸುವ ರಣಚಂಡೀ,
೪
''ದಿಕ್ಕು ದಿಕ್ಕು ಕತ್ತಲಿಸಿತು ಪ್ರಳಯವೆ ಇದು ಬಂತೇ
ಮುಳುಗಿಸುವದೊ ತೇಲಿಸುವದೊ ಕಾಲವೆ ಎಂಬಂತೆ''
೫
''ಥಕ ಥೈ ಥೈ ಧಿಕ ತಟತೋಂ ಇದೇ ತಾಲ ಮಳೆಯದೋ
ಹಳ್ಳಕೊಳ್ಳಗಿರಿದರಿಯಲಿ ಹರಿಯುತ್ತಿಹ ಹೊಳೆಯದೋ
೬
ಬರಲಿಹ ಬೆಳೆ ಪಯಿರಿನಲ್ಲಿ ಕುತುಕದಿಂದ ಕುಣಿವುದೋ
ಋತುರಾಜನ ಋತಜಾತದ ಜೀವನದಲಿ ಋಣವಿದೋ
೭
ಓ ಕುಮಾರ, ಬೇಗ ಬಾರ, ತುಂಬಿ ತಾರ, ಬೆಳೆಯನು,
ಕಾರ್ತಿಕದಲಿ ಭೂಮಿ ಕಾಂಬ ಶಾರದೀಯ ಕಳೆಯನು
೮
ಆಹಾ ಸಖಿ, ಆಹಾ ಸುಖಿ, ಸಾವಿರ ಶಿಖಿ ಹೊತ್ತಿವೆ.''
''ಕುಣಿಯೋ ಕುಣಿ ಸಹಸ್ರಮುಖೀ ಆಸೆ ತಲೆಯನೆತ್ತಿವೆ.
೯
ಅನ್ನ ಅನ್ನ ಬುಸುಗುಡುತಿದೆ ಮಾನವನಾಗರವು
ತೆರೆತೆರೆಯಲಿ ತೆರೆಯಿತು ನವ ದುಃಖದ ಸಾಗರವು.
೧೦
ತಾರಕ ಸಂಹಾರಕನಾಗುತ ಅಗೊ ಕಂದರ್ಪ
ದರ್ಪದಿಂದ ಹೆಡೆ ಸೆಡೆಯುತ ತಾಂಡವಿಸಿತು ಸರ್ಪ.''

೧೧
''ಶಕ್ತಿಕಂದ ಶಿವನಂದನ ಶಿಖಿ ಸ್ಕಂದನ ಕರೆವೆ
ವಾಹನವಾಗಲು ಅರ್ಪಿಸಿ ಅವನಲಿ ಮೈದೆರೆವೆ.
೧೨
ಅಗ್ನಿದೇಹಿ ಆತ್ಮಸ್ನೇಹಿ ಬಾರೋ ಬಾ ಷಣ್ಮುಖಾ
ಚತುರಂಗದ ಚಾತುರ್ಯದ ಜ್ಞಾನಕರ್ಮಸಮಸುಖಾ.
೧೩
ಶಿಖಿಗಂಡನೆ ಮೈಗೊಂಡನೆ ಕೆಂಗೆಂಡನೆ ತೋರ್ರೈ
ದೇವತೆಗಳ ಸೇನಾಪತಿ ಭೂರಂಗಕೆ ಬಾರ್ರೈ''
೧೪
''ಶಿಖೀ ಶಿಖಿ ಸಹಸ್ರನಖೀ ವರ್ಷಾವೀಣೆಯನೆ
ಬಾಜಿಸಿ ಪರ್ಜನ್ಯವ ಕರೆ ಅಂತರ್ಜ್ಞಾನಿಯೆನೆ''
೧೫
ಕಣಕಣದಲಿ ಕಣ್‌ಕುಣಿಯಲಿ ಪರಮೇಷ್ಠಿಯ ಕಂಡು
ಸಾಮಷ್ಟಿಕ ಕ್ಷೇತ್ರದಲ್ಲಿ ವ್ಯಕ್ತಿಯ ಸುಖವುಂಡು
೧೬
ಐಕ್ಯಸಮದ ತಾಯಿಯಲ್ಲಿ ಬರುವದು ಉದ್ದೀಪ್ತ
ಆ ತುರಾಯಿ ಕುಣಿಸಿ ಕುಣೀ ಓ ಪ್ರಾಜ್ಞಾ ಸುಪ್ತಾ.
೧೭
ಅಕ್ಷರದೀ ಬ್ರಹ್ಮಕೃತ್ಯ ನಿತ್ಯದ ಈ ನೃತ್ಯ
ಚಿತ್ತದಲ್ಲಿ ಚಿತ್ರಿಸುತಿರೆ ಮರ್ತ್ಯವಹುದಮರ್ತ್ಯ.
೧೮
ಪುರುಷನಿದಿರು ಪ್ರಕೃತಿ ಕುಣಿವುದೆಂದು ಸಾಂಖ್ಯಸೂತ್ರ
ಪ್ರಕೃತಿ ಸಾಕ್ಷಿ ಪುರಷನಾಟ್ಯ ನವೋನವ ವಿಚಿತ್ರ.
೧೯
ಇದೆ ಪೌರುಷ, ಇದೆ ಸೌರಸ, ಇದೆ ಚೌರಸವೆಂದು
ನೆತ್ತಿ ಹೊತ್ತ ಆತ್ಮಶಿಖಿಯ ಪರಿಣಾಮವ ಕಂಡು
೨೦
ಬೇಸಗೆ ಸಿಪಿ ಶಿಖಿಗಂಡಿತು ಶತದಳಮುಖ ಉರಿಯೇ
ಹುಬ್ಬಿನ ಮುಬ್ಬಿನ ಬಸಿರ್ ಬಂಗಾರದ ಬಾಯ್ದೆರೆಯೇ


೨೧
ಗೌರೀ ಶಂಕರ ತಲೆಯೆತ್ತಿದೆ ಕೇತುವೆ ಎಂದೋ
ಧಿಮಕಿಡುತಿದೆ ಆ ಕುಮಾರಿ ಆ ಸೇತುವೆಯಿಂದೋ?
೨೨
ಹಾ ಭಯವೋ ಓ ನಿದ್ದೆಯೊ ಮಿಥುನದ ಒಲವೋ
ರೌದ್ರದ ಮೊರೆ ಹೇಸಿಗೆ ಹೊರೆ ಮಾನವ ದಳವೋ.

ಭಾವ : ಸಾಹಿತ್ಯ ಮತ್ತು ಕಾವ್ಯ ಬರಿ ವಿಲಾಸವಲ್ಲ. ಅದು ಕಲ್ಯಾಣ ಕಲೆಯುವ ಮಯೂರ ನೃತ್ಯ ಯಜ್ಞರೂಪ. ನೃತ್ಯ ಯಜ್ಞದ ಮೂರನೇ 'ಕಣಸು'.

ಶಬ್ದಾರ್ಥ : ಮೊರೆ=ನಾದ, ದುಃಖದ ಧ್ವನಿ. ತ್ರಿದಂಡಿ=ದೇಹ, ವಾಕ್, ಮನಗಳನ್ನು ಸಂಯಮಿಸಿ ಹೊರಟ ವಿರಕ್ತ. ಕುತುಕ=ಕೌತುಕ, ಆಶ್ಚರ್ಯ. ಸೆಡೆ=ಹೆಡೆ ಎತ್ತುವಿಕೆ. ಪರಮೇಷ್ಠಿ=ಶ್ರೇಷ್ಠ ಸ್ಥಿತಿಯನ್ನು ತಲುಪಿದ ಪ್ರಮುಖ. ಠಾಯಿ-ಸ್ಥಾಯಿ=ಹಾಡಿನ ರೀತಿ. ಸೌರಸ=ಸರಸಭಾವ. ಮಖ=ಯಜ್ಞ.

ವಿಶೇಷ : ಈ ಕವನದ ಧಂಸ್ಸು ಶ್ಲೋಕದಂತೆ ದ್ವಿಪದಿ.

೧೨ ನಾಳೆ ಎಂಬುವದು ಇಂದಿನ ಮನಸು



೧
ನಾಳೆ ಎಂಬುವದು ನಿನ್ನಿನ ಮನಸು
ಮುಂದೆ ಎಂಬುವದು ಇಂದಿನ ಕಣಸು.
೨
ಭೂತದಿಂದಲೇ ಭಾವವು ಬಂತು
ಭಾವವಿಲ್ಲದೇ ಉದ್ಭವವೆಂತು ?
೩
ಕರ್ಮವಿಲ್ಲದಾ ಧರ್ಮವದೇಕೆ ?
ಧರ್ಮಧಾರಣೆಯು ಹೆಣಕ್ಕೆ ಬೇಕೆ ?
೪
ಸತ್ ಎನ್ನುವದದು ಸತ್ತವಗಲ್ಲಾ
ಇರುವ ಭಾಗ್ಯವದು ಅರಿವವಗೆಲ್ಲಾ.
೫
ಪೊಳ್ಳು ಜೊಳ್ಳು ಅದು ಅಭಾವ ಶೂನ್ಯ
ಅದನ್ನು ತುಂಬಿದೆ ಪೂರ್ಣದ ಪುಣ್ಯ
೬
ಗೊಳಲಿಯ ಒಳಗಿದೆ ಬೆಳೆಯುವ ಬೀಜ
ಕತ್ತಲನ್ನೆ ಬಣ್ಣಿಸುವಾ ತೇಜ.
೭
ಮೌನದಲ್ಲಿಯೆ ರಾಗವ ಬೆರೆಸಿ
ಛಂದದಲ್ಲಿಯೇ ಜಗವನು ಹರಸಿ
೮
ಅನಂಗರಾಗದಿ ಅಂಗವ ಕುಣಿಸಿ
ಭೌಮದ ಪಾದಕೆ ಅಲ್ಪವ ಮಣಿಸಿ.
೯
ಒಲವಿಗೆ ನಲಿಯುವ ಅನಾದಿ ಮಿಥುನ
ಒಂದನೆ ನೂರೊಂದೆನಿಸುವ ರತುನ.
೧೦
ತನ್ನನೆ ತಾನೇ ತಿಳಿಗೊಂಡಂತೆ
ಶಿವನ ಶಕ್ತಿಯೇ ಎಳಿಗೊಂಡಂತೆ.
ಭಕ್ತಿಯಲ್ಲಿ ಭಗವಂತನ ಕಂಡಂತೆ

೧೧
ವಿಯೋಗವೆಂಬುದು ವಿರಹದ ಬೆಂಕಿ
ಯೋಗರಹಸ್ಯದ ಮೊದಲನೆ ಅಂಕಿ
೧೨
ಶಿವಕಲ್ಯಾಣವು ಕೂಡಲ ಸಂಗ
ರುದ್ರವಿಲಾಸವು ಜೀವನಭಂಗ

ಭಾವ : ದರ್ಶನದಂತೆ ಫಲವಿದೆ. ರುದ್ರ ಕಂಡವರಿಗೆ ರೌದ್ರ, ಶಿವ ಕಂಡವರಿಗೆ ಸರ್ವಮಂಗಳ, ಆದು
ಭವಿಷ್ಯತ್ತಿನ ಉದ್ಭವ.

ಶಬ್ದಾರ್ಥ : ಗೊಳಲಿ-ಬೊಳಲಿ-ತುಷ-ತವುಡು=ಬತ್ತದ ಹೊಟ್ಟು ಭೌಮ-ಭೂಮ=ಅತಿವಿಪುಲ.



೧೩ ಅ ಆ

೧
“ಜನಕೆ ಶಾಂತಿಯನು ನೀಡಲೆಂದು ಹೊರಟಿರುವ ಹಸಿಯ ಹುಡಗ;
ಗಾಳಿಗೆಷ್ಟು ಹರಿದೀತು ಹಾಹೆ ಹುಟ್ಟಿಲ್ಲದಾಗೆ ಹಡಗ?
ಕ್ಷೋಭೆಗೊಂಡು ಹುಚ್ಚೆದ್ದು ಹರಿವೆ ಹೇಳೆಲ್ಲಿ ನಿನ್ನ ನಲ್ಲೆ?
ದಿಕ್ಕಿಲ್ಲದಂತೆ ಹರಿದಾಡುವವಗೆ ಚುಕ್ಕಾಣಿ ಬೇಡ, ಬಲ್ಲೆ”.
೨
“ಆನೆಯೆತ್ತರಕೆ ಎದ್ದ ತೆರೆಗಳನು ನಾನು ಇದಿರುಗೊಂಡು
ನೂರು ಅಲೆಗಳಲಿ ಚಂದ್ರಕಲೆಗಳನು ಚೂರು ಚೂರು ಕಂಡು
ಪೂರ್ಣಬಿಂಬವನು ಕಾಣಲೆಂದು ಹಾಡಿದೆನು ಹೃದಯವೇದ;
ಬ್ರಹ್ಮನಾದ ತುಂಬಿರಲು ದನಿಯ ಕೂಡಿಸಿತು ಬ್ರಹ್ಮವಾದ”.
೩
“ರಾಗದಲ್ಲಿ ಮೂಡುವನು ರವಿಯು ಅನುರಾಗದಿಂದ ಮುಳುಗಿ
ನೆಲದ ಬೆಂಬಲಕೆ ನಿಲುವ ಕತ್ತಲವ ತಿಂಗಳಾಗಿ ಬೆಳಗಿ
ಧ್ರುವನ ನೆಲೆಗೆ ತಲೆಗೊಟ್ಟು ತಿರುಗೆ ತಿರುಗುವದು ತಿರೆಯ ಪ್ರೀತಿ
ಮಣ್ಣಿರದ ಕೆಚ್ಚು ಪ್ರತಿ ಸುಗ್ಗಿಯಲ್ಲಿ ಪಲ್ಲವಿಸೆ ಜಾತಿ ಜಾತಿ”.
೪
‘ಆ’ ಎಂದು ಬಾಯ ತೆರೆವುದಕು ಮೊದಲು ‘ಅಽ’ ಮೂಡಬೇಕು ಒಳಗೆ
ಈಶಪ್ರಣಯದಲಿ ಸೃಷ್ಟಿಯಾಗುವದು ಪ್ರಣವನಾದ ವೊಳಗೆ”.

ಭಾವ : ಪ್ರೇಮದ ಬೀಜ ಒಳಗೆ ಪಡೆದು, ಹೊರಗೆ ಬಿತ್ತುವ ಜೀವ, ತಪದಿಂದ ವೈಭವ ಸಮೃದ್ಧವಾಗುತ್ತದೆ.

ಶಬ್ದಾರ್ಥ : ಹಾಹೆ=ಗೊಂಬೆ, ಕಣ್ಣುಗುಡ್ಡೆ, ಚುಕ್ಕಾಣಿ=ಹಡಗು ಹಾಗೂ ವಿಮಾನ ಮುಂತಾದವುಗಳು ದಿಕ್ಕನ್ನು ಬದಲಾಯಿಸಲು ಸಹಾಯ ಮಾಡುವ ಒಂದು ಸಾಧನ.

೧೪ ಅಹನೆ

೧
ಅಹ, ಅಹಹ ಅಹನೆ! ಗಹಗಹಿಸಿತೆಲ್ಲೊ ದೂರದ ದಿಗಂತದಲ್ಲಿ;
ಕುಲುಕುಲನೆ ನಗುತ ಕಿಲಬಿಲಿಸಿ ಉಲಿದು ಕಲರವವು ಮೂಡಿತಿಲ್ಲಿ;
೨
ಕೋಗಿಲದ ಮೊದಲ ಕುಕಿಲೊಂದ ಕೇಳು ಕೂಗುವದು ಕೋಳಿಯೊಡನೆ
ಬೆಳ್ಳಿ ಕರಗಿ ಬೆಳಗಾಯ್ತು ಏಳು ಹಗಲಾಗಿ ಭಗನು ಸುಡನೆ?
೩
ಗಂಡು ಹೆಣ್ಣು ದಿನದಂತೆ ಎದ್ದು ದಿನದಾಟವಾಡುತಿರಲು
ನಿನ್ನೆ ನಾಳೆಗಳ ಸಂಧಿಯಲ್ಲಿ ಜನ ನೋಟ ನೋಡುತಿರಲು.
೪
ಗಂಗೆ ಯಮುನೆ ಕಣ್‌ಕೊನೆಗೆ ಇಳಿದು ಸುಖದುಃಖ ಹರಿಯುತಿಹುದು.
ಸರಸ್ವತಿಯ ಸಾಹಿತ್ಯದಲ್ಲಿ ದಾಳಿಂಬ ಬಿರಿಯುತಿಹುದು.
೫
ಸಂಜೆಗೆಂಪ ನಾಚಿಸುತ ಬಂತು ದಾಳಿಂಬ ಬಿಂಬ ಒಂದು
ಚಿನ್ನಿಸಕ್ಕರೆಯು ಬೆರೆಯೆ ಭರತಿ ಉಕ್ಕುವದು ಕ್ಷೀರಸಿಂಧು.
೬
ಹಗಲುಗನಸುಗಳು ದಿಗಿಲುಗನಸುಗಳು ಬರಲು ಜಾತ್ರೆಗಾಗಿ
ಹೃದಯ ಹೃದಯಗಳು ಕೂಡಲಾಗುವದು ದೇವಯಾತ್ರೆಯಾಗಿ.
೭
ಮಣ್ಣು ಮೈಯ ಮಗು ಮೂಡಿದಾಗ ಮಗಮಗಿಸಿತಣ್ಣ ಮುಗಿಲು
ಸೊಕ್ಕುಜವ್ವನದ ರಾತ್ರಿರಾಣಿ ಮುಸುಗುಡಿಸೆ ಆಯ್ತು ಹಗಲು.

-ರಚನೆ : ೧೯೩೨

ಭಾವ : ರಾತ್ರಿರಾಣಿ ಎಂಬ ಹೂವಿನ ಸುಗಂಧವು ಪ್ರೇಮದ ಉದ್ದೀಪನ ಮಾಡುವ ಬಗೆಯ ವರ್ಣನೆ.

ಶಬ್ದಾರ್ಥ : ಅಹನೆ=ದಿನದ ಬೆಳಗು. ಕಲರವ=ಮಂದವಾದ ಸುಸ್ವರ. ಭಗ=ಸೂರ್ಯ. ಚಿನ್ನಿಸಕ್ಕರೆ=ಬೆಲ್ಲದ ಬಣ್ಣದ ಸಕ್ಕರೆ, ಮಗದುಂ ಸಕ್ಕರೆ. ಮಗಮಗಿಸು=ಸುವಾಸನೆ. ಮುಸುಗುಡು=ಹಬ್ಬು.

೧೫ ಗೋವತ್ಸಲೀಲೆ

೧
ಗೋವತ್ಸಲೀಲೆ ತೊರೆಕರೆಯ ಮೇಲೆ ವನವಾಟ ಸೆಜ್ಜೆಸಾಲೆ.
ಕೊಳಲೆಲ್ಲೊ ಉಲಿಯೆ ಹರಿನೀರು ನಲಿಯೆ ಎಲ್ಲೆಲ್ಲು ಭೃಂಗಮಾಲೆ.
೨
ಇದು ಭೋಗಭೂಮಿಯೇ ಯೋಗಭೂಮಿ ಅರಿದೆಂದು ನೋಡುತಿದ್ದೆ.
ಕಲ್ಪನೆಯ ಬೊಗರಿ ತುದಿಬೆರಳ ತಿಗರಿ ಓ ಆಡುತಿತ್ತು ನಿದ್ದೆ.
೩
ಹಸಿ ಹಾಲು ಕೊಡ ಬಿಸಿ ಎಂದು ಬಂದ-ತಾ ಬಾಲ, ಕೃಷ್ಣನಾಗಿ
ಕೆನೆಕೆನೆಯು ಎಂದು ಮುಖ ಚಾಚಿ ನಿಂದ ಆ ತಾಯಿ ಕೆನ್ನೆಗಾಗಿ.
೪
ಬೆನ್ನೆಗೆ ಒರಗಿ ಹೆಗಲಲ್ಲಿ ಬಾಗಿ ಚಾಚಿತ್ತು ವತ್ಸವಲ್ಲಿ.
ಹೃದಯ ಕಂಚುಕವು ತೊಯ್ದು ಹನಿಸುತಿದೆ ತೊರೆದ ಹಾಲಿನಲ್ಲಿ.
೫
ಸೋಮ ತಾರೆಯರ ಮೈತ್ರಿ ಕೂಡಿತ್ತು ಶಕ್ತಿ ನೇತ್ರದಲ್ಲಿ.
ಪುಷ್ಪದತ್ತ ಅರಳಿದನು ಒಲವಿನಲಿ ವಿಷದ ಪಾತ್ರದಲ್ಲಿ.
೬
ಸತಿ ಮುಖದ ಸುಖಕೆ ಶಿವನಟ್ಟಹಾಸ ಕಡಲಾಗಿ ಉಕ್ಕುತಿತ್ತು.
ಧರ್ಮರೂಪ ವಾಕ್ಕರಣದಿಂದ ಶಿವಚರಣ ನೆಕ್ಕುತಿತ್ತು.
೭
ಮಲ್ಲಿಕಾರ್ಜುನನ ಶಿಖರದಲ್ಲಿ ಮೂಡಿತ್ತು ಚಂದ್ರಬಿಂಬ,
ಬಯಲಾಗಿ ನಿಂತ ನಿರ್ವಾಣಮೂರ್ತಿ ನಗುತಿತ್ತು ಬಾಯಿತುಂಬ.

ಭಾವ : ಕಣ್ಣನೊಳಗಿನ ಪ್ರೇಮಕ್ಕೆ ಸೋಮ ಮತ್ತು ತಾರೆಯರ ಮೈತ್ರಿಯ ಶಕ್ತಿ ಇರುತ್ತದೆ. ಇದು ಕೃಷ್ಣ ಮತ್ತು ಯಶೋದೆ ಹಾಗೂ ಶಿವ ಮತ್ತು ಅವನ ಪ್ರತಿಬಿಂಬದಲ್ಲಿ ಫಲಿಸುತ್ತದೆ. ಕೃಷ್ಣ ಮತ್ತು ರಾಧಾ ಹಾಗೂ ಶಿವ-ಶಕ್ತಿ ಇವರ ಪ್ರೇಮಕ್ಕೂ ಆ ಶಕ್ತಿ ಇದೆ.

ಅರ್ಥ : ತಿಗರಿ-ತಿಗುರಿ=ಕುಂಬಾರನ ಚಕ್ರ. ಕಂಚುಕ=ಉದ್ದವಾದ ನಿಲುವಂಗಿ.

ವಿಶೇಷ : ಶಿವನು ವಿಷದ ಪಾತ್ರೆಯಲ್ಲಿ ತನ್ನ ಪ್ರತಿಬಿಂಬ ಕಂಡಾಗ, ಅದೇ ಪುಷ್ಪದತ್ತನಾಗಿ ಹೊರಹೊಮ್ಮುತ್ತದೆ. ಪುಷ್ಪದತ್ತ ಶಿವನ ಮಾನಸಪುತ್ರ.

೧೬ ಅಪಾರ್ಥ-ಸಮೀಕ್ಷಕರಿಗೆ

೧
ನನ್ನೀ ನುಡಿ ನನ್ನೀ ನುಡಿ
ದೇವರ ಒಡನಾಡಿ
ಕಿಡಿ ಉದಿರಿಸಿ ಸಿಡಿವಿರಿಗೋ
ನೆರಳಿಗೆ ಬಡದಾಡಿ,

೨
ಕೇಳದ ನುಡಿ, ಕಾಣದ ನಡೆ, ಒಳತಿಗೆ ಕಿಡಿಗೇಡಿ.
ಕನ್ನಡವಿದೆ ಕನ್ನಡಿಯಿದೆ
ಕಣ್ಣಿದ್ದರೆ ನೋಡಿ.

೩
ಮುನಿಯದಿರಿ ಮೌನವಿರಿ
ಕಿವುಡರಿರಾ, ಕುರುಡರಿರಾ, ಮೂಕತ್ವವು ಲೇಸು,
ಮೊಂಡರಿರಾ, ಹೆಳವರಿರಾ,
ಕುಂಟುತ ಕುಣಿಯದಿರಿ.

೪
ಸಗ್ಗ ಸಗ್ಗ ಸಗ್ಗವದೋ ಅದು ಉರುಲಿನ ಹಗ್ಗ,
ನರಪೇತರ ನರಕದಲ್ಲಿ ಹೊಸೆಯದಿರೀ ಕಗ್ಗ.

೫
ದುರ್ಮತಿಯಲಿ ಬಯ್ದಾಡುವ
ಓ ನಾಡಿನ ಬಂಧು!
ತಲೆಯಿದ್ದರೆ ಹೇಳುವೆನಿಗೊ
ಕಿವಿಮಾತನ್ನೊಂದು

೬
ಕಾಲಕ್ಕೂ ಕೊನೆಯೊಂದಿದೆ
ಉಳಿಸಿರಿ ಉಸಿರನ್ನು
ಉದ್ಧತರೊಲು ಕೆಡಿಸುವುದೇ
'ಪ್ರಗತಿ'ಯ ಹೆಸರನ್ನು?

೭
ತಿಮ್ಮನೆ ಬೊಮ್ಮನೆ ಸುಮ್ಮನೆ
ಒರಲಿದರೇನರ್ಥ?
ವ್ಯರ್ಥವದೋ ಅದು ಅನರ್ಥ ಅಯ್ಯ! ಅಪಾರ್ಥ!

೮

ನನ್ನೀ ನುಡಿ ತೆರೆ ಎದೆ-ಗುಡಿ
ದೇವರ ಬರಮಾಡಿ;
ಕಡಿದಾಡುವಿರೇತಕ್ಕಿದು ದೆವ್ವನ ಮುಂದೂಡಿ,
ನಾಗನ ನಾಲಿಗೆಯಾಡಿಸಿ ಅಣಗಿಸಿ ಹಿಂದಾಡಿ ?

೯

ಒಕ್ಕಟ್ಟದು ಬಿಕ್ಕಟ್ಟು; ಚೌಕಟ್ಟಿನ ಗುಟ್ಟು
ತಿಳಿಯದೆ ನಾಡನು ಕಟ್ಟುವೆ
ಜೀವವ ಒಕ್ಕೊಟ್ಟು,
ಒಣಹಿಂಡಿಯ ಕೂಳುಣ್ಣುವೆ
ಎಳ್‌ನೆಯ್ ರಸಬಿಟ್ಟು.

೧೦

ಗೆಳೆಗೆಳೆಯರ ಕನ್ನಡವಿದು
ಕನ್ನಡಿಗರ ನಾಡು
ಜೀವಾಳದ ಉಸಿರೆತ್ತುತ ರಸನೇತ್ರದಿ ನೋಡು

ಭಾವ : ಸಮೀಕ್ಷೆಯ ನೆಪದಲ್ಲಿ ಅಪಾರ್ಥ ಪ್ರಪಂಚ ಬೆಳೆಸಿ, ವಿರಸವನ್ನೆ ಸರಸವೆಂದು ತಿಳಿವಳಿಕೆಗೀಡಾದವರ ವಾಕ್-ದುರ್ವಿಲಾಸವನ್ನು ನೋಡಿ.

ಶಬ್ದಾರ್ಥ : ನರಪೇತ=ಹೆಣದಂಥ ಮನುಷ್ಯ. ಉದ್ಧತ=ಸೊಕ್ಕಿದ. ಹಿಂಡಿ=ಒಂದು ಬಗೆಯ ಒಣ ಚಟ್ನಿ.



೧೭ ಭಕ್ತನಲ್ಲ ರಾಗಿ! ವಿರಾಗಿ

ಭಕ್ತನಲ್ಲ ರಾಗಿ! ವಿರಾಗಿ!
ಭಗವಂತನ ಭೋಗಿ ॥
ಅಹೋಹೋ। ಮಹಾವಿಶ್ವಯೋಗಿ ॥ ಪಲ್ಲವಿ ॥

೧
ಅಂತರಂಗವನೆ ನಾಟ್ಯರಂಗವನು ಮಾಡಿದ ನಟ ಜೋಗಿ।
ಸಮತೂಕದ ತುದಿಯಲ್ಲಿ ತೂಗಿಕೋ ನೀ ಪ್ರೇಕ್ಷಕನಾಗಿ।

೨
ಅಹಾ ರಸಿಕ ಜಾಣಾ।
ಎಲ್ಲಿಯು ಹುಸಿ ದುಃಖವ ಕಾಣಾ।

೩
ಸಾಕ್ಷಿಕ ಹೃದಯದಿ ಪಾಕವಾಗುತಿದೆ ನಾಳಿನ ಸವಿಬಾಳು.
ಕತಕತ ಕುದಿವುದು ಕದನಸದನದಲಿ ಅಜ್ಞಾನದ ಗೋಳು
ನೋಟವೋ ಆಗಿ ಹೋಳು ಹೋಳು ॥

೪
ಹೊರಳಿ ನೋಡು ಮರಮರಳಿ ನೋಡು ಒಳಗರಳಿ ನೋಡು ನೋಟ,
ಅಮೃತವನ್ನೆ ಬಸಿರಲ್ಲಿ ತುಂಬಿಕೊಂಡಿಹುದು ಕಾಲಕೂಟ
ಆಹಹಾ ಏನಿದು ಹೊಸ ಆಟಾ ॥

೫
ಹಮ್ಮು ಬಿಮ್ಮು ಹೊರೆ ಹೊರಗೆ ಇಳಿಸಿ ಬಾ ಹೆಡೆಯಂದದಿ ಬಾಗಿ,
ತಲೆಯ ದಿಮ್ಮು ಇಳಿಸೀತು ಸುಮ್ಮನೇ ನೀ ಸೆಟೆದರೆ ತಾಗಿ
ಎಲೋ ಕ್ಷುದ್ರ ತ್ಯಾಗಿ॥

ಭಾವ : ಭಕ್ತಶುಷ್ಕ ವಿರಕ್ತನಲ್ಲ; ಭಗವದನುರಕ್ತ ಅವನದು ಮೌಲಿಕ ತ್ಯಾಗ. ಉಳಿದುದು ಕ್ಷುದ್ರ ಅಲ್ಪ.

ಶಬ್ದಾರ್ಥ : ದಿಮ್ಮು=ತಲೆಯ ಜಡತೆ.

೧೮ ಊರು ಮತ್ತು ಖಾಲ್ಡಿಯಾ

೧
ಊರು ಮತ್ತು ಖಾಲ್ಡಿಯಾ
ಬಾಬಿಲೋನ ಅಸೀರಿಯಾ
ಮಡಕೆಚೂರು ಬಳೆಯ ಚೂರು
ಮಣ್ಣು ಹೊಟ್ಟೆ ಸೇರಿಯಾ?
೨
ಪೃಥು ಮೇದಿನಿ ಪರ್ಶಿಯಾ
ಆರ್ಯಯಾಣ ಹಿಂದಿಯಾ
ದೇವ ಅಸುರ ಆರ್ಯನಾರ್ಯ
ನಿನ್ನ ನೀನೆ ಕೊಂದೆಯಾ?
ಮತ್ತೆ ಬಂಧು ಎಂದೆಯಾ?
೩
ಎಲೋ ಎಲೋ ಯಲೋ ಚೀನು
ಮೊಸಳೆಬಾಯ್ಗೆ ಸಿಕ್ಕ ಮೀನು
ಪ್ಯಾಸಿಫಿಕ್ಕಿನಾಚೆಗೆ
ಶಾಂತಿಯನ್ನು ಕಳೆದುಕೊಂಡು
ಎಸರು ಕುಡಿಯುವ ವೀಚಿಗೆ
ಎರಡು ಕಡೆಗೆ ಬೀಚಿಗೆ.
೪
ಕುರುಕ್ಷೇತ್ರದೆರಡು ಬಣ
ವಿಜ್ಞಾನದ ತಟಿತ್ ಕಣ.
ಮಾನವತೆಯ ಕೊರಳ ಸೂತ್ರ
ಹರಿಯಲು ಕಟಿಬದ್ಧರು
ಗೆದ್ದರೋ ಬಿದ್ದರೋ
ಸತ್ತು ಬದುಕಿ ಇದ್ದರೋ
೫
ಸಿವಿಲಿಝೇಶನ್ ವ್ಹಲ್ಚರು
ಕಲ್ಚರೋ ಸೆಪಲ್ಚರು
ನೆಲವೆಲ್ಲವು ಮಸಣ ಮಸಣ
ನೋಡಿದಲ್ಲಿ ಇಲ್ಲ ಹಸನ.

೬

ಅತಳಾಂತಿಕ ಸಾಗರ
ಕುದಿಯುತಿದೆ ಸಳಮಳಾ
ಅತಳ ವಿತಳ ತಳತಳಾ
ಪಾತಾಽಳ ರಸಾತಳಾ
ಇದ್ದವರೂ ಸತ್ತವರೂ
ಅತ್ತರಲ್ಲೋ ಗಳಗಳಾ!

೭

ಹುಗಿದುವೆಂದು ಬಗೆವರು
ನಾಳೆ ಅಗಿದು ತೆಗೆವರು
ಅದು ಸಂಸ್ಕೃತಿ ದರ್ಶನ
ಪಾಂಡಿತ್ಯ ಪ್ರದರ್ಶನ

೮

ಇದ್ದ ಜಗಳ ಸಾಲವೆಂದು
ಹಳೆದ ಹಡ್ಡಿ ತರುವರು
ಈ ಕುರುಂಬರು ಬರುವರು,
ಎಲೊ ದುಷ್ಕೃತಿ ಮಾನವಾ
ಹೊಗಳಿಕೊಳುವೆ ದಾನವಾ
ನಿಲಿಸು ಕ್ಷುದ್ರಗಾನವಾ.

೯

ಮರೆವಿನ ಮಾಗಡಲಿನಲ್ಲಿ
ತೇಲುತಿಹುದು ವೇದವು
ಆ ಅನಂತ ಭೇದವು
ನೆತ್ತಿಯಲ್ಲಿ ಎತ್ತಿಕೊಂಡು
ನಡುಗತಿಹ ವಿಶೇಷನು
ಅವನೆ ಜೀವಶೇಷನು.

ಭಾವ : Civilisation ಮತ್ತು Culture ಇವುಗಳ ಹೆಸರಿನಲ್ಲಿ ಸಂಶೋಧನೆ ನಡೆಸಿ ಸ್ವಪ್ರತಿಷ್ಠೆ ಬೆಳೆಸಿಕೊಳ್ಳುವ ಭೇದಬೌದ್ಧಿಕರನ್ನು ಕುರಿತು ಬರೆದ ಕವನ.

ಶಬ್ದಾರ್ಥ : ವೀಚಿ=ಅಲೆ, ತೆರೆ. ಹಡ್ಡಿ=ಅಗೆದು. ವಲ್ಚರ್ (Vulture)=ರಣಹದ್ದು. ಸೆಪಲ್ಚರ್ (Sepulchre)=ಶವಸಂಸ್ಕಾರ. ಕುರುಂಬರು=ದ್ವೇಷ ಪಡುವವರು.

ವಿಶೇಷ : ಬಾಬಿಲೋನ, ಅಸೀರಿಯಾ ಹಾಗೂ ಖಾಲ್ಡಿಯಾ ಈ ಮೂರು ಯುರೋಪಿನ ಪ್ರಾಚೀನ ಸಂಸ್ಕೃತಿಗಳು.

೧೯ ಸಮೃದ್ಧ

ತುಂಬಿ ತುಂಬೌ ಗಂಗೆ ಲೋಕಲೋಪವ ತುಂಬು
ಶಿಷ್ಟದುಷ್ಟರ ಕೊಡುಗೆಗಿರಲಿ ಬಾವುಲಿ ಕರ್ಣ
ಜಗದಂತರಾಳದಲಿ ನೀನೆ ಪೂರ್ಣಾತ್ ಪೂರ್ಣ
ಜೀವದಾನದ ದೀಕ್ಷೆ ತೊಟ್ಟಿಹುದು ನಿನ್ನಂಬು
ಹಳೆ ಕಹಳೆ ಆರ್ಭಟಿಸಲೇಕೆ? ಈ ಹೊಸ ಕೊಂಬು
ನಿನ್ನಿದಿರು ಬೇಕೆ? 'ಗಂಗಾ'ದೇವಿ ಎರಡೇ ವರ್ಣ
ಮಿಡಿದೊಡನೆ ಬಯಲು ಝುಮ್ ಎಂದು ಮಿಂಚಿತು ಸ್ವರ್ಣ.
ಮಗುವಾಗಿ ಆಡುವೆನು ಮುಗ್ಧ ಸಾಕ್ಷಿಯ ನಂಬು.

೨

ಅಹುದು ನೀನೆ 'ಸಮೃದ್ಧ' ಎಂಬೆ, ಅಬ್ಬಾ ಬಂಜೆ
ಬಯಲಲ್ಲಿ ತೂರುತಿದೆ ಉಸುಕು. ಕಣ್ಣೊಳು ಮಣ್ಣು-
ಅಂತರಿಕ್ಷಕ್ಕೆ ಸಾವಿರದ ಸಾವಿರ ಕಣ್ಣು
ನಿನ್ನ ನೆನವೇ ಬೆಳಕು ನನಗೆ ಮೂರೂ ಸಂಜೆ
ನಿನಗುಪಮೆಯೇ ತಾಯಿ ನೀನು ಕಳಿಯದ ಹಣ್ಣು.
ಸವೆಯದೀ ಸವಿ ಇದರ ಮುಂದೆ ಅಧರವು ನಂಜೆ.

ಭಾವ : ಜಗನ್ನಾಥ ಪಂಡಿತರ ಭಕ್ತಿ ವಾತ್ಸಲ್ಯಗೀತವಾದ ಗಂಗಾಲಹರಿಯ ಮೊದಲ ಚರಣ 'ಸಮೃದ್ಧಂ ಸೌಭಾಗ್ಯಂ ಸಕಲ ವಸುಧಾಯಾಃ ಕಿಮಪಿ ತತ್' ಎಂಬುದರ ಪದಪದವನ್ನು ಸ್ಮರಿಸಿ, ಗಂಗೆಯ ವಿಭೂತಿಮತ್ತ್ವವನ್ನು ಬಣ್ಣಿಸಿದೆ.

ಶಬ್ದಾರ್ಥ : ಬಾವುಲಿ-ಬಾವಲಿ=ಕರ್ಣಾಭರಣ. ಕಳಿಯದ=ತೆಗೆಯಲುಬಾರದ.



೨೦ ಸೌಭಾಗ್ಯ

೧
ಭಗವಂತ! ಭಗಭಗನೆ ಉರಿಯುತಿದೆ ಪಡುವಲವು
ಶಾಂತಿಯನು ಕರೆಯುವದು ಹೇಗೊ ಹುಸಿ ಮುಸಿ ನಕ್ಕು
ಗೋಲಭೂಮಿಯ ನೆಲಕೆ ಎಲ್ಲೆ ಎಲ್ಲಿದೆ ದಿಕ್ಕು ?
ಎರಡು ಕಡೆಗೂ ಪೊತ್ತ ಉರಿ ಪುರಾಣಚ್ಛಲವು
೨
ಸಾರ್ವಭೌಮಿಕ ಕಾಕದೃಷ್ಟಿ ಶುಕ್ರನ ಒಲವು
ಎದೆಗೆ ಎದೆಗೊಟ್ಟು ಬದುಕುವಗೆ ಬಾಳುವ ಹಕ್ಕು,
ನಿನ್ನ ವಿಜ್ಞಾನ ಪಾನವ ಮಾಡಿ ಉಳಿದರೆ ನೆಕ್ಕು
ಜಗವು ಹಾಳಾದರೂ ನಿನಗೆ ಬೇಕಿದೆ ಗೆಲವು.
೩
ಸೌಭಾಗ್ಯಪದಕೆ ನೆಲೆ ? ಅದಕು ಕೋಶಕು ಗಂಟು
ಭೂವಸುಂಧರೆ! ನೀನು ಅಮಲ ಸೌಭಾಗ್ಯನಿಧಿ
ಕಾಯಲಿಟ್ಟದ್ದ ಕೈ ಕೊಲ್ಲಲಿರೆ. ಯಾವ ವಿಧಿ ?
ಕಂಡಿಲ್ಲ ಕೇಳಿಲ್ಲ ಭೀತಿ ಪ್ರೀತಿಯ ನಂಟು
೪
ಜಗದ ಸೌಭಾಗ್ಯಕ್ಕೆ ನೀನೊಬ್ಬಳೇ ಸಾಕು.
ಉತ್ತಮರ ಬೆಳೆ ಬರಲು ಬೀಜ-ಮನು ಬರಬೇಕು.

ಭಾವ : ಗಂಗೆಯ ಎರಡನೆಯ ವಿಭೂತಿಮತ್ವದ ವರ್ಣನೆ.

ಶಬ್ದಾರ್ಥ : ಪೊತ್ತ=ಹೊತ್ತಿಕೊಂಡಿರುವ.

೨೧ 'ಸಕಲ'

೧
ಎಷ್ಟು ಶಕಲವ ಕೂಡಿಸಿದರೆ ಇಡಿ ಒಂದಾದೀತು?
ಕಂಸಕಂಸಾತ್ಮರಿಗೆ ಕೃತ್ಸ್ನನಾಮವಪಥ್ಯ;
ಆದರೂ ಇಂದಿಗೂ ಜಗವಖಂಡಿತ ಸತ್ಯ
ಕಿಡಿಗೇಡಿ ಕಿಡಿ ಬಂತು ತಿಕ್ಕ ಮಾತಿಗೆ ಮಾತು.

೨
ವಿಕಲ ಬುದ್ಧಿಗೆ ಸಕಲ ಎಟುಕದಿದೆ, ಆದು ಸೋತು
ಕಟುಕ ಬುದ್ಧಿಗೆ ಶರಣು ಮಾಡಿ ಕುಳಿತಿದೆ ಸದ್ಯ
ವಿಜ್ಞಾನಿಗಳ 'ಅಕಲು' ಹೃದ್ಯವಿದ್ದರು ವಧ್ಯ
ಸೌರಪಥದಲಿ ಧೂಮವೆದ್ದು, ಮೂಡಿದೆ ಕೇತು.

೩
ಭೂ ವ್ಯೋಮ ಪಾತಾಳ ಒಂದಾಗಿ ಹೆಣೆದಿರುವ
ಓ ಗಂಗೆ, ರಸಲಹರಿ ಸಹಜ ಸಹಜ ಅಭಂಗಿ
ಈ ವಿಶ್ವಮಾನವರ ದೃಷ್ಟಿಯೇ ಏಕಾಂಗಿ
ಕಲಿಸು ನಿನ್ನಾ ಕಲೆಯ ವಿಶ್ವಂಭರೇ ಗುರುವೆ!

೪
ಭಣಿತಿ ಭಂಗಿಗಳಲ್ಲಿ ಮುಗಿದು ಕುಂಠಿತ ಮತಿಯು
ಮತ್ತೆ ತಲೆಯೆತ್ತಿ ನಿಂತಿಹುದು ದಿತಿಸಂತತಿಯು.

ಭಾವ : ಗಂಗೆಯ ವಿಭೂತಿಮತ್ವದ ಇನ್ನೊಂದು ದರ್ಶನ.

ಶಬ್ದಾರ್ಥ : ಶಕಲ=ತುಂಡು. ವಿಕಲ=ಅಪೂರ್ಣ. ಅಕಲು-ಅಕ್ಕಲು=ಬುದ್ಧಿ, ವಿವೇಕ. ಕೃತ್ಸ್ನ=ಪೂರ್ಣ. ಸೌರಪಥ=ಸೂರ್ಯಮಾರ್ಗ. ಭಣಿತಿ-ಭಣಿತೆ=ಸಂಭಾಷಣೆ, ಮಾತುಕತೆ. ಭಂಗಿ=ರೀತಿ, ರೂಪ. ದಿತಿ=ಒಬ್ಬ ರಕ್ಕಸಿ.

೨೨ ವಸುಧಾ

೧

ನೀ ವಸುಂಧರೆ ನಿನ್ನ ಪ್ರಿಯನೆ ಆ ವಸುದೇವ
ಈಶ ವಸತಿಗೆ ಇಳಿದುಬಂದ ನಿನ್ನುದರದಲಿ
ವಾಸುದೇವನು ಆಗೆ. ಮುತ್ತುದುರಿ ಅಧರದಲಿ
ಸರ್ವಸಂತಾಪಹರವಾಯ್ತು ಗಂಗಾ-ಭಾವ.

೨

ನೆಲಕೆ ನೀರೇ ಗತಿಯು; ನೆಲ ನೀರಿಗಾಧಾರ.
ಮಣ್ಣು ನೆಲದಲ್ಲಿ ಭವವು ಬರಲು ಮಾಸುವದೆ ಗುಣ?
ನೀರೆ ಮಡಿ; ಅದರಲ್ಲಿ ದೋಷ ಕಂಡವ ಪಿಸುಣ
ಇಬ್ಬರೀ ಜತೆ ಸಖ್ಯ ವತ್ಸಲತೆಯಾ ಹಾರ.

೩

ನೆಲ ಒಂದು ಜಲ ಒಂದು, ಬೆಳಕು ಗಾಳಿಯು ಒಂದು
ಬಾನೊಂದು ತಾನೊಂದು, ಮಡಕೆ ಹುಟ್ಟಾ ಒಡಕು
ಒಡಲೊಡವೆಗಳ ತೊಡಕು ಜಗಕೆ ಮೂಡಿದ ಕೆಡಕು
ನಿನ್ನಂತೆ ಪರಮಾತ್ಮ ಕಂಡು ಘನತೆಯ ಹೊಂದು-

೪

ನೀರು ನೆಲಗಳ ಕರುಳ ಬಳ್ಳಿ ಹರಿದೀತೆಂದು
ಈ ಉಸಿರು ಕಂಡೀತು ಒಂದೆ ಬೆಳಕನ್ನೆಂದು.

ಭಾವ : ಗಂಗೆಯ ವಿಭೂತಿಮತ್ವದ ಸಾಕನೆಯ ದರ್ಶನ.

ಶಬ್ದಾರ್ಥ : ಪಿಸುಣ=ಪಿಶುನ=ಚಾಡಿ, ದೂರು, ನಿಂದೆ. ಹರಿದೀತು=ಮುಂದೆ ಸಾಗೀತು.

೨೩ 'ಕಿಮಪಿ ತತ್'

೧
ಅಹುದು ಏನೆಂದು ವರ್ಣಿಸಲಿ ಆ ಮಹಿಮೆಯನು
ಅನುಭವಿಸಿದಾ ಕವಿಯೆ 'ಕಿಮಪಿ ತತ್' ಎಂದಾಗ್ಗೆ
ಜಿಹ್ವೆ ಲಾಲಾಲೋಲ, ಕಂಪ ಜೊಂಪಿಸಿತು ತನು
ನಿನಗು ತಿಳಿದೀತು ಆ ಅನುಭವವು ಬಂದಾಗ್ಗೆ.
೨
ಶಿವನುತ್ತಮಾಂಗದಲಿ ಶಶಿಯ ಬದಿ ನಿಂದಾಗ್ಗೆ
ಶುದ್ಧಕೂ ಅದು ಶುದ್ಧದುದ್ದಕೂ ಪರಿಶುದ್ಧ
ನೀಲವನು ಹರಿದು ನೆಲವನು ತೆರೆದ ಈ ಬುದ್ಬ
ಸಿರಿಗಂಗೆಯಲ್ಲ ಬರಿ ನೀರು ಸೋರುವ ಬುಗ್ಗೆ.
೩
ನೆನೆನೆನೆಸಿದಂತೆ ಈ ಧ್ಯಾನ ಒಳಗೇ ಮುಳುಗಿ
ಅರಿವಿನ ರಸಾತಳವ ಸೋಕಿ ಬಂದಿತು ಕರಣ.
ಉದಯಾಸ್ತವಿಲ್ಲದಿರೆ ಮೂರು ಲೋಕದ ಹರಣ.
ಹಗಲು ಚುಕ್ಕೆಯ ಹಾಗೆ ಅಸಮಂತಾತ್ ಬೆಳಗಿ.
೪
ಪ್ರಿಯನಿದಿರು ಬಂದಾಗ ಮೂಕ ಮಧುರವು ಭಕ್ತಿ
ಈ ಬೆಳಕ ಬಣ್ಣಿಸಲು ಯಾವ ವರ್ಣಕೆ ಶಕ್ತಿ?

ಭಾವ : ಗಂಗೆಯ ಐದನೆಯ ವಿಭೂತಿಮತ್ವದ ವರ್ಣನೆ.

ಶಬ್ದಾರ್ಥ : ಅಸಮಂತಾತ್=ಸುತ್ತೂ ಎಲ್ಲ ಕಡೆಗೆ. ವರ್ಣ=ಅಕ್ಷರ.

೨೪ ಸ್ಥಿರೆ-ತಿರೆ


ಇವಳು ಸ್ಥಿರೆ, ಇವಳೆ ತಿರೆ, ಸಂಚಾರದಲಿ ಸ್ಥಾಯಿ,
ಬೆಳೆಯುತಿರೆ, ರಸ ಒಸರಿ ಬರೆ, ಸೃಷ್ಟಿ ಹಿಗ್ಗುತಿದೆ.
ಅಗೊ ಅಲ್ಲಿ ಆ ಧ್ರುವನೆ ತಾ ಪ್ರದಕ್ಷಿಣವಾಗಿ
ಜಗದ ನಾರಾಯಣಗೆ ನಮಿಸುವನು ಭಕ್ತಿಯಲಿ.
ಅನಿಮಿಷರ ಗಣ ಸುತ್ತುಗಟ್ಟಿ ಕಾಯುತ್ತಲಿವೆ..
ಗ್ರಹಗತಿಯು ಯುಗಯುಗಗಳಲ್ಲಿ ವಿಶ್ರಾಂತಿ ದೊರೆ-
ಯದೆ ತಿರುಗುತಿದೆ, ತನ್ನ ಸಂವಾದ ಸೌಂದರ್ಯ
ಧರ್ಮಕ್ಕೆ ಸೋಲುತಿದೆ, ಸತ್ಯವೇ ತೇಲುತಿದೆ.

೨

ಧರ್ಮ ಸೋತಿತು ! ಮುಳುಮುಳುಂಗಿದ ಹಾಗೆ ತೋರಿತ್ತು
ಆ ಸತ್ಯ. ನಾವೆ ಮುಳುಗಿದ ಮೇಲೆ ಹೆಣಗಳೇ
ತೇಲಿದರು, ಯಾವನೊಬ್ಬನು ಈಸಿ ಜೈಸಿದರೆ
ಅದು ಹಬ್ಬ, ಅವನೆ ಮುಂದಿನ ಮನುವು, ಓ ಜನವೆ
ದಿನವುದಿಸಿದಂತೆ ಮರಳೀತು ಸುಚಿರಂತನವು.

ಭಾವ : 'ಭೂ' ಧ್ಯಾನ ಜನಿತ ಭಾವ.

ಶಬ್ದಾರ್ಥ : ಅನಿಮಿಷರು=ದೇವತೆಗಳು. ಕಣ್ಣುರೆಪ್ಪೆ ಬಡೆಯದವರು.



೨೫ ಮಧುವಾತಾ ಋತಾಯತೇ !

ಒಂದು

೧

ಬರಿವಿನಲ್ಲರಿವು ಕಣ್ತೆರೆವುತಿರೆ
ಮೈದೋರಿತ್ತು ಇರವು, ಹಿಗ್ಗಿನ ಹರವು.
ಬರಡು ಹಯನಾಗಿ-ಕರುವ ಪಡೆದಿತು ಆವು
ಭೌತದ ಹರಳು ಹರಳು ವಿಶ್ವವಲ್ಲಿಯ ಹೂವು.
ಆ ಆಮೋದ ಆ ಎಂದು ಮೂಸುವರು ನಾವೂ ನೀವು.

೨

ಓ ಯಕ್ಷಿ, ದೇವತಾನಾಟ್ಯಮಂದಿರದ ಅನಿಮಿಷ ಸಾಕ್ಷಿ,
ಮೌನಿ ಶಿವನೊಡನೆ ಬಾ ರಸವ ರುಚಿಸುವ ಪಕ್ಷಿ!
ಹಿಡಿಸದನುಭಾವಕ್ಕೆ ಬೆರಗು ಸೂಸಿತು ಆಕ್ಷಿ.

೩

ಅದ್ಭುತದ ಉದ್ಭವದ ಭಾವ ಭಾಷಾಂತರಿಸಿ,
ಹೊಸ ಒಸಗೆಗನುವಾಗಿ ಒಗ್ಗಿ ವೇಷಾಂತರಿಸಿ,
ತಾ ಶೈಲಿ ಎಂದೊರೆವೆ ಕರ್ಮನಟಿಯನುಕರಿಸಿ ;
ಅವಳ ಪದಹತಿಗೆ ಎದ್ದಾವು ಛಂದದ ಬಳ್ಳಿ .

೪

ಭಾವಸೋಪಾನವನ್ನೇರಿ ಬಾ ಪ್ರಾಣಸಖಿ,
ದರದಲತ್ ಅರವಿಂದ-ಸ್ಮೇರಮುಖಿ,
ಖಗವು ಸುಖಿ, ಮೃಗವು ಸುಖಿ, ಜಗವು ಸುಖಿ, ನಗವು ಸುಖಿ.

೫

ನಕ್ಷತ್ರ ಕಣ್ ಚಿವುಟುತಿವೆ, ಗ್ರಹಗೋಲ ಕುಣಿವುತಿವೆ.
ಅಗೊ ಕಂಪಿಸಿತು ಕಡಲು ಧ್ರುವಪದದ ಶ್ರುತಿಯನು ಹಿಡಿದು
ವಸಂತಾದಿಯಾಗಿ ಋತುಮಾನ ಬರುತಿವೆ ನಡೆದು,
ಅಲ್ಲಲ್ಲಿ ವಿಲಾಸ ಲಾಸ್ಯದಿ ತಡೆದು.

೬
ಶ್ರುತಿಗಗೋಚರ ರಾಗ ತಾನಪೂರ್ವಕೆ ಉದಿಸಿ
ಗುಮ್ ಗುಮ್ ಗುಮ್, ಓಹ್ ಘೂರ್ಮಿಸುತ್ತಿದೆ ಮದಿಸಿ.
ಮಧುರಾಣಿ! ಸಂಭ್ರಮದಿ ಮಕ್ಷಿಕಾಮಾಲೆ
ಅಕ್ಷರ ಮಾಲೆಯಂತೆ ವರ್ಣವರ್ಣದಿ ಗುಣಿಸಿ ಕುಣಿಸಿ,
ಯಾವ ವೃಕ್ಷಕೆ ನಡೆದ ಎಲ್ಲಿಹುದು ಆ ಹುಟ್ಟು?
'ಗುಟ್ಟು! ಗುಟ್ಟು!' ಒಟಗುಟ್ಟು, ನಾನಿರೆನು ನಿನ್ನನು ಬಿಟ್ಟು
-ಮಧುವಾತಾ ಋತಾಯತೇ ಮಧುಕ್ಷರಂತಿ ಸಿಂಧವಃ-

[illegible]
೧
ಏನಲ್ಲಿ ಝುಂಝಾವಾತ, ಓ ಏನೋ ಅಧಃಪಾತ!
ಎಂಥದೋ ಉತ್ಪಾತ! ಸೈಂಧವರ ಲಾವಣ್ಯ
ಮಣ್ಣಾಣಸು, ಮಣ್ಣುಗೂಡಿತು ಕಣಸು.
೨
ಹೈಕಿ ನೈ! ಹೈ ಕಿ ನೈ! ನಹಿ! ನಹಿ! ಹಯ್ ಹಯ್-
ಅಲ್ಲದುದನಹುದೆಂಬ ಅಜ್ಞಾನಿಯೊಡನಾಟ
ಕಲ್ಲು ಹಾಯ್ದಂತೆ-'ಸೈ' ಎಂದಿತಾಗ.
೩
ಏಕಾಕ್ಷ ಒಂಟೆಯ ಸಂಘ, ವಿಶ್ವಕೋಳಿಯ ಕೇಂದ್ರ-
ದೀಶ್ವರನು ಪ್ಲುತವನನುಕರಿಸಿ ಕುಕ್ಕುಕ್ಕೂಽಽ ಎಂದ.
ಸರ್ವೋದಯಕೆ ಇದುವೇ ಛಂದ.
೪
ಬಂತು ಸೇಂಟಿನ ಗಂಧ, ಚುಯ್ ಎಂದ ದೋಸೆಯ ಅಂದ.
ಏನು ಕೋಲಾಹಲವು? ಓ, ವರ್ತಮಾನದ ಸುದ್ದಿ!
ಎಲ್ಲೊ ಗಲಾಟೆ, ಖೂನು, ದರೋಡೆ,
೫
ಇತ್ರಬಂಧದ ಒಗಟ, ರಾಶಿಭವಿಷ್ಯ, ಲೂಟಿ, ಲಾಟರಿ,
ಪಾನನಿರ್ಬಂಧ, ಬಂಧೀರ ಕೈ ಬಿಸಿಯಾಟ.

೬
ಚುನಾವಣೆ, ಅಧ್ಯಕ್ಷ ಇಲಿ-ಬಲೀ-ಸಾಹೇಬ
ಬೂಟು ಹ್ಯಾಟಿನ ಸೂಟು ಒರಸಿಲ್ಲ; ಅದೆ ಥೇಟು;
ಹಾಟೇಲು, ಹಾಡಿದ ಹಾಡು, ಬಾನುಲಿಯ ಕಿರಿಚಾಟ,
ಸಿನಿಮಾ ಬ್ಯಾಂಡು, ಹಿಂದೆ ಹುಡುಗರ ದಂಡು,
ಸೇದಬೇಡಿ,-ಸೇದಿದರೆ ಬೇಂದ್ರೆ ಬೀಡಿ-
Pay your fare, Do not spit.
೭
ಕಿರ್ ಎಂದು ಖಡ್ ಎಂದು ಥಡ್ ಎಂದು
ತಪ್ಪಿತು.-ಎಕ್ಸಿಡೆಂಟು-ತಪ್ಪಿದ್ದುದೂ ಎಕ್ಸಿಡೆಂಟು.
೮
ಯಾರೊ ಯಾರನೊ ನೋಡುವಾಗ ಮೂಡಿತು ನಂಟು
ಹಾದಿಯಲ್ಲಿ ಬಿದ್ದಿತು ಗಂಟು-ಹೊತ್ತರಗೊ ಗಂಟು
ಬಡಿಯಬೇಡೀ ಪಂಟು, ಬೇಡಯ್ಯ ಕಂಪ್ಲೇಂಟು
೯
ಹೋದದ್ದೆ ಸಾಲದೇ? ಸಾಲ ಹುಟ್ಟದು ಈಗ
ಸಾವುಕಾರನ ಕೂಡ ಸಾಲಗಾರನು ಸತ್ತ;
ಅದಕೆ ಕಮ್ಯುನಿಸ್ಟ್ ಅತ್ತ! ನೋಡಿತ್ತ;
೧೦
ಅಬ್ಬಬ್ಬ ಏನು ಕ್ಯೂಽಽಽ ಒಬ್ಬರಾ ಮೇಲೊಬ್ಬ
ಇದುವೆ ಹುಚ್ಚರ ಹಬ್ಬ! ಎಚ್ಚರ! ಕ್ಷಮಿಸಿ
ಅಯ್ಯಾ ಸ್ವಾಮಿ ನಿಮ್ಮಂತೆ ನಾನೊಬ್ಬ
೧೧
ನಡೆ ಮುಂದೆ 'ಶೋ' ಮುಗಿದೀತು, ಕೇಳು ಗಾಡಿಯಾ ಕೂಗು.
ಆಯ್ತು ನಿನ್ನಿನ ತೇದಿ, ನಾಳಿನ ಹಾದಿ ನಿನ್ನೆ ತಾರೀಖು
೧೨
ಹಾದೀಽ ಗೀದೀಽ ಓ ಅಪ್ಪಾ ತಟ್ಟಾಗು...
ಇಲ್ಲೊ ಮಲಗು, ಇದ್ದವಗೆ ಎಚ್ಚರ ಚಿಂತೆ-
ಮನಚಿತ್ರಪಟವು ಮಸಣದ ಪಾಟಿ.
೧೩
ಒಪಿ ಮತ್ತೆ ಹಿಂದಿನ ಧಾಟಿ; ಗಿರಣಿಯ ಬಂಬು ಕರೆಯುವದು
ಏಳು! ಆಯಿತು 'ಏಳು',
'ಲಟೀಪಟೀ ಸಂಸಾರ'-ಲಾವಣಿ ಹೇಳು-

೧೪
Interval ಓ ಏನು ಕಲ್ಲೋ!
ಕಲ್ಲುಕೋಳಿಯು ಕೂಗುವನಕ ಕಲ್ಕಿಯು ಬರನು.
ಖೇಲ್ ಖಲಾಸ್. ಚಪ್ಪಾಳೆ ಬಡಿಯಿರಿ ಇನ್ನು
ಸಭ್ಯತೆಗೆ ಹತ್ತಿದೆ ತೊನ್ನು, ಮಣ್ಣು-ಹೆಣ್ಣೂ-ಹೊನ್ನು,
ಥ್ರೀ ಚಿಯರ್ಸ್ ಫಾರ್ ಪೀಸ್ ಆ್ಯಂಡ್ ಫ್ರೀಡಮ್ ಅನ್ನು
ಇಲ್ಲವೋ ಕಾಸಿರು ಬೆನ್ನು.

ಮೂರು :


೧
ಅನಿರುದ್ಧ ಶಾಂತಿ ತಳಹದಿಯು ಅದುವೆ ಸಾಕ್ಷಿತ್ವ ಪ್ರಾಣಲಿಂಗ.
ಪ್ರದ್ಯುಮ್ನ ಕೃತಿಯು ಮೂಡೀತು ಮುಂದೆ ನಿಃಸಂಗ ಶರಣರಂಗ,
ಸಂಕರ್ಷಣಾಖ್ಯ ಜಯದೇವ ತರುವ ಮಹಲಿಂಗ ಭಾಗಭೋಗಿ,
ಶ್ರೀ ವಾಸುದೇವ ಮಾಯಾವಿ ಬರಲು ಲೀಲಾವತಾರಿಯಾಗಿ.
೨
ಬಿಡಿಗಾಳು ಬದ್ಧ; ಇಡಿ ಹಣ್ಣು ಸಿದ್ಧ; ಬಯಲಲ್ಲೆ ಇರುವ ಬುದ್ಧ
ಏಕಾಕ್ಷ-ಪಕ್ಷ, ಕೌಟಲ್ಯದಕ್ಷ ನಡೆಸಿಹರು ಭೂಮಿಯುದ್ಧ
ಹಳೆಯವನು ಬಿದ್ದ ಹೊಸಹೊಸಬ ಗೆದ್ದ, ಕೋಡಂಗಿ ನಡುವೆ ಎದ್ದ,
ನವೋನವದ ಬಯಲಾಟ ಭಾರಿ ತಾಂಡವವೆ ರಾಷ್ಟ್ರದುದ್ಧ.
೩
ಫ್ರಾಡು, ಮಾರ್ಕ್ಸು, ಆಡ್ಲರರು, ಜುಂಗು, ಮೇಲೀಗ ಐನಸ್ಟೀನು,
'ಕ್ಯಾಪಿಟಲ್ಲು' ಏನು? ಆ್ಯಟಮ್ಮು ಬಾಂಬು, ತಲೆತುಂಬ ತಿಂಡಿ, ಹೇನು!
ಬಾಯಲ್ಲಿ ಶಾಂತಿ, ತಲೆಯಲ್ಲಿ ಭ್ರಾಂತಿ, ಸಂಕ್ರಾಂತಿ ಎದೆಯ ತುಂಬ,
ಚಂಡಮುಂಡರಾ ಹಳೆಯ ದಂಡು ಅಭಿನವ ನಿಕುಂಭ ಕುಂಭ.
೪
ಸುಂದೋಪಸುಂದರಾಖ್ಯಾನ ಮತ್ತೆ ಜನಜಾತ್ರೆ ಯಕ್ಷಗಾನ
ನವಭಾಗವತರೆ ಬಲ್ಲವರು ಅದರ ಆ ವಿಷಮ ತಾನಮಾನ,
ಹೊಡೆ ಗಾಡಿ ಮುಂದೆ ಫಾಲ್ಗುನವು ಹಿಂದೆ, ಆ ಮುಂದೆ ಚೈತ್ರದುದಯ
ನೀ ನಗುವೆ ನನಗೆ, ನಾ ಬಿಗಿವೆ ನಿನಗೆ ಇಬ್ಬರಿಗು ಸುಪ್ತ ಹೃದಯ

೫

ಕ್ಷಣವೊಂದು ಮೌನ ಇಹುದೆಂದು ನಿನಗೆ ತಿಳಿದೀತು ಎಂದು ಬಂಧು
ತೆರೆಮರೆಯ ಕೆಳಗೆ, ಇಲ್ಲದರ ಒಳಗೆ, ಗಾಂಭೀರ್ಯ ಭಾವಸಿಂಧು
ಇದು ಯಾವ ಥಾಟ ಕಿರಿಚಾಟ ವಾಟ ಪೈಶಾಚ್ಯನೃತ್ಯಬಂಧ.
ಹುಳಿಜೊಟ್ಟ ಮದ್ಯ, ನಿನಗಹುದೆ ಹೃದ್ಯ? - ಗಂಧಕದ ಸುಡುವ ಗಂಧ?

ಭಾವ : ನವಯುಗವು ಅನಿವಾರ್ಯವಾಗಿ ಬಂದಂತೆ ತೋರಿದರೂ ಒಳಗೆ ಸಿದ್ಧತೆ ಇರದೆ ಹೊರಗೆ ಪಾತ್ರ ಬರಲಾರದು. ಒಳಗೆ ಬರಿಯ ಕ್ಷೋಭವಿದ್ದರೆ ಹೊರಗೂ ಅದೇ ಫಲ.

ಶಬ್ದಾರ್ಥ : ಬರಿವಿನಲ್ಲಿ=ಪಕ್ಕದಲ್ಲಿ. ಆವು=ಆಕಳು. ದರದಲತ್=ಕೆಸರು. ಸ್ಮೇರ-ಅರಳಿದ. ಘೂರ್ಮಿಸುತ್ತಿದೆ=ಗರ್ಜಿಸುತ್ತಿದೆ. ಮಕ್ಷಿಕಾಮಾಲೆ=ಜೇನ್ನೊಣಗಳ ಸಾಲು. ಮಣ್ಣಾಣಸು-ಮಣ್ಣಿನ ಹಾಗೆ. ತೇದಿ=ತಾರೀಖು, ದಿನಾಂಕ. ತಟ್ಪಾಗು=ದಾಟು, ಪಾರಾಗು.



೨೬ ಓ ಚಾರ್ವಾಕು !

೧

ಚಾರ್ವಾಕು! ನೀನು, ಕಾರ್ಮಿಕರ ಗಂಡ, ಧಾರ್ಮಿಕರ ಮಿಂಡ, ಅಬ್ಬಾ!
ಕಳ್ಳಸಂತೆ ಸಿರಿವಂತ ಸಭ್ಯರಾ ನರ್ಮಸಚಿವನೊಬ್ಬಾ
ಅಪ್ಪ ಶಿಕ್ಷಿತನು, ಅವ್ವ ಧೂರ್ತೆ, ಅಂಥವರ ಮಗನು ನೀನು
ಕ್ಷಣಿಕ ಬಾಳು ತಾತ್ಪೂರ್ತೆ ತರ್ಕ ! ಆ ನಿಜದ ಗೊಡವೆ ಏನು ?

೨

ದಂಡ ತಪ್ಪಿಸುತ ಪಿಂಡ ಗಳಿಸಿ ಉಂಡಾಡಿ ಭಟ್ಟನಾಗಿ
ಯಾರ ಮಂತ್ರಿಯೋ, ಯಾರ ತಂತ್ರಿಯೋ ಶಿಷ್ಟಧಿಟ್ಟನಾಗಿ,
ಕೀರ್ತಿಯಿರಲಿ ಅಪಕೀರ್ತಿಯಿರಲಿ ದಿನ ವರ್ತಮಾನದಲ್ಲಿ
ದಪ್ಪ ಅಕ್ಷರದ ಪದವಿ ಪಡೆದು ಇಹೆ ಮೇಲುಸಾಲಿನಲ್ಲಿ.

೩

ಹದಿನೆಂಟು ಜಾತಿ ಹದಿನೆಂಟು ನೀತಿ ಹದಿನೆಂಟು ಕಾರಭಾರಾ
ಅತಾರಾ ಕಚೇರಿ ಅಠರಾ ವಿಚಾರಿ ತೀಂತೇರಾ ನೌ ಅಠರಾ
ಚೌರ್‍ಯಾಂಶಿ ಲಕ್ಷ ಯೋನಿಯಲಿ ತಿರುಗಿ ಆಸನವ ಕಲಿತೆ ನೀನು.
ಚೌಸಷ್ಟಿ ಕಲೆಯ ತಿರಸಷ್ಟಿ ನಿನಗೆ ನಾ ಬೇರೆ ಹೇಳಲೇನು?

೪

ಛಪ್ಪನ್ನ ದೇಶ ಛಪ್ಪನ್ನ ಭಾಷೆ ಏನೇನೊ ಗಂಟು ಹಾಕಿ,
ಹಿಂದಿಯನು ಮುಂದೆ ಗುರಿಮಾಡಿ ಹಿಡಿದೆ ಬೆದರಿಕೆಯ ಆ ತುಪಾಕಿ;
ಬ್ರಹ್ಮಾಂಡವಾದಿ ಗೃಹಭೇದಿ ನೀನು ಕಾಂಬುದಕೆ ಅತಿ ಉದಾರ;
ಬಲೆಯೊ ಉರಲೊ ಬೀಸಿರುವೆ ಸುತ್ತ ನವನೀತಿ ಸೂತ್ರಧಾರ.

ಭಾವ : ಬಾಯ್ಬಡಕ ರಾಜಕೀಯ ವೇದಾಂತಿಗಳಿಗೆ ಕೊರತೆ ಇಲ್ಲದ ಕಾಲವಿದು, ಚಾರ್ವಾಕ ಅದರ ಮೂಲಪುರುಷ.

ಶಬ್ದಾರ್ಥ : ತಾತ್ಪೂರ್ತೆ=ಕಾಲಕ್ಕೆ ತಕ್ಕ. ತೀಂತೇರಾ ನೌ ಅಠರಾ=೩, ೧೩, ೯, ೧೮; ಚೌಸಷ್ಟಿ=೬೪. ತಿರಸಷ್ಟಿ=ಹಟವಾದಿ, ಮೂರ್ಖ. ಚಾರ್ವಾಕ=ನಾಸ್ತಿಕ, ಸಕಲಸುಖೋಪಭೋಗಿ.

೨೭ ಕರಡಿ-ಕುಣಿತ

೧
ಕಬ್ಬಿಣ ಕೈಕಡಗ, ಕುಣಿಕೋಲು, ಕೂದಲು
ಕಂಬಳಿ ಹೊದ್ದಾಂವಾ ಬಂದಾನ-
ಗುಣುಗುಣುಗುಟ್ಟುತ ಕಡಗವ ಕುಟ್ಟುತ
ಕರಡಿಯನಾಡಿಸುತ ನಿಂದಾನ!

೨
ಯಾವ ಕಾಡಡವಿಯಲಿ ಜೇನುಂಡು ಬೆಳೆದಿದ್ದ
ಜಾಂಬುವಂತನ ಹಿಡಿದು ತಂದಾನ?
'ಧಣಿಯರ ಮನಿಮುಂದ ಕಾವಲು ಮಾಡಣ್ಣ
ಧಣಿ ದಾನ ಕೊಡುವನು' ಅಂದಾನ.

೩
ತ್ರೇತಾಯುಗ ರಾಮನ್ನ ದ್ವಾಪರದ ಕೃಷ್ಣನ್ನ
ಕಲಿಯುಗದ ಕಲ್ಕೀನ ಕಂಡಾನ
ಜಾಂಬು ನದಿ ದಂಡೆಯ ಜಂಬುನೀರಲ ಹಣ್ಣು
ಕೃತಯುಗದ ಕೊನೆಗೀಂವಾ ಉಂಡಾನ.

೪
ಬಂದಾರೆ ಬರ್‍ರೆವ್ವ, ಕಂದನ್ನ ತರ್‍ರೆವ್ವ
ಅಂಜೇಕಿ ಗಿಂಜೇಕಿ ಕೊಂದಾನ.
ರೋಮ ರೋಮಗಳಲ್ಲಿ ಭೀಮರಕ್ಷಿಯ ಬಲ
ಕೊರಳಾಗ ಕಟ್ಟಿರಿ ಒಂದಾನ.

೫
'ಕುಣಿಯಲಿ ಮಗನೆ ನೀ' ಅನ್ನೊದೊಂದೇ ತಡ
ತನ್ನಽನ ತಾನಽನ ತಂದಾಽನ
ಮುದ್ದುಕೂಸಿನ ಹಾಂಗ ಮುಸುಮುಸು ಮಾಡುತ್ತ
ಕುಣಿದಾನ ಕುಣಿತಽವ ಛಂದಾನ.

೬
ಹೊಟ್ಟೆಗಿಲ್ಲದವರ ಹೊಟ್ಟೆಗೆ ಹಾಕಲು
ನಡೆದಾನ ಪಡೆದಾನ ಬಂಧಾಽನ
'ಕುಣಿಸುವವರ ಹೊಟ್ಟೆ ತಣ್ಣಗಾಗಲಿ' ಎಂದು
ಮುಗಿಲಿಗೆ ಕೈಮುಗಿದು ನಿಂದಾನ.

೭
ಮನಬಲ್ಲ ಮಾನವ ಕುಣಿದಾನ ಕುಣಿಸ್ಯಾನ
ಪ್ರಾಣದ ಈ ಪ್ರಾಣಿಹಿಂದಾಽನ
ಕರಡಿಯ ಹೆಸರೀಲೆ ಚರಿತಾರ್ಥ ನಡಿಸ್ಯಾನ
ಪರಮಾರ್ಥ ಎಂಬಂತೆ ಬಂದಾನ.
೮
ಈ ಮನಷಾ ಎಂದಿಂದೊ ಕವಲೆತ್ತು ಕೋಡಗ
ತನಗಾಗಿ ಕುಣಿಸುತ್ತ ನಡದಾನ
ಕರಡೀ ಕುಣಿತಕ್ಕಿಂತ ನರರ ಬುದ್ಧಿಯ ಕುಣಿತ
ಮಿಗಿಲಹುದು ಕವಿ ಕಂಡು ನುಡಿದಾನ.

ಭಾವ : ದುಷ್ಟ ಜೀವಗಳು ಮೂಢ ಮುಗ್ಧ ಜೀವಗಳನ್ನು ಕುಣಿಸಿ ಉಪಜೀವನ ಮಾಡುತ್ತವೆ. ಸುಳ್ಳು ಸಾತ್ವಿಕತೆಯನ್ನು ಮೆರೆಸುತ್ತವೆ. ಒಂದು ಕಾರುಣ್ಯಗೀತ.

ವಿಶೇಷ : ಅಪಘಾತ ಹೊಂದಿದ ಒಂದು ಜೀವ ಕರಡಿಯ ರೂಪದಲ್ಲಿ ಬೇಂದ್ರೆಯವರೊಂದಿಗೆ ಪ್ರವಾಸಮಾಡಿದ ಅತಿಮಾನುಷ ಘಟನೆ ಈ ಕವನಕ್ಕೆ ಪ್ರೇರಣೆ.



೨೮ ಚೆನ್ನಕೇಶವನ ಸಾಕ್ಷಿಯಲ್ಲಿ

೧

ಒಂದೆ ಸತ್ವಕ್ಕೆ ಹಲವು ಹೆಸರು ಬಲ್ಲವರ ಬಾಯಿಯಿಂದ
ಒಬ್ಬ ದೇವ ಹಲವಾರು ನಾಮ ಎಂದೊಬ್ಬ ಶರಣನೆಂದ,
ಒಂದೆ ನೂಲಿನಲಿ ಹಲವು ಹೂವು ಕೋದಂತೆ ಸೃಷ್ಟಿಮಾಲೆ
ಕಲ್ಲು ಬಲ್ಲದೀ ಮಾತು! ನಾವು ಮರೆತಿಹುದು ಯಾವ ಲೀಲೆ?

೨

ಆ ಚೆನ್ನಕೇಶವನ ಸಾಕ್ಷಿಯಲ್ಲಿ ಚೆನ್ನೆಯರು ಕುಣಿಯುತಿಹರು
ದಣಿವಿಲ್ಲ ಮೈಗೆ ತಂತಾನೆ ಒಳಗೆ ತಣಿತಣಿಸಿ ತಣಿಯುತಿಹರು.
ಇದು ಯಾವ ಶಿಲ್ಪಿ ಕಲ್ಪಿಸಿದನೇನೊ ಅಲ್ಪರಿಗೆ ಸಾಧ್ಯವಲ್ಲ
ಈ ಭೂಮಿತುಂಬ ಭೂಮತ್ವ ಬಿಂಬಿಸಿದ ಸಾರ್ವಭೌಮ ಬಲ್ಲ.

೩

ಏನು ಗೋಪುರದ ಗೌರವೋನ್ನತಿಯಲೆತ್ತಿ ನಿಂತ ನಿಲವು!
ಒಂದೆ ತೆಕ್ಕೆ ಬ್ರಹ್ಮಾಂಡ ಹಿಡಿಸಲೆಂದೆಂದು ತೆರೆದ ಹರವು
ನಡುವೆ ಗುಡಿಯು ನೆಲೆಗೊಂಡು ಇಹುದು ಸೌಂದರ್ಯಕೇಂದ್ರದಂತೆ
ಸುರರ ನಡುವೆ, ನಕ್ಷತ್ರಗಳಲಿ ಮೆರೆವಿಂದ್ರಚಂದ್ರರಂತೆ.

೪

ಇಲ್ಲಿ ಇಡಿಕಿರಿದು ತುಂಬಿಕೊಂಡ ಸೌಂದರ್ಯ ನೋಡಲೆಂದು!
ದೇವಲೋಕಾದಾ ಚೆಲುವೆ ನೆಲಿಸಿತೋ ಇದನು ನೋಡಬಂದು
ಕಂಡ ಕಣಸೇನು? ಎಷ್ಟು ಎಣಸೇನು? ಇಲ್ಲಿ ಲೆಕ್ಕವಿಲ್ಲ,
ಸೃಷ್ಟಿಯನ್ನೆ ಕರುವಿಟ್ಟ ಬೆಳಕು ಬೆಡಗಾಗಿ ಬಿಟ್ಟಿತಲ್ಲ.

೫

ಮೈ ಮುರಿದು ಬಿರಿದ ದಾಳಿಂಬದಂತೆ ಜೀವನದ ಪ್ರಭೆಯು ನುಗ್ಗಿ
ಹಣಿಕುವದು ಇಲ್ಲಿ ಬಿರುಬಿರುಕಿನಲ್ಲಿ ಕಣ್ಸೆಳೆಯುವಂಥ ಸುಗ್ಗಿ
ಸೌಂದರ್ಯಪೂರ ಪ್ರಳಯಕ್ಕೆ ದೂರ ಬರ್ಬರನು ಕೈಯ ಚಲ್ಲಿ
ಮಣ್ಣಾಗಿ ಹೋದ; ಸಂಹಾರ ಕಾಲ ಕಲ್ಲಾಗಿ ನಿಂತಿತಿಲ್ಲಿ.

೬

ರಾಜಮನದಲಿ ವಿರಾಜಮಾನ ಸಂಕಲ್ಪಸಿದ್ಧಿಯೊಂದು
ಶಿಲ್ಪಪುಣ್ಯವೇ ಪುಂಜವಾಗಿ ಕೈಬಿಟ್ಟು ರೂಪುಗೊಂಡು
ಪಾಪ ತೊಳೆಯಲಿಸೆ ಹರಿವ ಗಂಗೆಯೊಲು ಓಂದೆ ಎಂದೊ ಬಂದು
ಜನರ ಕಣ್ಣ ಕಶ್ಮಲವ ಕಳೆಯೆ ಕೇಶವನು ನಿಂತನಂದು

೭
ನೀ ತಾಯಯೆನಲೊ ನೀ ಮಾಯಿಯೆನಲೊ ಮೋಹಿನಿಯ ಮೋಹನಾಂಗ ?
ಸುಡುವವರ ಸುಟ್ಟೆ, ಕೆಡುವವರ ಬಿಟ್ಟೆ ಅವರವರಿಗವರ ಸಂಗ.
ತೆರೆದ ಹೊತ್ತಿಗೆಯ ಮರೆಗೆ ಏನು ತೇಂಕರಿಸುತಿಹುದು ನಿತ್ಯ ?
ಭಗ್ನವಾದ ಚೆಲುವಿನಲೆ ನಿಂತಿಹುದು ನಗ್ನವಾದ ಸತ್ಯ !
೮
ಕಪ್ಪು ನೆಲದಲ್ಲಿ ಹತ್ತಿಹೂವರಳಿ ನಕ್ಕು ನಲಿಯುವಂತೆ
ಚಿತ್ತಭೂಮಿಯಲಿ ಎಂದೊ ಬಿತ್ತಿದಾ ಬೀಜ ಮೂಡಿ ಬಂತೆ ?
ಮನದ ಸುಮನಗಳು ಸೂಸುತಿರಲು ಸುಮನಸರ ಸಂತೆಯಂತೆ
ವೃಷ್ಟಿಯಲ್ಲಿ ಈ ಶಿಲ್ಪ ಸೃಷ್ಟಿಯಲಿ ಚಿತ್ರದಂತೆ ನಿಂತೆ.
೯
ಕುದುರೆಸಾಲು, ಅಗೊ ಆನೆಸಾಲು, ಕಾಲಾಳು ಸಾಲುಸಾಲು
ಜೀವಲೋಕದಾ ದೇವಲೋಕದಾ ಮೂರ್ತಿ ಕೆಳಗು ಮೇಲು,
ಯಾವ ರಿಣವು ತೀರಿಸಿದರಿಲ್ಲಿ? ಅದು ಯಾವ ಸಾಲವೆಂದು ?
ಮುಡಿಪನಿಟ್ಟರೋ ಎಲ್ಲ ಕೊಟ್ಟರೂ ಮತ್ತೆ ಸಾಲದೆಂದು.
೧೦
ಮೂರ್ತಿಸಾಗರದ ತೆರೆಗಳಿಲ್ಲಿ ಕಲ್ಲೋಲ ಮಾಲೆಯಾಗಿ
ನೆಕ್ಕ ಬರುತಿಹುದು ನಯನತೇಜವೇ ರೂಪಜ್ವಾಲೆಯಾಗಿ
ಇದ್ರಮೋಹಿನಿಯೊ ಯಾವಹಲ್ಯೆಯೋ ಕಲ್ಲ ಬಾಲೆಯಾಗಿ
ಬಿದ್ದಳಿಲ್ಲಿ ಕನ್ನಡರ ಕೈಗೆ ನವಶಿಲ್ಪಶಾಲೆಯಾಗಿ.
೧೧
ಹಗಲಿರುಳು ಬಿಡದೆ ಕಣ್ಸೆರೆಯ ಹಿಡಿದ ಅದು ಯಾವ ಚೆಲುವೆಯನ್ನೋ
ಈ ಕಲ್ಲಿನಲ್ಲಿ ಕಟೆದಿಲ್ಲಿ ಇಟ್ಟನೋ ಯಾವ ರತಿಯ ಸ್ಮರನೋ ?
ಇದು ಶಿಲ್ಪವಲ್ಲ, ಮಟಮಾಯ ಮೋಡಿ, ಮಯಕಲ್ಪ ಸೃಷ್ಟಿಸಿಹುದು.
ಮೈಮುಟ್ಟದೇನೆ ಮೈದುಂಬುತಿಹುದು ಮಾಯೆಯು ಅಗಾಧವಹುದು.
೧೨
ಯಾವ ಚೆನ್ನೆಯರು ಎಂತು ಕುಣಿದರೂ ಹಿಡಿಸಬಹುದೆ ಮರುಳು ?
ಚೆನ್ನಕೇಶವನ ತುಟಿಯ ಎಳನಗೆಯು ನಮ್ಮ ಕಾಯುತಿರಲು
ಮೂಲೋಕ ಕಾದ ಮಾಯಾವಿಯಾದ ಮಾತೆಯ ಅಗಾಧಹೃದಯ
ಮುದ್ದನಿಟ್ಟು ಅಪ್ಪುಗೆಯ ಕೊಟ್ಟು ಬಲಪಡೆಸುತಿಹುದು ಎದೆಯ.

೧೩
ಇಗೋ ಇಲ್ಲಿ ಯಾವುದೋ ಪೂರ್ವಸೃಷ್ಟಿ ಪ್ರಳಯಕ್ಕೆ ಈಡು ಆಗಿ
ವೇದ ತಮದಿ ಮುಳುಗಿತ್ತು ಮನುಜಮನ ತಮದ ಬೀಡು ಆಗಿ
ಓಹೋ ದೇವರಿವರಹುದು ಇತ್ತಲೋ ಇಹುದು ಅಸುರವರ್ಗ
ಗುದ್ದಾಡಿಂದ ಕಡಲೊಡಲ ಕಡೆವುದೀ ಯಾವ ಭೂತಸರ್ಗ.

೧೪
ಕಡಲಿನಲ್ಲಿ ನೆಲದೊಡಲ ನೋಡಿ ಶ್ರೀ ಮೀನದೇವ ಕಾದ.
ಒಂದು ಕೈಲಿ ಮಾನವನ ಕುಲವ ಇನ್ನೊಂದು ಕೈಲಿ ವೇದ.
ರತ್ನ ದೊರಕಿಸಲು ಯತ್ನ ನಡೆಸಿರಲು ರಾಜಕೀಯ ವಾದ.
ಜೀವಜೀವದಾ ಹೊಟ್ಟೆಕಿಚ್ಚು ಕಾರಿತ್ತು ವಿಷಪ್ರಸಾದ.

೧೫
ಬುದ್ಧರಿರಲಿ ನಿರ್ಬುದ್ಧರಿರಲಿ, ಅನ್ಯಾಯಿ ನ್ಯಾಯಿ ಇರಲಿ
ಬ್ರಹ್ಮಿ ಇರಲಿ ಬ್ರಹ್ಮೇತ್ಯಿ ಇರಲಿ, ಆ ಭೋಗಿ ಯೋಗಿ ಬರಲಿ
ಈ ಮಾತು ಸತ್ಯ ಈ ಮಾತು ನಿತ್ಯ, ಇದು ಒಂದೆ ದೇವನಾಟ
ಬೇಲೂರ ಕಲ್ಲು ಕನ್ನಡಿಸಿದಂತೆ ನಡೆದೀತು ಎಂದು ಮಾಟ ?

೧೬
ಒಂದೆ ಕಲ್ಲಿನಲಿ ಕಟೆದರಣ್ಣ ಈ ಕೋಟಿ ಮೂರ್ತಿಗಳನು
ಕೀರ್ತಿಕಳಶ ಕಟ್ಟಿದರು ಮೂಡಿಸುತ ವಿವಿಧ ಅರ್ತಿಗಳನು
ಅಡಿಯಲ್ಲಿ ಬೆರಳು ಮುಡಿಯಲ್ಲಿ ಕುರುಳು ತೀಡಿಹುದೆ ಒಂದೆ ಕೈಮೆ ;
ದೇವಮಾನವರ ಭಂಗಿ ಬೇರ್ಪಡಿಸಿ ತೋರಿಸಿಹುದು ಮೈಮೆ.

೧೭
ಅಣ್ಣನೊಡನೆ* ಹಿಂದೊಮ್ಮೆ ನೋಡಿದೆನು ಇದೇ ಸ್ಥಾನವನ್ನು
'ಕಣ್ಣು ತೆರೆಸು ನಗೆ ತೋರು ತಮ್ಮನಿಗೆ' ಎಂದ ಧ್ಯಾನವನ್ನು
ನೆನೆದೆ, ಕಂಡೆ ವಿಗ್ರಹ ವಿಭೂತಿ ವೈಭವ ವಿಲಾಸದಲ್ಲಿ
ವಾಸ್ತುಶಿಲ್ಪ ವಿಸ್ತಾರಗೊಂಡ ಹೊಸದೊಂದು ನ್ಯಾಸದಲ್ಲಿ.

ಭಾವ : *ಅಣ್ಣ ಮಾಸ್ತಿಯವರೊಡನೆ ಚೆನ್ನಕೇಶವನ ಪ್ರಥಮ ದರ್ಶನವಾಯಿತು. ಮತ್ತೊಮ್ಮೆ ಬೇಲೂರ ದೇಗುಲವನ್ನು ಕಂಡಾಗ ಮೂಡಿಬಂದ ಕವನ.

ಶಬ್ದಾರ್ಥ : ಕರುವಿಡು=ಎರಕ ಹಾಕು. ಬೆಡಗು=ಸೊಗಸು. ಬರ್ಬರ=ಅನಾಗರಿಕ. ಕಶ್ಮಲ=ಹೊಸಲು. ಸುಮನಸರು=ನಿರ್ಮಲ ಚಿತ್ತವುಳ್ಳವರು, ದೇವತೆಗಳು. ಸ್ಮರ=ಮನ್ಮಥ, ಕಾಮ. ಅರ್ತಿ=ಅಪೇಕ್ಷೆ. ಮೈಮೆ=ಮಹಿಮೆ. ನ್ಯಾಸ=ಇಡುವಿಕೆ.

ವಿಶೇಷ : ೧೭ನೆಯ ನುಡಿ ೪ನೇ ಸಾಲಿನ ಮುಕ್ತಾಯ-ಕೊನೆಯ ಶಬ್ದ ಮೊದಲನೆಯ ಆವೃತ್ತಿಯಲ್ಲಿ ವ್ಯಾಸದಲ್ಲಿ ಎಂದು ಇತ್ತು, ಅದನ್ನು ಎರಡನೆಯ ಮುದ್ರಣದ ಕಾಲಕ್ಕೆ ನ್ಯಾಸದಲ್ಲಿ ಎಂದು ಬೇಂದ್ರೆಯವರೇ ತಿದ್ದಿದ್ದಾರೆ.

೨೯ ಯುದ್ಧ ಬಂತು ಮನೆಯವರೆಗೆ

೧

ಯುದ್ಧ ಬಂತು ಮನೆಯವರೆಗೆ
ಬನ್ನಿ ಒಂದಾಗಿರಿ.
ಒಳಜಗಳವ ಕ್ಷಣವೆ ನಿಲಿಸಿ
ನಮ್ಮ ಜನವ ಒಲಿದು ಒಲಿಸಿ
ತಾಯಿನೆಲಕೆ ಸೇವೆ ಸಲಿಸಿ
ನಿಮ್ಮ ಹಗೆಯ ತಾಗಿರಿ.

೨

ನರಮನುಷ್ಯ ಒಂದೆ ಜಾತಿ
ಎಲ್ಲ ಜನಕೆ ಒಂದೆ ನೀತಿ
ಹಾಡಿರಿ ನವಕರ್ಮಗೀತಿ
ಹಾಡಿ ಮುಂದೆ ಸಾಗಿರಿ
ನೋವ ಕಂಡು ನೋಯಿರಿ
ಕೊಲೆಯಿಂದಲು ಕಾಯಿರಿ
ಅಮೃತರಾಗಿ ಸಾಯಿರಿ.

೩

ಯಾರ ಮಕ್ಕಳೇನು ಒಂದು
ಎಲ್ಲ ಹೆಣ್ಣು ನಮಗೆ ಬಂಧು.
ಇಲ್ಲಿ ಇಲ್ಲ ನಂದು ನಿಂದು
ಬಗೆದು ಇದನು ತೂಗಿರಿ.

೪

ಫಲಿಸಿ ಬಂತು ಪೂರ್ವಕರ್ಮ
ವಿವಿಧ ಮತದ ಒಂದೆ ಮರ್ಮ
ಮೂಲಕಿರುವ ಆತ್ಮಧರ್ಮ.
ಬಾಳ ಗೆದ್ದು ಬಾಳಿರಿ
ನಿಮ್ಮ ನೀವೆ ಆಳಿರಿ
ಬಂದ ಕಷ್ಟ ತಾಳಿರಿ.

೫
ಜಗಕೆ ಬಂತು ಮಹಾಪ್ರಳಯ
ಹಿಡಿಯಾಯಿತು ಭೂಮಿವಳಯ
ಇಳಿಯಲಿಲ್ಲಿ ಸ್ವರ್ಗನಿಳಯ
ದೇವಜಾತಿಯಾಗಿರಿ.

೬
ಶಕ್ತಿ ಬಹಳು ಇಳೆಗೆ ಇಳಿದು
ಮಹಾದೇವ ದೇಹ ತಳೆದು
ತಮ್ಮ ಅಡಿಗಳಿಂದ ಅಳೆದು.
ಆ ಅಡಿಗೆ ಬಾಗಿರಿ
ಎದೆಗಳನ್ನು ತೊಳೆಯಿರಿ
ಮಿಂಚಿನಂತೆ ಹೊಳೆಯಿರಿ
ಒಲವಿನೊಲವ ಬೆಳೆಯಿರಿ.

ಭಾವ : ೧೯೪೦-೪೨ರ ಕಾಲ. ಯುದ್ಧ ಧರ್ಮವಾದಾಗ ಯುದ್ಧ-ಪರಾಙ್ಮುಖತೆ ಅಧರ್ಮ.

ಶಬ್ದಾರ್ಥ : ಬಗೆದು-ತಿಳಿದು.



೩೦ ಯಮದೇವನ ಒಕ್ಕಲು

೧
ಕೋಣವೇರಿ ಬರುವ ಯಮಾ
ಎಲ್ಲಿ ಇಲ್ಲೊ ಸಂಯಮಾ
ಕಾಮಕಿಲ್ಲ ಅಂತವು
ಅರ್ಥವಿಹುದಪಾರವು
ಅಂತೆಯೇನೊ
ಅಂದರೂನೂ
ಈ ಎದೆಗಳು ಯಾರವೂ
ಇನ್ನೂನೂ ಆರವು.
೨
ಬೇಕು ಬೇಕು ಎನುತಿದೆ
ಸುಟ್ಟರೂನು ಬೇಯವು
ಅಂತೆಯೇನೊ
ಆದರೂನೂ.
ಸತ್ತರೂನು ಸಾಯವು
ಸಾವಿನಾಚೆ ಹಾಯವು.
೩
ಭೂತಕಾಲ ದೆವ್ವವು
ಬಲಿ ಬೇಡುವದಿಂದಿಗು
ಅಂತೆಯೇನೊ
ಅಂದರೂನೂ.
ಯುದ್ಧ ಇಹುದು ಎಂದಿಗೂ
ಕಾಲ ಸಂಧಿಸಂಧಿಗೂ.
೪
ಎಂದು ಇದಕೆ ಮೋಕ್ಷವು ?
ಏನನಾದಿ ಕರ್ಮವೋ !
ಅಂತೆಯೇನೊ
ಅಂದರೂನೂ
ಹೊಳೆಯದಿದರ ಮರ್ಮವೋ !
ಜಗಕೆ ಯಮನೆ ಧರ್ಮವೋ ?

೫


ಯಮದೇವರ ಒಕ್ಕಲು
ನಿತ್ಯ ಮರಣಸಿದ್ಧರು
ಅಂತೆಯೇನೊ
ಅಂದರೂನೂ
ಗೆದ್ದು ಇವರು ಬಿದ್ದರು
ಎದ್ದು ಅಪ್ರಬುದ್ಧರು.

೬

ನರದೇಹದ ಪಶುಗಳು
ಇವರ ವೈರ ಮಾಣವು
ಅಂತೆಯೇನೊ
ಅಂದರೂನೂ
ಇವರ ಕಣ್ಣು ಕಾಣವು
ಇವರ ದೃಷ್ಟಿ ಕೋಣವು

ಭಾವ : ಧರ್ಮವಿರುದ್ಧವಾದ ಅರ್ಥಕಾಮುಗಳಲ್ಲಿ ಆಸಕ್ತರಾದವರು, ಯಮ ದೇವನ ಒಕ್ಕಲು. ಅವರಿಗೆ ಮರಣದಿಂದ ಬಿಡುಗಡೆಯಿಲ್ಲ.

ಶಬ್ದಾರ್ಥ : ಅಪ್ರಬುದ್ಧರು=ತಿಳುವಳಿಕೆಇಲ್ಲದವರು, ಎಚ್ಚರಾಗದಿರುವವರು.



೩೧ ಬೀದಿನಾಯಿ ರಾಧೆ



೧

ಬೀದಿನಾಯಿ ರಾಧಿಗೆ
ಹೊಟ್ಟೆ ತುಂಬ ಮೊಲೆಗಳು
ಹೊಟ್ಟೆ ತುಂಬ ಎದೆಯ ತುಂಬ
ಜೋಲು ಮೊಲೆಯ ಸಾಲ್ಗಳು.

೨

ಬೀದಿನಾಯಿ ರಾಧಿಗೆ
ಊರ ತುಂಬ ಗೆಳೆಯರು
ಸರ್ವಸಾಕ್ಷಿ ಇವಳ ಪ್ರಣಯ
ನೋಡುವವರು ಎಳೆಯರು.

೩

ಬೀದಿನಾಯಿ ರಾಧಿಗೆ
ಅಸರಂತವು ಮರಿಗಳು
ಹೊಟ್ಟೆಗೆಂಬ ಚಿಂತೆ ಇಲ್ಲ
ಇವಳೆ ಅವರ ಹೊರೆವಳು.

೪

ಬೀದಿನಾಯಿ ರಾಧಿಗೆ
ಬೇಕು ಅವಳಿಗೆಲ್ಲರು
ಹರಕ ತಿರುಕ ಹಾದಿಹೋಕ
ಚೋರ ಪೋರ ನಲ್ಲರು.

೫

ಬೀದಿನಾಯಿ ರಾಧಿಗೆ
ಇಲ್ಲ ಕೆಲಸ ಸಂಬಳ
ಊರ ತಿಪ್ಪೆ ಮಸಣ ಕುಪ್ಪೆ
ಅದೇ ಅವಳ ಉಂಬಳ.

೬

ಬೀದಿನಾಯಿ ರಾಧಿಗೆ
ಮಳೆ ಬಿಸಿಲಿಗೆ ಸಾಧನ
ಹುಣಸೆ ಮರದ ನೆರಳು ಹೊದರು
ಎವ್ವನ ಆರಾಧನ.

೭
බ

ಬೀದಿನಾಯಿ ರಾಧಿಯು
ಮೊನ್ನೆ ಹೇಗೊ ಸತ್ತಳು,
ದುರುಳನೊಬ್ಬ ಏಕೊ ನಕ್ಕ
ಹೊಲಸೂಳೆಯು ಅತ್ತಳು.

ಭಾವ : ಕಣ್ಣಿಗೆ ನಾಯಿ, ಒಳಗೆ ಯಾವ ಜೀವ ತೊಳಲುವದೊ? ತಪಿಸುವದೊ! ಅದರ ಹೃದಯದ ಹೃದ್ಯ ವೇದನೆಯೇ ಗೀತ.

ಶಬ್ದಾರ್ಥ : ಹೊರೆವಳು=ಕಾಪಾಡುವವಳು. ಉಂಬಳಿ=ಮಾನ್ಯವಾಗಿ ಕೊಡುವ ಭೂಮಿ, ಗ್ರಾಮ. ಹೊದರು=ಗುಂಪು, ಸಮೂಹ. ಆರಾಧನ=ಪೂಜೆ, ಸಂತೋಷಪಡಿಸುವ ಸೇವೆ. ಎವ್ವನ=ತಾಯಿಯ.



೩೨ ಜೀವನ ಕಲ್ಯಾಣ

(ಕೋಲುಹಾಡು)

ಜೀವನ ಒಂದು ನಾಽಟಕಽ
ಹೂವು ಹಣ್ಣಿನಾ ಕೂಟಕಽ ॥ ಪಲ್ಲವಿ ॥

ಮಲ್ಲಿಗಿ, ಮಲ್ಲಿಗಿ, ಅಲ್ಲಿಗಿ, ಇಲ್ಲಿಗಿ
ಎಲ್ಲಾಽನುಽ ಮಲ್ಲಿಗಿ ನೋಡಣ್ಣಾ ॥
ಮಾವು ಮಾವು ನಾವು ನೀವು
ಎತ್ತಾಽನುಽ ಮಾವು ನೋಡಕ್ಕಾ ॥ ಅನುಪಲ್ಲವಿ ॥

೧
ಬೇವಂಬೋದು ಅಧರದ ಮ್ಯಾಲೆ
ನೋವಂಬೋದು ಉದರದ ಒಳಗ
ಜೀವಂಬೋದು ಮಕ್ಕಳ ನೋಟ
ಮಾಯಾದೇವಿ ಮಾಟಕಽ ॥ ಜೀವನ ಒಂದು.......

೨
ಹರೆಯೆಂಬೋದು ತೆರೀಹಾಂಗ
ಬಂತ ಅನ್ನತಽ ಹೊರಟಿತು ಬ್ಯಾಗ ॥
ಬಾ ಸಿಂಗಾರದ ಬ್ಯಾಟಕಽ
ಮುಗಿಯಽದ ಆಟಕಽ ॥ ಜೀವನ ಒಂದು.....

೩
ಮರಣದ ಹಡದಿ ತಿಳಿದೂ ತುಳಿದೂ
ಶರಣರ ಹಾದಿ ಹುಡುಕತೇವಿ ॥
ಕರುಣದ ಕಣ್ಣು ಕಂಡಿತಕ್ಕಽ
ಗಂಗೀ ಗೌರೀ ನೋಟಕಽ ॥ ಜೀವನ ಒಂದು.....

೪

ನಂಜುಂಡೇವ ಅರುವಿಗೆ ಕದ್ದು
ಕೈಲಾಸಂಬೋದು ಮುಗಿಲ ಮುದ್ದು॥
ಜನ್ಮ ಜನ್ಮಕೂ ಒಂದಽ ಹಣ್ಣು
ಶಿವ ಶಿಂಗಾರದ ತ್ವಾಟಕಽ ॥ ಜೀವನ ಒಂದು.....

ಭಾವ : ಕೋಲಹಾಡು ನರ-ನಾರಿಯರ ಹೃದಯಗೀತ. ಬೇಂದ್ರೆಯವರ ''ಘಾಜಾರಗಟ್ಟಿ ಮುಟ್ಯೋಣ ಬಾ'' ಎಂಬ ಕವನವನ್ನು ನೋಡಬಹುದು.

ಅರ್ಥ: ಬ್ಯಾಟ=ಅಪೇಕ್ಷೆ, ಕಾಮಾತುರತೆ. ಹಡದಿ=ಮಡಿಬಟ್ಟೆ ನಡೆಮಡಿ. ಶಿಂಗಾರ=ಶೃಂಗಾರ.



೩೩ ಅ-ಸ್ಮಿ-ತಾ

೧
ಬೇಟೆಗಾರಿಕೆ ಕಣ್ಗೆ ಮಣ್‌ಹೊಯ್ದು ಎಂದಾರೆ
ಹಕ್ಕಿಗಳ ಕೇಳಿರುವೆಯಾ ?
ಬಣ್ಣರೂಪದ ಮಾಲೆ ಬದಿಗಿರಿಸಿ ನರುಗಂಪ
ಹಾಡನ್ನು ಹೇಳಿರುವೆಯಾ ?
೨
ಪಂಚ ಪಕ್ವಾನ್ನವನು ಬಿಕ್ಕೆಯಲಿ ಕಂಡಾಗ
ಅಮೃತಾನ್ನ ಉಂಡಿರುವೆಯಾ ?
ಸಿಂಗಾರ ಬಂಗಾರ ಪಾಂಗಾರೆ ಭಂಗಿಸಿರೆ
ಕಣ್ಮುಚ್ಚಿ ಕಂಡಿರುವೆಯಾ ?
೩
ಋತುವಮಾನ ಬೆಸವಾಗಿ ಬಿಗುವಮಾನ ಹಿರಿದಾಗೆ
ಶಾಂತತೆಯ ತಳೆದಿರುವೆಯಾ ?
ಹಸಿನಾತ ರಾಕ್ಷಸಿಯ ಭಕ್ಷಣೆಗೆ ಹೊರಗಾಗಿ
ತೃಪ್ತಿಯಲಿ ಕಳೆದಿರುವೆಯಾ ?
೪
ಕಲ್ಲ ಕಂಬನಿ ಸುರಿಸಿ, ಬೆಲ್ಲ ಸಪ್ಪಗೆ ಇರಿಸಿ,
ಮೆಲ್ಲೆದೆಯ ಮುಟ್ಟಿರುವೆಯಾ ?
ಏರಿಳವುಗಳ ದಾರಿ ಉದಯಾಸ್ತಗಳ ಮೀರಿ
ರವಿಯಾಗಿ ಹುಟ್ಟಿರುವೆಯಾ ?
೫
ಭೀತ ರುದ್ರನ ಇದಿರು ನಿರ್ಭೀತ ಶಿವನಂತೆ
ಎಂದಾರೆ ನಿಂತಿರುವೆಯಾ ?
ಅಲೆದಲೆದು ದಣಿದರೂ ನೆಲೆನಿಂತ ಅಡಿಗಳಲಿ
ಕ್ಷಣವಾರೆ ಕುಂತಿರುವೆಯಾ ?
೬
ತಾಯಿ ಕೂಸಿನ ಮುದ್ದು ಮೌನದಲಿ ಮಿಡಿದಾಗ
ಶ್ರುತಿಯನ್ನು ಹಿಡಿದಿರುವೆಯಾ ?
ಧ್ಯಾನ ಪಕ್ವತೆ ಪಡೆದು ಮೌನ ಬೀಜವು ಸಿಡಿದು
'ಓಂ' ವೇದ ಪಡೆದಿರುವೆಯಾ ?

೭

ಬಾ ತಾಯಿ ಬಾ ಗುರುವೆ ಬಾ ಗೆಳೆಯಯ ಬಾ ಒಡೆಯ
ಬಾ ನಲ್ಲೆ ನಾನೆ ಬರಲೆ?
ನಾದ ತಂತಿಯಲೊರಗಿದಂತೆ ಸಹ-ಭವನಾಗಿ
ಬಾಯ್ದೆರೆಯ ನಗೆಯೊಲಿರಲೇ?

೮

ಸ್ಮಿತವೆ ವಿಸ್ಮಿತವಾಯ್ತು ಅಸ್ಪರ್ಶ ಸ್ಪರ್ಶದಲಿ
ಅಸ್ಮಿತೆಯು ಸ್ಫೂರ್ತಿಸಿತ್ತು.
ವಿಸ್ಮಿತದ ಸ್ತಿಮಿತದಲಿ ಮೌನವೇ ಧ್ವನಿಸುತಿರೆ
ಸ್ಮಿತವಾಗಿ ಮೂರ್ತಿಸಿತ್ತು.

ಭಾವ : ಸ್ಮಿತರಹಿತ ಗಾಂಭೀರ್ಯದಲ್ಲಿ 'ಅಸ್ಮಿ-ತಾ' ದೇವತೆ ನೆಲೆಸಿದ್ದಾಳೆ. ಆಕೆಯ ಗುಹೆ ಹೊಕ್ಕು ಈ ಷಟ್ ದರ್ಶನ ಪಡೆಯುವದೇ ಪಾವನತೆ.

ಶಬ್ದಾರ್ಥ : ಅಸ್ಮಿತಾ=ನಾನು ಇದ್ದೇನೆ ಎಂಬುದರ ಅರಿವು, 'ಅಸ್ಯವಾಮೀಯ ಅಸ್ಯವಾಂ' ಮೊದಲಾದ ಸೂಕ್ತಗಳಿಗೆ ಸಂಬಂಧಿಸಿದ ಅರಿವು. ಪಾಂಗಾರೆ=ತೃಪ್ತಿ ಕೊಡುವ ರೂಪ. ಕುಂತಿರು=ಕೂತಿರು. ವಿಸ್ಮಿತ=ಆಶ್ಚರ್ಯ. ಸ್ತಿಮಿತ=ನಿಶ್ಚಲವಾದ, ಅಲುಗಾಡಿದಿರುವ. ಸ್ಮಿತ=ಮುಗುಳು ನಗೆಯಿಂದ ಕೂಡಿದ.



೩೪ ಅಂತೆವೋಲ್

(ಉಪಮಾನಿಷ್ಠಾಃ ಕವಯಃ)

೧

ಅಂತೆವೋಲ್ ಅಂತೆವೋಲ್ .
ನಾನು ನಿನ್ನಂತೆವೋಲ್
ನೀನು ನನ್ನಂತೆವೋಲ್
ಅಂತೆಗಂತೆ ಕೂಡಿ ಸಂತೆ
ಕೊಡುಕೊಳೆ ನಡೆದಂತೆವೋಲ್

೨

ನಾನು ಹೇಳಿ ನೀನು ಕೇಳಿ
ನೀನು ಆಡಿ ನಾನು ನೋಡಿ
ಒಂದು ಇದ್ದಂತೆವೋಲ್
ಎರಡು ಆದಂತೆವೋಲ್.

೩

ಎದುರುಗೊಂಡು ಇದಿರುಗೊಂಡು
ನಮ್ಮ ನಾವೆ ತಿಳಿದುಕೊಂಡು
ಭಾವವೆಂಬ ಹೂವಿನಲ್ಲಿ
ಹುರುಳುಗೊಂಡ ತಿರುಳಿನಲ್ಲಿ

೪

ನನ್ನ ರುಚಿಯ ನೀನು ಕಂಡು
ನಿನ್ನ ಸವಿಯ ನಾನು ಉಂಡು
ಎರಡರಲ್ಲೆ ಎಲ್ಲವಾಗಿ
ಎರಡೆಂಬುದೆ ಅಲ್ಲವಾಗಿ

೫


ದ್ವಂದ್ವದಲ್ಲಿ ದಂಪತಿ
ವಿಶ್ವವಾದ ಶಿವಸತಿ
ಹಿಗ್ಗಿನಲ್ಲಿ ದೇವವಸತಿ
ರೂಪ ರೂಪ ಸರಸತಿ

೬
ಕೆಳಗೆ ಮೇಲಿನಂತೆವೋಲ್
ಹೊರಗೆ ಒಳಗಿನಂತೆವೋಲ್
ಅಂತೆವೋಲ್ ಅಂತೆವೋಲ್
ತಿಳಿದಮಾತೆ ಹೊಳೆಸಿದಂತೆ
ಎದೆಯ ಬೀಜ ಬೆಳೆಸಿದಂತೆ
ಭಾವನಾದದಂತೆವೋಲ್

೭
ದೃಷ್ಟಿಯೇ ಹೊಸ ಸೃಷ್ಟಿಯಂತೆ
ಮಾತೇ ಮಧು ವೃಷ್ಟಿಯಂತೆ
ತಾನೆ ಗಾನದಂತೆವೋಲ್
ದನಿಯೇ ನದಿಯಾದ ಹಾಗೆ
ನಾದವೆ ಜಗದಗಲವಾಗೆ
[ನಿಂತಂತೆವೋಲ್]

ಭಾವ : ಉಪಮಾ ವ್ಯಾಪಾರದಲ್ಲಿ ಕವಿ ಭೇದದಲ್ಲಿ ಅಭೇದವನ್ನು, ಅಭೇದದಲ್ಲಿ ಭೇದವನ್ನು ಅನುಭವಿಸುವನು. ಅದರ ಚಾರುತ್ವ ಬರಿ ಚಮತ್ಕೃತಿಯಲ್ಲ. ಅದು ಹೃದಯ ಗ್ರಂಥಿಯ ಅಂತರ್ಮುಖ ವ್ಯವಹಾರ.

ಶಬ್ದಾರ್ಥ : ಹುರುಳು=ಸತ್ತ್ವ ಶಕ್ತಿ. ವೃಷ್ಟಿ=ಮಳೆ.



೩೫ ಗಾಳಿಗಳೇ

೧

ಗಾಳಿಗಳೆ, ಮರುಳರಿರಾ, ಶಿವಗಣಂಗಳಿರಾ
ಬನ್ನಿ ಬೀಸಿರಿ ಮರುಳು ಕಾಡಿನಿಂದ
ನಿಮ್ಮ ಗೂಡಿನಿಂದ.

೨

ಮೂಡಲಿದೆ ಹೊಸ ಚಿಗುರು
ಮೂಡಲಿದೆ ಹೊಸ ಪೊಗರು
ಮೂಡಲಿದೆ ಹೊತ್ತು
ಕುಡಿಯೊಡೆದು ಕಣಕಣವು
ಕುಣಿಯೆ ರುದ್ರರ ಗಣವು
ಕುಣಿಯಲೆದ್ದಿತು ಹೆಣವು
ಪರ್ವವೀಕ್ಷಣವು.

೩

ಸುಡುಗಾಡುಗಳ ಬೂದಿ
ಬಾನ ಬಟ್ಟೆಯೊಳೂದಿ
ತೆರೆಯಲಿದೆ ಹೊಸ ಹಾದಿ
ತವ್ಮಗಳಿಗೆ

೪

ಕೊಳ್ಳಿದೆವ್ವಗಳದುರೆ
ಮರ ಹೊದರುಗಳು ಒದರೆ
ಮಿಸಕಲಾರದೆ ಬೆದರೆ
ಬಿದ್ದಿಹವು ಹಮ್ಮು.

೫

ಬರಲಿ ಝುಂಝಾವಾತ
ರುದ್ರಗಣಸಂಜಾತ
ಅಲ್ಲಾಡಲೆಲ್ಲೆಲ್ಲು ಭೂತಜಾತ
ಓ, ಹೋ, ಹೋ.

೬

ಕಡಲು ಕದಲಾಡಿತ್ತು
ನೆಲವು ನಡುಗಾಡಿತ್ತು
ಬೆಳಕು ಸಿಡಿಲಾಡಿತ್ತು
ಸುತ್ತು ಮುತ್ತು.

೭

ಊರೂರೆ ರಣಕಣವು

ತಾಂಡವವು ಗೊಂದಣವು

ರಕ್ತದೋಕುಳಿಯಾಡೆ ಜೀವಗಣವು

ಚಿಮ್ಮಿತ್ತು ಕೈಲಾಸ

ಹೊಮ್ಮಿ ರುದ್ರನ ಹಾಸ

ಒಮ್ಮೆ ನಿಮ್ಮ ವಿಳಾಸ

ನೋಡಿ ನೋಡಿ.

೮

ಮರುಳರಿರಾ, ಮರುತರಿರಾ

ಒಂದುಗೂಡಿ

ಏನು ಆಡುವಿರಾವ ಆಟ ಹೂಡಿ?

ಬನ್ನಿ ಶಿವನ ಕೂಡಿ.

ಭಾವ : ರೌದ್ರ ತೀರಿದ ಮೇಲೆ ಶಿವದ ಸರ್ವಮಂಗಲ ಬರುವದು. ಬರಿ ರೌದ್ರ ಶಕ್ತಿನಾಶ.

ಶಬ್ದಾರ್ಥ : ಪೊಗರು=ಹೊಳಪು. ಪರ್ವ=ಹಬ್ಬ ಅದುರೆ-ಅದಿರ್=ಅಲ್ಲಾಡು. ಗೊಂದಣ-ಗೊಂದಳ=ಗದ್ದಲವೆಬ್ಬಿಸು. ಮರುತ=ಗಾಳಿ.

ವಿಶೇಷ : ಗಾಳಿಗಳ ವೈವಿಧ್ಯದ ವರ್ಣನೆ ಸಖೀಗೀತ ದಲ್ಲಿ ವಿಸ್ತಾರವಾಗಿ ಇದೆ.

೩೬ ಜೀವನನಾಟ್ಯ

೧
ಇದ್ದುದಿಲ್ಲದನು ಒಂದೆ ಶೂನ್ಯದಲಿ ಸುತ್ತಿಕೊಂಡ ನಿದ್ದೆ.
ಎದ್ದಮೇಲೆ ಎರಡೊಂದ ಮಾಡಿ ಬೆಳೆಸುವದು ಸೃಷ್ಟಿವಿದ್ಯೆ.
ಗಂಡುಸೆಂತೊ ಸಂತಯಿಸಿಕೊಳಬಹುದು ಪರಬ್ರಹ್ಮದಂತೆ
ಮಕ್ಕಳಿಲ್ಲದೀ ಬಾಳನೆಂತು ಸಹಿಸುವಳು ಪ್ರಕೃತಿಕಾಂತೆ ?
೨
ಹೆರಲು ಹೊರಲು ಹೊಟ್ಟೆಯನೆ ತೆರೆದು ತಂನೀರನಲ್ಲೆ ಕಟ್ಟಿ
ಹುಟ್ಟೆಯಲ್ಲಿ ಹನಿಜೇನನೊಟ್ಟದೊಲು ಒಲುಮೆಯನ್ನೆ ಒಟ್ಟಿ
ಮುಟ್ಟ ಕಟ್ಟ ತನಿ ಮೂರ್ತಿಗೊಳಿಸಿ ಮುತ್ತಿಡಲು ಹೊರಕೆ ತಂದು
ಬಯಲನೊಂದು ಗುಡಿಗೊಳಿಸುತಿಹಳು ಒಳುಬಾಳ ಹರಕೆ ಎಂದು.
೩
ಮಣ್ಣಗೊಂಬೆ ಒಳಗಣ್ಣಗೊಂಬೆಯಲಿ ನಾಟ ಮುದ್ರಿಸಿರಲು
ತನ್ನ ನೆನೆವನೇ ತಾನೆ ನೆನೆಸಿ ಒಳವೊಳಗೆ ನಿದ್ರಿಸಿರಲು
ಹೃದಯ ಮುದ್ರೆಯನು ಬಿಚ್ಚಿ ನಾಡಿಯಲಿ ಬೀಜ ಬಿಂದುಗೂಡಿ
ನಾಟ್ಯವಾಡಲನುವಾಗುತಿಹವು ಅವು ಏನೋ ಆಟ ನೋಡಿ.

ಭಾವ : ಶಕ್ತಿ ಜೀವನದ ದರ್ಶನ ಗೀತ.

ಶಬ್ದಾರ್ಥ : ತಂನೀರನಲ್ಲೆ ಕಟ್ಟ-ಗರ್ಭನಿಲ್ಲು. ಹುಟ್ಟ=ಜೇನಿನ ಗೂಡು. ತನಿ=ಪೂರ್ಣತೆ.



೩೭ ನಾನು - ನೀನು

೧

ನಾನು ಸರಸಿ ನೀನು ಅರಸ
ಆಳಿ ನೋಡ ಬಾ,
ನಾನು ನೀರೆ ನೀನು ನಲ್ಲ
ಬಾಳಿ ನೋಡ ಬಾ.

೨

ನಾನು ಹಣ್ಣು ನೀನು ಗಿಳಿಯು
ಕದುಕಿ ನೋಡ ಬಾ
ನಾನು ಗೆಳತಿ ನೀನು ಗೆಳೆಯ
ಬದುಕ ಮಾಡ ಬಾ.

೩

ನಾನು ನೋಟ ನೀನು ಕಣ್ಣು
ಬೆಳಕು ನೀಡ ಬಾ
ನಾನು ಮಾಯೆ ನೀನು ಈಶ
ಮೋಡಿ ಆಡ ಬಾ

೪

ನಾನು ಹೊರಗು ನೀನು ಒಳಗು
ಪಟ್ಟುಪಡೆಯೆ ಬಾ
ನಾನು ನೆಲವು ನೀನು ನೀರು
ನಟ್ಟು ನಡೆಯ ಬಾ.

೫

ಗಾಳಿ ನಾನು ಬಾನು ನೀನು
ಮೂಡಿ ನೋಡ ಬಾ
ಗೀತ ನಾನು ಪ್ರೀತ ನೀನು
ಕಟ್ಟಿ ಹಾಡ ಬಾ.

ಭಾವ : ಜೀವ ಗೀತ.

ಅರ್ಥ : ನೀರೆ=ಸುಂದರಿ. ಕದುಕಿ=ಕುಕ್ಕಿ. ಮೋಡಿ=ಕೌಶಲ್ಯ. ಪಟ್ಟು=ಹಿಡಿತ. ನಟ್ಟು=ಸ್ಥಿರ.

೩೮ ಹಿಗ್ಗು ತರಲಿ ಬಿಡುಗಡೆ

ಹಿಗ್ಗು ತರಲಿ ಬಿಡುಗಡೆ
ಹಿಗ್ಗುತಿರಲಿ ಬಿಡುಗಡೆ ॥ ಪಲ್ಲವಿ ॥

೧
ಅಲ್ಲಿ ಇಲ್ಲಿ ಎಲ್ಲೆ ಏಕೆ?
ಎಲ್ಲ ಇರಲಿ ಒಳಗಡೆ;
ಮೇರೆ ಬೇರೆ ಕೊರೆಯಬೇಡ
ಬೆರೆಯಬೇಕು ಬಿಡುಗಡೆ.

೨
ಹಿಗ್ಗದಿದ್ದರೊಳಗಡೆ
ಅಯ್ಯೊ ಕಷ್ಟ ಬಿಡುಗಡೆ !
ಕಟ್ಟಬೇಡ; ಅಟ್ಟಬೇಡ
ಬರಲಿ ಬಿಡು ಬಿಡುಗಡೆ

೩
ಒಬ್ಬನೊಬ್ಬ ತಿಳಿಯಬೇಕು
ಅದುವೆ ಹಬ್ಬ ಭಾವಕೆ
ಕೊಲ್ಲುವ ಕೋಲಾಹಲದಲಿ
ಸಾವೆ ಬಹದು ಜೀವಕೆ

೪
ಅನ್ಯರನ್ನು ಕಟ್ಟಿಹಾಕಿ
ಕಟ್ಟಿಕೊಂಡೆ ನಿನ್ನನು
ಬಿಡಿರಿ ಎಂದು ಕಿರಿಚುತಿರುವೆ
ನೀನೆ ಬಿಡಲು, ಧನ್ಯನು

೫
ಬಿಚ್ಚಲಾರೆ ಹಿಗ್ಗಲಾರೆ
ಎದೆಯೊಳಿಹುದು ಡವಡವ
ಕೊಡುಗೆಯಲ್ಲೆ ಕೊಳುವೆಯಿದೆ
ರಚಿಸಬೇಡ ರೌರವ.

೬


'ಬಿಡೋ, ಬಿಡು, ಬಿಡು ಬಿಡೂ,'
ಎದೆಯ ಸೊಲ್ಲು ನಿಶಿದಿನ
ಕಟ್ಟೆಂಬೆಽ ಕಡೀ ಎಂಬೆಽ
ನೀನು ಮಾತ್ರ ಅನುದಿನ

೭

ಎಲ್ಲರಿಗೂ ಅದೆ ಕಾದಿದೆ
ಬೇಕಾಗಿದೆ ಬಿಡುಗಡೆ
ಅದು ಇಲ್ಲದೆ ಹಿಗ್ಗು ಇಲ್ಲ
ಬೇರೆ ಇಲ್ಲ ನಿಲುಕಡೆ

ಭಾವ : ಪರರನ್ನು ಬಂಧನದಲ್ಲಿಡುವುದು ಮುಕ್ತಿಯ ರೀತಿಯಲ್ಲ. ಸಂಬಂಧದ ಅರಿವಿನಿಂದ ಬಂಧನದ ಬಾಧೆ ಹೋಗುವದು. ಅಂತರಂಗದ ಆನಂದದ ವ್ಯಾಪ್ತಿ ಬೆಳಸಿಕೊಂಡಾಗಲೇ ಮುಕ್ತಿ ಸಾಧ್ಯ. ಜೀವನ ಸಾಗಿಸುವಾಗಲೇ ಅನುಭವಿಸಲು ಸಾಧ್ಯವಿದ್ದ ಜೀವನ್ಮುಕ್ತಿ ಇದು. ಇದು ಶ್ರೇಷ್ಠ ಜೀವನ ಯೋಗ.

ಶಬ್ದಾರ್ಥ : ರೌರವ-ಮೋಸ, ಕಪಟ, ನರಕ. ನಿಶಿ=ರಾತ್ರಿ. ದಿನ=ಹಗಲು. ಅನುದಿನ=ಪ್ರತಿದಿವಸ.



೩೯ ನಲ್‌ತಾಯಿ

ತಿಳುವಳಿಕೆಯಂಥ ತಿಳಿಗೇಡಿ ಎಲ್ಲಿಯು ಇಲ್ಲ।
ಕಳಕೊಂಡ ಹೊರತು ಬೆಲೆಯರಿಯದದು, ಫಲವಿಲ್ಲ ॥ ಪಲ್ಲವಿ ॥

೧

ಇದ್ದಾಗ ತಿಳಿಯಲಿಲ್ಲೆನ್ನ ತಿಳಿವು !
ಮುದ್ದಾಡಿಕೊಳುವಷ್ಟರಲಿ ಬಂದಿತಳಿವು ॥
ಯಾವ ಜನ್ಮದಲಿನ್ನು ರಿಣವ ತೀರಿಸಲಿ।
ಯಾವ ಸೇವೆಯ ಮಾಡಿ ಹೆಸರ ಬೀರಿಸಲಿ ॥

೨

ಹೊತ್ತು ಹೊತ್ತಿಗೆ ನಿನ್ನ ಯೋಗವನು ಕ್ಷೇಮವನು।
ಗೊತ್ತುಪಡಿಸೌ. ನಿನ್ನ ನೆನವಿನಡಿ ಯಾಮವನು ॥
ಕಳೆಯುವದೆ ನೇಮವಾಗಿದೆ ಜೀವಕಿನ್ನು
ಬಳಿಕೆ ಉಳಿಯಲಿ ತಾಯೆ ಇನ್ನು ಮುನ್ನು ॥

೩

ವ್ರಣ ನೋಡಿ ಬಂದದರ ಮೇಲ್ಕೂತ ನೊಣದಂತೆ।
ರಿಣಗೇಡಿ ಜೀವವಿನ್ನೇಕೆ ಮಮತೆಯ ಚಿಂತೆ ?
ಕಕ್ಕುವಿಯೇ ? ನೆಕ್ಕುವಿಯೆ ? ಮಾಯದಾ ಗಾಯ।
ಬಿಕ್ಕಿಲ್ಲ ಬಿಕ್ಕಿದರು ನೂರಿಂಥ ಕಾಯ ॥

೪

ಧರಿಸಿದರು ನಿನ್ನಂಥ ತಾಯಿ ಸಿಕ್ಕಾಳೇ ?
ಹರಸೆನ್ನ 'ಬಾ ಮಗುವೆ' ಎಂದು ನಕ್ಕಾಳೇ ?
ಮುಂಗೆಟ್ಟ ಖೋಡಿ! ಮರಣವ ನೋಡಲಿಲ್ಲ।
ಕಂಗೆಟ್ಟು ಆಶಿಸವ ಬೇಡಲಿಲ್ಲ।

೫

ಅಯ್ಯೋ ! ಬಾಗಿ ಆಶೀರ್ವಾದ ಬೇಡಲಿಲ್ಲ।
ಅಯ್ಯೋ ! ಕಡೆಯ ಆಶೀರ್ವಾದ ಬೇಡಲಿಲ್ಲ ॥

ಭಾವ : ತಾಯಿ ತೀರಿಕೊಂಡಮೇಲೆ ಅನುತಾಪದಿಂದ ಬಂದ ಭಾವಗೀತ.

ಶಬ್ದಾರ್ಥ : ಬೀರಿಸಲಿ=ವ್ಯಾಪಿಸಲಿ. ಯಾಮ=ಹಿಡಿತ. ವ್ರಣ=ಗಾಯ, ಹುಣ್ಣು. ಆಶಿಸವ-ಆಶಿಸ್=ಇಚ್ಛೆ.

೧೩
ಕಣ್ಣು ಇದ್ದೂ ಕುರುಡು, ಕಿವಿಯು ಇದ್ದೂ ಕಿವುಡು,
ಎದೆಯು ಇದ್ದೂ ಕೂಡ ಜೊಳ್ಳು-ಪೊಳ್ಳು
ದುಡ್ಡು ದುಡಿವವರ ಕುಣಿಸುತ್ತಲಿದೆ ಇದು ಸತ್ಯ
ಬಡತನದ ತತ್ತ್ವ ಅಪ್ಪಟೆಯ ಸುಳ್ಳು.

೧೪
ಜನತಾಜನಾರ್ದನಾ! ದರಿದ್ರ ನಾರಾಯಣಾ!
ಅಳಬುರುಕ ರಾಮಾಯಣಾ! ಮತ್ತೆ ಮತ್ತೆ ಪಾರಾಯಣಾ!!
ಶಿವ ಶಿವಾ ಮಾದೇವ ಶಿವಾ! ಕಣ್ಣಿಲ್ಲದವರಿಗೆ ನೀನೆ ಶಿವಾ!!
ಯಾ ಅಲ್ಲಾ! ಬಡತನದಷ್ಟು ಸಿರಿತನವಿಲ್ಲಾ!
Oh God! If thou art
Tell man, if he has a heart.

೧೫
ಯಾವ ಭಾಷೆಯಲಿ ಎಷ್ಟು ಕೂಗಿದರು
ಬಡತನವಾಗದು ನಿರ್ಬೀಜ!
Virus, Parasite ಸಂಪತ್ ವೃದ್ಧಿಗೆ
ಪ್ರಾಣಗೊಬ್ಬರವು ಇದೇ ನಿಜ.

೧೬
ದಾರಿದ್ರ್ಯವನೇ ನಷ್ಟಗೊಳಿಸೆ ಬಾ
ಬೇಡ ದರಿದ್ರರ ಸೇವೆ!
ಪರೋಪಕಾರಕೆ ಅದನಿರಿಸಿರುವಾ
ಹೃದಯುದರಿದ್ರರು ನಾವೇ.

೧೭
ದುಡಿದವಗೆಲ್ಲಾ ಕೆಲಸವ ನೀಡು
ಹಸಿದವರಿಗೆ ಅನ್ನ
ಹೆಣ್ಣಿಗೆ ಕೂಸಿಗೆ ಆಸರ ನೀಡು
ಈ ವಿದ್ಯೆಯೆ ಚೆನ್ನ.

೧೮
ಶೀಲಕೆ ಬೆಲೆ ಕೊಡು, ವಶೀಲೆ ನಿಲ್ಲಿಸು,
ಗುಣಗೌರವ ಮಾಡು
ದೊಡ್ಡಸ್ತಿಕೆಯಲಿ ಮೆರೆಯದಿರಣ್ಣ
ಸಹೃದಯತನ ಬೇಡು.

೧೯*

ಇಕೋ ನೆಲ-ಅಕೋ ಜಲ
ಅದರ ಮೇಲೆ ಮರದ ಫಲ
ಮನದೊಳಿದೆ ಪಡೆವ ಛಲ
ಬೆಳೆವಗೆ ನೆಲವೆಲ್ಲ ಹೊಲ
ಜಲಧಿವರೆಗು ಒಂದೆ ಕುಲ
ಅನ್ನವೆ ಧರ್ಮದ ಮೂಲ
ಪ್ರೀತಿಯೆ ಮೋಕ್ಷಕ್ಕೆ ಬಲ
ಇದೇ ಶೀಲ ಸರ್ವಕಾಲ
ಇಕೋ ನೆಲ-.

೨೦

ಲಕ್ಷ್ಮೀಪತಿಯನು ಜೇಷ್ಠಾದೇವಿಯ ಗಂಡನ ಮಾಡದಿರಣ್ಣ
ವಸುಂಧರೆಯನೇ ಬಂಜೆಯು ಎನಿಸಿ ಏನೋ ಹಾಡದಿರಣ್ಣ
ಮೋಹನದಾಸ ವಿವೇಕಾನಂದರು ಎಂದರು ಏನೋ ತಾವೇ
ಬಡವರ ಕಟ್ಟುವ ಕೆಲಸವು ನಡೆದಿದೆ, ಎನಿಸುತ ಬಡವರ ಸೇವೆ.

೨೧

ದರಿದ್ರನಾರಾಯಣನ ಸೇವೆಯೊ ಅದುವೇ ದೃಷ್ಟಿಯ ಗೊಂಬೆ
ಬಡತನ ಕಣ್ಣಿಗೆ ಬೀಳುವವರೆಗೂ ಈ ತಿರುಮಂತ್ರವ ನಂಬೆ
ಅಮೇರಿಕೆಯ ಧನತತ್ತ್ವವೆ ಇರಲಿ, ರಸಿಯದ ಜನಹಿತತತ್ತ್ವ
ಮಾನವ ಮನತತ್ತ್ವವೆ, ಹೀರುತ್ತಿದೆ ಬಡವರ ಪ್ರಾಣದ ಸತ್ತ್ವ.

ಭಾವ : ಬಡತನವೆಂದರೆ ಬೇಂದ್ರೆಯವರ ಹೃದಯ ಕೆಂಡವಾಗಿ ಕುದಿಯುತ್ತದೆ. ಅದರ ಕ್ಷೋಭದೊಳಗಿಂದ ಮುಂದಿನ ಹಾದಿಯನ್ನು ತೆರೆಯಲು ಅವರ ಜೀವ ಪ್ರಯತ್ನಿಸಿ ಉದ್ಗರಿಸುತ್ತದೆ. ಅಂಥ ಕ್ಷುಬ್ಧೋಕ್ತಿ ಬಂಡಾಯದ ಧ್ವನಿ ಈ ಕವನದ ಆತ್ಮ.

ಅರ್ಥ : ಕಿಳ್ಳೀಕೇತ=ಸೂತ್ರದ ಗೊಂಬೆ ಆಡಿಸುವವನು, ಕಿಡಿಗೇಡಿ, ತುಂಟ. ಲಾಂಗು=ಉದ್ದವಾದ. ತಿರುಮಂತ್ರ=ತಿರುಗುಬಾಣ.

ವಿಶೇಷ : *೧) ೧೯ನೆಯ ನುಡಿ ಸಖೀಗೀತದಲ್ಲಿ 'ಬೈರಾಗಿಯ ಹಾಡು' ಎಂದು ಮುದ್ರಣಗೊಂಡಿದೆ. ಅದರ ಸೇರ್ಪಡೆ ಬೇಂದ್ರೆಯವರು ಈ ಕವನದಲ್ಲಿ ಮಾಡಿದ್ದಾರೆ.

೨) ಬಡತನ ಮತ್ತು ಸಿರಿತನ ಇವುಗಳ ಸಂಘರ್ಷದ ಅಭಿವ್ಯಕ್ತಿ ಈ ಕವನದಲ್ಲಿದೆ. ದರಿದ್ರರ ಸೇವೆಗಿಂತ ದಾರಿದ್ರ್ಯದ ವಿನಾಶ ಈ ಕವನದ ಸಂದೇಶ.

೪೮ ಯೌವನದ ಕನಸು

೧

'ಭೂವೈಕುಂಠ' 'ಭೂಕೈಲಾಸ' ಎಂದು ಹಾಡಿ ಹೋದವರುಂಟು;
ನೋಡಿ ನಲಿದವರಿಲ್ಲ.
ಹಸಿವೆಯ ಸೆರೆಯಿರುವವರೆಗೆ, ಮೈಗೆ ಬಿಡುಗಡೆಯಿಲ್ಲ;
ಅನ್ನವು ಸ್ವಾಧೀನವಾಗಲಿ
ಸಾವಿನ ಸೆರೆಯಿರುವವರೆಗೆ, ಸಂತತಿಗೆ ಬಿಡುಗಡೆಯಿಲ್ಲ;
ಪ್ರಾಣವು ಸ್ವಾಧೀನವಾಗಲಿ.
ಸಂಶಯದ ಸೆರೆಯಿರುವವರೆಗೆ, ತಿಳುವಳಿಕೆಗೆ ಬಿಡುಗಡೆಯಿಲ್ಲ;
ಸತ್ಯವು ಸ್ವಾಧೀನವಾಗಲಿ.

೨

ಅನ್ನದ ಮೇಲೆ ಅನ್ಯರ ಅಧಿಕಾರ ಬೇಡ; ಅನ್ನವು ಸ್ವತಂತ್ರವಾಗಲಿ.
ತನ್ನ ಅನ್ನವ ಪಡೆಯುವದೇ-ಒಕ್ಕಾಲು ಧರ್ಮ!
ಜೀವದ ಮೇಲೆ ಮುಪ್ಪಿನ ಒತ್ತಾಯ ಬೇಡ; ಜೀವನವು ಸ್ವತಂತ್ರವಾಗಲಿ
ಇಚ್ಛೆಯ ಮರಣ ಹೊಂದುವದೇ-ಇಕ್ಕಾಲು ಧರ್ಮ!
ಸತ್ಯದ ಮೇಲೆ ಒತ್ತೆಯ ಮುದ್ರೆ ಬೇಡ; ಸತ್ಯವು ಸ್ವತಂತ್ರವಾಗಲಿ.
ನಿಜ ಸತ್ಯದಂತೆ ನಡೆಯುವದೇ-ಮುಕ್ಕಾಲು ಧರ್ಮ!

೩

ಇನ್ನುಳಿದುದು-ಅಧರ್ಮ! ಅಧರ್ಮ! ಅಧರ್ಮ!
ಅನ್ನ ದಾಟಿ, ಮುಪ್ಪ ಮೀರಿ, ಸತ್ಯ ಸೇರಿದಾಗ ಆತ್ಮದ ಉದಯ.
ಅಲ್ಲಿಯ ವರೆಗೆ-
ಯೌವನದ ಕನಸು; ಪುರಾಣದ ಸ್ವರ್ಗ.

ಭಾವ : ಯುವಕರ ಕನಸು ನನಸಾಗಬೇಕಾದರೆ, ಮೂರು ಸೆರೆಗಳಿಂದ ಬಿಡುಗಡೆ ಹೊಂದಬೇಕು ಎಂಬ ಸೂತ್ರ ಗರ್ಭಿತ ಉಕ್ತಿ.

೪೯ ಧ್ರುವಮಾರ್ಗ

೧

ದೇಹದಲ್ಲಿ ವೈದೇಹಲೀಲೆ ಸುರಸಾರ್ವಭೌಮದೆಡೆಯೆ
ಶ್ರೇಯಪ್ರೇಯಗಳ ದ್ವಂದ್ವ ನಡೆದು ನಿರ್ದ್ವಂದ್ವ ಐಕ್ಯಪಡೆಯೆ.
ಸುರುಚಿಯಲ್ಲಿ ಉತ್ತಮನ ಪಡೆದನುತ್ತಾನಪಾದ ರಾಜ.
ಆ ಸುನೀತಿ ಧ್ರುವನನ್ನು ಹಡೆದು ವನವಾಸಿಯಹುದು ಸಾಜ.

೨

ಗಗನಗಾಮಿ ನಾರದನ ವೀಣೆಗಾ ಧ್ರುವನ ಸ್ಪರ್ಶವಾಗಿ
ಬಂದ ನಾರದನು ಬಾಲಮನುವಿನೆಡೆ ದಿವ್ಯ ಹರ್ಷವಾಗಿ
ಅಹುದಹುದು ಮೀರೆ ವಿಜ್ಞಾನಧೀರೆ, ಅರವಿಂದ ತೆರೆದಿತಣ್ಣ.
ಪಾಟಲದ ಪಟಲ ನವಸ್ಫೋಟವಾಗಿ ಹೊಸದಾಗಿ ಏಳು ಬಣ್ಣ.

೩

ಭೂಮಿ ಬೆಳೆದಂತೆ ಸ್ವರ್ಗ ಇಳಿದಂತೆ ಕ್ಷಣವು ಪರ್ವವಾಗೆ
ಆನಂದ ಕಟ್ಟಿ ಹೊಸಜೀನ ಹುಟ್ಟಿ ಅವತಾರವಾದ ಹಾಗೆ
ನರನ ಹೃದಯ ನಾರಾಯಣಾಗ್ನಿ ಒಲಿದೀಯೆ ಬಂತು ವರವು
ಮೂರು ಸಪ್ತಕವ ಮೀರಿ ಇರುವಂಥ ಆ ಅಪೂರ್ವ ಸ್ವರವು.

೪

ಸಪ್ತ ಋಷಿಗಳೇಳೆತ್ತು ತಿರುಗುತಿವೆ ಹಾಕಿ ಧ್ರುವದ ಗಾಣಾ,
ಮೇರು ದಂಡದಾ ಇಕ್ಷುರಸವು ಹಿಂಡುತ್ತಲಿಹುದೊ ಜಾಣಾ.
ವಿವಿಧವಾಗಿ ಸಂಚರಿಸಿ ತಾಯಿಯಲಿ ಬ್ರಹ್ಮದೇಕತಾನಾ
ಕರೆಯುತಿಹುದು ಸ್ವರಮೇಳಕಾಗಿ ಗ್ರಹಗೋಲ ವಿಶ್ವಗಾನಾ.

ಭಾವ : ಧ್ರುವ ಮತ್ತು ಸಪ್ತರ್ಷಿಗಳ ದರ್ಶನ ಧ್ಯಾನದಿಂದ ಬಂದ ಭಾವವಿಸ್ತಾರ. ಋತುಗಾನದ ಬೇರೊಂದು ಬಗೆ.

ಶಬ್ದಾರ್ಥ : ಪಾಟಲ=ಪಾದರಿ ಹೂ, ಗಾಣಾ=ಗಾಳ, ಕೊಂಡಿ. ತಾಯಿ=ವಾದನದಲ್ಲಿಯ ವಿಶಿಷ್ಟ ರೀತಿ.

೫೦ ಪ್ರತಿ ವರ್ಷದಂತೆ ಬಂತುಽ, ಶ್ರಾವಣಾ

೧
ಅಹಹಹಾ ಬಂತು ಶ್ರಾವಣಾ
ಜಗದ ಜೀವನಾ
ಕರುಳ ಹೂವಣಾ
ಹೊರಳಿ ಬಂತು
ಹಸಿರಾಗಿ ಪಸರಿಸಿಂತು.

೨
ಇದು ವಿಶ್ವಜೀವದಾಕರ್ಷ
ಹೊಮ್ಮಿತೋ ಹರ್ಷ
ಏನು ಪ್ರತಿ ವರ್ಷ-
ದಂತೆ ಬಂತು
ಮೈದಾಳಿದಂತೆ ಕಂತು.

೩
ಈ ಮೋಡದೊಡ್ಡಿನ ಮ್ಯಾಲಾ
ಮಂಜಿನ ಖ್ಯಾಲಾ
ಹೊಚ್ಚಿಕೊಂಡ ಶಾಲಾ
ಗಿರಿಯ ಜಾಲಾ
ನಿಂತಽದ ಮಳಿಯ ಮ್ಯಾಳಾ.

೪
ಇದು ನೆಲದ ಗರ್ಭದಾ ಹೊನ್ನು
ನೀಲಿ ನೀರನ್ನು
ಕುಡಿದು ಹಸಿರನ್ನು
ಉಗುಳಿತಿಂತು
ಜಗ ನೋಡತಽದ ನಿಂತು.

೫
ಇದು ಎಂಥ ಹಸುರಿನ ಕಂಪ
ತಿಳಿಯದ ತಂಪ
ಮೂರ್ತ ಜಗಜಂಪ
ತೂರ್ತ ಬಂದು
ಮನಪೂರ್ತವಾಗಿ ಸಂದು.

೬
ಬೆಳಿಗೆಲ್ಲಾ ಹಸುರೆ ಕಾರಣಾ
ಹೃದಯದ ಕಣಾ
ಆಗತಾವ ಹೆಣಾ
ಹಸಿರು ನಂದಿ
ಹಸಿ ಹೀರಿ ಬಿಸಿಯ ಹೊಂದಿ.
೭
ಆಹಾ ಭೂಮಿ ತಾಯಿಯ ಉಸಿರು
ಅವಳ ಆ ಬಸಿರು
ಪಚ್ಚೆಯಾ ಹಸಿರು
ಬಂತು ಅರತು
ಬುದ್ಧಿಗೇ ಭಕ್ತಿ ಬೆರತು.
೮
ಭಲ ಏನು ಬನದ ಕಾವಣಾ
ಸುಳಿವ ಭಾವನಾ
ಹೊಳೆವ ಹಾವಣಾ
ಶ್ರಾವಣಾ ಹೌದೋ?
ಇದು ಹೌದು ಶ್ರಾವಣಾ ಹೌದು.
೯
ಬೀಸ್ತಽದ ಶ್ರಾವಣದ ಗಾಳಿ
ಹಿಡಿದ ಹೆಗ್ಗಾಳಿ
ಹೊರಟದಽ ದಾಳಿ
ಶಿವನ ಗಣಕ
ಹುಟ್ಟ್ಯಽದ ಜೀವ ಹೆಣಕ.
೧೦
ಮದಗುಣಕಿ ಊದಿ ತುತ್ತೂರಿ
ಹೇಳತಽದ. ಗರಿ
ಹಾಡು ಇದು ಭಾರಿ
ಆತು ಜನಕ
ಮೆಚ್ಚಾತು ಶಿವನ ಮನಕ.

೧೧

ಶ್ರಾವಣಕ ತಪ್ಪಿತ ಗ್ಯಾನಾ
ಎಲ್ಲಿದೋ ಧ್ಯಾನಾ
ಹುಚ್ಚ ಆಗ್ಯಾನಾ
ಮದೋನ್ಮತ್ತಾ
ಅಂಬಿಕಾತನಯದತ್ತಾ.

ಭಾವ : ಅನೇಕ ಶ್ರಾವಣ ಗೀತಗಳಲ್ಲಿದೊಂದು.

ಶಬ್ದಾರ್ಥ : ಕಂತು=ಚಕ್ರಾಕಾರ, ಆಟದ ಚೆಂಡು. ಅರತು=ಅದಕ್ಕೆ. ಕಾವಣಾ=ಹಂದರ. ಚಪ್ಪರ.

ವಿಶೇಷ : ಲಾವಣಿ ಛಂದದ ರೀತಿಯಲ್ಲಿ ಹಾಡಿ ಆನಂದ ಅನುಭವಿಸಬೇಕು.



೫೧ ಪ್ರೇಮುಬೀಜ

೧
ಇಳೆಯ ಮಕ್ಕಳೆಲ್ಲ ಬನ್ನಿ
ತಾಯ ತವರುಮನೆಗೆ
ಭೇದ ಬಲಿಸಿ ಬಳಲಬೇಡಿ
ಎಂದು-ನನಗೆ ನಿನಗೆ.
೨
ಇದು ಬಿಳಿವೂ ಇದು ಕರಿವೂ
ಹಗಲು ಇರುಳು ಬಣ್ಣಾ
ಕೆಂಪನಿವಾ ಹಳದಿಯವಾ
ಅಂದಚೆಂದವಣ್ಣಾ
೩
ಎದೆಯೊಳದ ರಕ್ತದಲ್ಲಿ
ಭಾವದ ಅನುರಕ್ತಿಯಲ್ಲಿ
ಕಾವಿನ ಚಿತ್‌ಶಕ್ತಿಯಲ್ಲಿ
ಕಂಡ ಶಾಂತಿ ಗೀತ.
೪
ಕರೆದು ಜನ್ಮಮರಣಗಳಿಗೆ
ತಾರಕರಾ ಚರಣಗಳಿಗೆ
ಜೀವಾಂತಃಕರಣಗಳಿಗೆ
ನೀಡಿತು ಸುಪ್ರೀತ.
೫
ಪ್ರೇಮುಬೀಜ ಮೂಲ ನನಗೆ.
ಪ್ರೇಮುಬೀಜ ಫಲದ ಗೊನೆಗೆ

ಭಾವ : ವಿಶ್ವಗೀತ, ಮಾನವೈಕ್ಯ ಭಾವಗೀತ.

ಶಬ್ದಾರ್ಥ : ಅನುರಕ್ತಿ-ಅನುರಾಗ=ಪ್ರೀತಿ, ಪ್ರೇಮ. ತಾರಕ=ದಾಟಿಸುವವ.

ವಿಶೇಷ : ಮನುಷ್ಯಬಣ್ಣಗಳ ಭೇದ ಇರತಕ್ಕದ್ದೇ. ಪ್ರೇಮಭಾವ ಬೆಳೆಸಿಕೊಳ್ಳುವುದು ಅತ್ಯಂತ ಅವಶ್ಯ. ಪ್ರೇಮದ ಬೀಜ, ಪ್ರೇಮದ ಫಲ-ಪ್ರೇಮವೇ.

೫೨ ಓ ತಾಯೆ

೧

ಉಪಕಾರದ ಹೊರೆ ಹೆಚ್ಚಾಗಿ
ತಲೆ ಕುಸಿಯುತ್ತಿಹುದು
ಚಿಂತಾಜ್ವರದಲಿ ಏರಾಗಿ
ಎದೆ ಬೆವರುತ್ತಿಹುದು.

೨

ಮೈಗೇ ಮೈಯೇ ಜಡವೆನಿಸಿ
ಇಳಿಸಲೊ ಎನಿಸುವದು.
ಜೀವವು ಆಜ್ಞೆಗೆ ಕಾಯುತ ತಾಯೀ
ನಿನ್ನನೆ ನೆನೆಸುವದು.

ಭಾವ : ಭಕ್ತಿಗರ್ಭಿತವಿರದಿದ್ದರೆ ಇಂಥ ಖೇದ ಭೀಷಣ ಹಾಗೂ ಅನಾರೋಗ್ಯಕರ.

ಶಬ್ದಾರ್ಥ : ಏರಾಗಿ=ಹೆಚ್ಚಾಗಿ.



೫೩ ಇರುವೆ-ಅರಿವೆ


೧
ಇರುವೆ, ಇರುವೆ, ಅರಿವೆ, ಅರಿವೆ
ಅಸರಂತವು ಎನುವೆ.
ಎಲ್ಲಿರುವೆ ? ಏನರಿವೆ ?
ಏ ತನುವೇ, ತನುವೇ !

೨
ನಿನಗೆ ನೀನನನ್ಯನೆನಲೋ ?
ನನಗೇ ನಾನನ್ಯ ?
ಅಹಂಮನ್ಯ ವಿಶ್ವದನ್ಯ
ಹೇಳು ಸ್ವಯಂಧನ್ಯ !

೩
ಈಗಿದ್ದರೆ ಈಗಿಲ್ಲಾ
ಅಲ್ಲಿದ್ದರೆ ಇಲ್ಲಿ
ಅರಿವಿನೊಳೇ ಇರವಿದೆಯೋ ?
ಇರವಿದೆ ಅರಿವೆಲ್ಲಿ ?

ಭಾವ : ಸತ್-ಚಿತ್ ಇರುವುದರ ಅರಿವಿನ ವಿವೇಕ. ಇರುವಿನ ತಕ್ಕ ಅರಿವು ಅರಳಿಲ್ಲ. ಅರಿವು ಇರುವೆಯಷ್ಟಿದೆ.

ಶಬ್ದಾರ್ಥ : ಅಸರಂತ=ಯಾವಾಗಲೂ, ನಿರಂತರ. ಅನನ್ಯ=ಅದ್ವಿತೀಯ, ಏಕನಿಷ್ಠ ಬೇರೆ ಇಲ್ಲದ.



೫೪ ಇದೇ ದೇವ

೧

'ಇದೆ' ಇದುವೆ 'ದೇವ',
'ಇದು' ಅದರ 'ಭಾವ'

೨

'ಇದಿರ್' ಉಸುರೆ 'ವೇದ'
ಮಾತದರ ಭೇದ.

೩

ಇದಿರಿಚ್ಛೆ ದೈವ
ಗೆಲುವೇ ಸದ್ದೈವ.

೪


ಇಲ್ಲಿಲ್ಲವಾದ
ಆ ಸುಸಂವಾದ

೫

ಸುಪ್ರೀತಿಗೀತ
ನಿರ್ಭೀತನೀತ.

ಭಾವ : ನಾದಾನುಸಂಧಾನ ಹಾಗೂ 'ಅಕ್ಷಿ' ಭಾವಾನುಸಂಧಾನ.

ಶಬ್ದಾರ್ಥ : ನೀತ=ಮಾರ್ಗದರ್ಶಕ.



೫೫ ಮೋಡ

೧

ಬೆವತಿತ್ತು ಮೈ ಎಂದು ಕಣ್ಣನೆತ್ತಿದೆ ಮೇಲೆ
ಅದೊ, ಅಲ್ಲಿ ಮುಖದಾಕಾರ ಮೋಡ ಮೂಡಿದೆ ಒಂದು.
ತಲೆಕೆದರಿಕೊಂಡಿದೆ, ಟಗರುಗೂದಲು, ರೀತಿ
ಶುದ್ಧರಾಣಗನಂತೆ, ಬಾನು ಕಾಳೆಗ ಬಯಲು-
ಆನೆದಲೆ, ಸರ್ಪಮುಖ, ಲಂಬಕರ್ಣನ ತಂದೆ,
ಅಮ್ಮಮ್ಮ ಮಾಮಾಯಿ ಲಂಗ ಹಾರುತ್ತಲಿದೆ-

೨

ಯಾರದೀ ದಂಡು ಏತಕ್ಕಾಗಿ ಕೂಡಿದೆ ಇಂದು?
ಪ್ರಳಯಪೂರ್ವದ ರೌದ್ರ, ಸದ್ದಿಲ್ಲದೀ ಸಂಚು
ಯುದ್ಧ ಬಡಕರ ಶುದ್ಧಶಾಂತತಾವಾದದೊಲು
ಪರಿಣಾಮ ಬೇಸುರವಲಾ! ಈ ಮಹಾಕೂಟ-
ನೋಟವೇ ಇಂತಿರಲು ಆಟ ಎಂತದೊ ಮುಂದೆ?
ಮಜ್ಜಿಗೆಯ ಮೇಲ್ ತೇಲಿ ಬೆಣ್ಣೆಯಂತೆ ಸಲೀಲ-
ಕಣ್ಮಂಚಿ ಕರೆಯುತಿದೆ ಓಹೊ ಘನ ಘನ ನೀಲ!

ಭಾವ : ಪ್ರತಿಮಾ ಧ್ಯಾನಜನಿತ ಮೋಡ.

ಶಬ್ದಾರ್ಥ : ರಾಣಗ-ರಣ-ರಾಣಕ=ರಣಾಂಗಣದಲ್ಲಿ ಶೋಭಿಸುವ. ಲಂಗ=ಹೆಣ್ಣುಡುಗೆ. ಬೇಸುರ=ಅಪಸ್ವರ. ಸಲೀಲ=ನೀರು.

ವಿಶೇಷ : ಇಂಥ ಒಂದು ಮೋಡ ಕಂಡು ಶ್ರೀ ರಾಮಕೃಷ್ಣ ಪರಮಹಂಸರಿಗೆ ಸಮಾಧಿ ಸ್ಥಿತಿ ಪ್ರಾಪ್ತವಾಗಿರಲು ಸಾಕು.

೫೬ ಮಿಂಚು

ಬಾನ ಬರಸಿಡಿಲಲ್ಲ ಕೆಮ್ಮಿಂಚು ಹೊಮ್ಮಿಂಚು
ಅಬ್ಬ! ವಜ್ರದ ಮಿಂಚು, ನೇತ್ರಪಲ್ಲವಿಯ ಈ
ತಂತ್ರ ಬಲ್ಲವರಾರು? ಏನೇನೊ ಬರೆಬರೆದು
ಮತ್ತೆ ಅಳಿಸಿದ ಹಾಗೆ ಮಾಯವಾಗುತ್ತಲಿದೆ.

೨


ತತ್‌ಕ್ಷಣಕೆ ಕಾಣದಾಗುವ ಈ ನಿರೀಕ್ಷಣದ
ವೇಗದಲಿ ಆವ ಸಂದೇಶವಿದೆ ? ಹಾ ! ಮೂಢ.

೩

ಮೇಘನಾದನ ಹೆಗಲ ಅಪ್ಸರೆಯಪಾಂಗದೀ
ಪಾಂಗು ಗಗನಾಂಗನೆಯ ಪ್ರಾಯದ ಅಭಿಪ್ರಾಯ !
ನೀರ ಉಗೆ ಹೊಗೆಯಲ್ಲಿ ಬೆಂಕಿ ಅಡಗಿರಬಹುದೆ ?

ಭಾವ : ಪ್ರತಿಮಾ ಧ್ಯಾನಜನಿತ ಮಿಂಚು.

ಶಬ್ದಾರ್ಥ : ಅಪಾಂಗ=ಕಡೆಗಣ್ಣನೋಟ. ಪಾಂಗು=ರೀತಿ, ಆಕಾರ, ಸಾಮ್ಯ.



೫೭ ಕಿಡಿ

೧

ಸಾಕು ಒಂದು ಮೊಗ್ಗು ಕಿಡಿ
ವಿಶ್ವಕದುವೆ ಹಿಗ್ಗು ಗುಡಿ.
ಕಡಲು ತೆರೆಯ ಕನ್ನಡಿ.

೨

ಬೊಗಸೆ ತುಂಬ ಬಾನು.
ಅದರೊಳಿದ್ದೆ ನಾನು.
ಅಲ್ಲೆ ಇದ್ದೆ ನೀನು.
ಕೋಟಿ ಕೋಟಿ ಕೋಟಿ ಮೀನು
ಉಪ್ಪುನೀರು ಕೊರತೆಯೇನು.
ಪುಟ್ಟ ಬಾಯಿ ಪುಟ್ಟ ತುಟಿ
ಪುಟ್ಟ ಬಾಲ, ಪುಟಿಪುಟಿ.
ಒಲೆತ. ಅಲೆತ, ನಲಿತವೊ !
ಎಲ್ಲಿ ಇದನು ಕಲಿತವೊ ?

೩

ಒಹೋ ಇಲ್ಲೆ ಹುಟ್ಟುಗಣ್ಣು
ನಿದ್ರೆ ಇದನು ಮುಚ್ಚದು.
ಇದುವು ಹೊಸತು ಹೊಚ್ಚದು.
ಈ ಕರಾಳ ಆಳದಲ್ಲಿ
ಪ್ರಳಯದೀ ಪಯೋಧಿಯಲ್ಲಿ
ಏನ ಕಂಡು ಬಾಳಿತೋ
ಯಾವ ಬದುಕನಾಳಿತೋ
ದೂರದಾ ದಿಗಂತದಲ್ಲಿ
ಎಂಥ ಚುಕ್ಕಿ ಕಂಡಿತೋ !

ಭಾವ : ಕಿಡಿಯಲ್ಲಿ ಅಡಗಿರುವ ಬೃಹತ್ ಶಕ್ತಿಯ ವರ್ಣನೆ.

ಶಬ್ದಾರ್ಥ : ಕಿಡಿ=ಧ್ಯಾನಜನಿತ. ಮೀನ=ನಕ್ಷತ್ರ. ಕಣ್ಣು=ಜೀವ, ಈಶ.

೫೮ ಪಾರ್ವತಿ ನೀನೇ ಸಲಹು

೧
ಈಶ್ವರ ನಿರ್ಮಿಸಿದೀ ಸೃಷ್ಟಿಯನು
ಪಾರ್ವತಿ! ನೀನೇ ಸಲಹು
ನಿನ್ನದೆ ಈ ನೆಲ, ನಿನ್ನದೆ ಈ ಜಲ
ನಿನ್ನದೆ ಕನ್ನಡ ಗೆಲಹು.

೨
ಒಲಿವ ಲಿಂಗವೇ ಚೆಲುವ ಲಿಂಗವೇ
ನಲಿವ ಲಿಂಗವೇ ನೀ ತಾಯಿ.
ಕನ್ನಡ ಬೀಜವ ಹೂವಾಗಿಸಿದೆ
ಹಣ್ಣಾಗುವವರ ನೀ ಕಾಯಿ.

೩
ಪಾರ್ವರ ಪಾರಿಕೆ ತ್ರೀನೇತ್ರ ಶಿಖೆಯೊಲು
ಉತ್ತರೋತ್ತರವು ಮೇಲು ಮುಖ.
ಪ್ರತಾಪವಿಲ್ಲದ ತಾಪ ಬೆಳೆಸುವಾ
ಹುಸಿ ತಪಸ್ಸಿನಲಿ ಏನು ಸುಖ?

೪
ಬಡಗಣ ತೆಂಕಣ ಪಡುವಣ ಮೂಡಣ
ನಡುವಣ ಕನ್ನಡ ಪಂಚಶಿಖ.
ಪರಮೇಶ್ವರನೊಲು ಪ್ರಪಂಚ ಪ್ರಕಟಿಸಿ
ವ್ಯದೋರಿತು ಇಗೊ ಪಂಚಮುಖ.

೫
ಜೈನರ ಕಾವ್ಯದ ಶರಣರ ವಚನದ
ದಾಸರ ಹಾಡಿನದೀ ನಾಡು.
ವಿಶ್ವದ ಕಬ್ಬದ ಹಬ್ಬಹುಣ್ಣಿವೆಗೆ
ಕನ್ನಡ ಹೃದಯವ ಹದ ಮಾಡು.

೬
ಹಾಡಿಗೆ ತಕ್ಕಾ ರಾಗವು ಬೇಕು
ರಾಗಕೆ ತಕ್ಕಾ ಅನುರಾಗ.
ಹೇಳುವವರಲೂ ಕೇಳುವವರಲೂ
ರಸಪರಿಣಾಮದ ಸಮಯೋಗ.

೭
ಕರ್ನಾಟಕವನು ಕಡೆದರು, ಹೊರಟಿತು
ಕನ್ನಡವೆನ್ನುವ ನವನೀತ.
ಹೃದಯದ ಮರ್ಮವ ಮಿಡಿದರೆ ಬರುವೊಲು
ನಾದದಿಂದ ಅನುಭವಗೀತ.
೮
ಕನ್ನಡ ನುಡಿದಿತು ಕನ್ನಡ ಹಕ್ಕಿ
ಕನ್ನಡವೆಂದಿತು ಆ ಗೋದೆ.
ಕಾವೇರಿಯು ತಂಪಾಯಿತು, ಕನ್ನಡ
ಗಾಳಿಯು ಉಸಿರಿತು ಈ ಬೋಧೆ;
೯
ಜಿನ ಹರಿ ಅಲ್ಲಾ ಶಿವನೇ ಬಲ್ಲಾ
ಒಬ್ಬನಲ್ಲದೇ ಎರಡಿಲ್ಲಾ!
ಜೀವದೇವನೊಂದಾವಣೆ ಇಲ್ಲದ
ನೀರಿಲ್ಲದ ನೆಲ ಬರಡಲ್ಲಾ.
೧೦
ಅರ್ಪಣವಿಲ್ಲದೆ ಪ್ರಸಾದವಿಲ್ಲಾ,
ತರ್ಪಣವಿಲ್ಲದೆ ಶ್ರಾದ್ಧ ಗಡಾ?
ದರ್ಪಣವಿಲ್ಲದೆ ದರ್ಶನವಿಲ್ಲಾ
ಯೋಗದ ತೇರಿಗೆ ಶ್ರದ್ಧೆ ಬುಡ!
೧೧
ಈಶ್ವರನೊಲುಮೆಗೆ ಶ್ರದ್ಧೆಯೆ ಮೂಲ.
ಅವನೊಡಗೂಡಲು ಶಕ್ತಿ ಬಲ.
ಆತ್ಮದಿ ಶ್ರದ್ಧೆಯು ಪ್ರಸಾದ ಪಡೆಯಲು
ಬೇಕಾಗಿರುವದು ವೀರಛಲ.
೧೨
ಅಶಿವವು ಎಂಬುದು ಬಾಳುವೆ ಅಲ್ಲ.
ಅಶಕ್ತವೆಂಬುದು ಬದುಕಲ್ಲ.
ಅನೀಶವೆಂಬುದು ರಾಜ್ಯವೆ ಅಲ್ಲ.
ಅಭಕ್ತವಾದರೆ ಇರಸಲ್ಲ.

೪೦ ಆಡಿ ಫಲವೇನು?

ಆಡಿ ಫಲವೇನು ಆಗದ ಮಾತ ? ಬಿಂಬವೇ
ತೋಡಿ ಫಲವೇನು ತೀರದ ದುಃಖವ ? ॥ ಪಲ್ಲವಿ ॥

೧

ನೋಡಿ ಫಲವೇನು ನಿಲುಕದ ನೆಲೆಯ ? ಬಿಂಬವೇ,
ಮಾಡಿ ಫಲವೇನು ಮುಗಿಯದ ಯತ್ನವಾ ?॥
ಕಾಡಿ ಫಲವೇನು ಕರಗದ ಕರುಳ ? ಬಿಂಬವೇ
ಹಾಡಿ ಫಲವೇನು ಹಿಗ್ಗದ ಬಗೆಗಳ ?

೨

ಬಾಡಿ ಫಲವೇನು ಬಯಲಿನ ಮುಂದೆ ? ಬಿಂಬವೇ
ಬೇಡಿ ಫಲವೇನು ಬಾರದ ವಸ್ತುವ ?
ಮೂಡಿ ಫಲವೇನು ಮುಸುಕಿನ ಹಿಂದೆ ? ಬಿಂಬವೇ
ಹೂಡಿ ಫಲವೇನು ? ಹೊಳೆಯದ ಆಟವ ?

೩

'ಫಲವೇಂ ಫಲವೇಂ' ಎಂದು ಕೇಳುವೀ ಖೋಡಿ ಜೀವಕೆ।
'ಒಲವೇ ಹಲವೇಂ' ಎಂದು ಹೇಳಬಾರದೆ ದೇವನೆ॥

ಭಾವ : ಸಾಧನೆಯ ಕಾಲದ ಪ್ರಾರ್ಥನೆ.

ಶಬ್ದಾರ್ಥ : ಬಿಂಬ=ಮೂಲರೂಪ, ಮೂಲಮೂರ್ತಿ.

೪೧ ಕನ್ನಡದಪ್ಪನ ಕೋಲು



೧

ಕೋಲುಕೋಲಿನ ಆಟ, ಕೂಡಿ ಕೊಳಲಿನ ಕೂಟ
ರಾಸಲೀಲೆಯ ಕೋಲ।
ಬಾಲಬಾಲೆಯರಾಟ, ಸೂತ್ರ ತಾಯಿಯ ನೋಟ,
ಹಾಸಶೀಲೆಯ ಕೋಲ॥

೨

ನವ್ಯನಂದನ ಮಾಟ, ದಿವ್ಯ ಹೃದಯದ ತೋಟ,
ಕರುಳವಳ್ಳಿಯ ಕೋಲ।
ಕಾವ್ಯರಸದ ಕೂಟ, ನೇಹದುಸುರಿನ ತೀಟ,
ತಿರುಳು ಮಲ್ಲಿಗೆಯ ಕೋಲ॥

೩

ಕೂಟರಾಜನ ಗಾಡಿ, ನಟರಾಜನ ನೋಡಿ,
ಚಿದಂಬರದಿ ಕೋಲ।
ಬೇಟದಾಟವನಾಡಿ, ಬೆಳ್ಳಿದಿಂಗಳು ಮೂಡಿ
ಹೃದಂಬರದಿ ಕೋಲ॥

೪

ತಂತ್ರಯುಕ್ತಿಯ ಕೋಲ, ರಾಗದುಕ್ತಿಯ ಕೋಲ,
ಪ್ರೇಮಭಕ್ತಿಯ ಕೋಲ॥
ಯಂತ್ರಶಕ್ತಿಯ ಕೋಲ, ತ್ಯಾಗಭುಕ್ತಿಯ ಕೋಲ,
ಲೀಲಾಮುಕ್ತಿಯ ಕೋಲ॥

ಭಾವ : ಕನ್ನಡ ರಾಷ್ಟ್ರಗೀತೆ ಜಾನಪದದ ಛಂದದಲ್ಲಿ.

ಶಬ್ದಾರ್ಥ : ಹಾಸಶೀಲೆ=ಹಾಸ್ಯದ ನಡೆತೆಯುಳ್ಳ. ತೀಟ=ಬೀಸುವಿಕೆ.

೪೨ ಚೆನ್ನಲಿಂಗವೇ

ಮಾತಾಡೋ ಮಾತಡೊ ಲಿಂಗವೇ।ನೀ।
ಮಾತಾಡಲೊಲ್ಲೇಕೊ ಲಿಂಗವೇ ॥ ಪಲ್ಲವಿ ॥
ಮಾತಿನ ತಾಯಾದ ಮೌನದ ಬಸುರಲಿ।
ಹೂತೆಯಾ ಹೇ ಚೆನ್ನಲಿಂಗವೇ ॥ ಅನುಪಲ್ಲವಿ ॥

೧
ಪರೆಯ ಮರೆಯಲ್ಲಿಹ ಲಿಂಗವೇ। ನೀ।
ಪರೆಯುಚ್ಚಿ ಬಹೆಯೆಂದು ಲಿಂಗವೇ ॥
ಹರೆಯ ಪರೆಯನ್ನೂದಿ ಹಿರಿಯ ಹಿಗ್ಗನ್ನೆಂದು।
ಹರಹುವಿ ಹೇ ಚೆನ್ನಲಿಂಗವೇ ॥

೨
ಪೆರ್ಮೆಯ ಮಾತಲ್ಲ ಲಿಂಗವೇ। ತಿಳಿ
ಕೂರ್ಮೆಯ ಮಾತಿದು ಲಿಂಗವೇ ॥
ಸೂರ್ಮ್ಯೆಯ್ಯ ತಳೆದಂತೆ ತೆರೆತೆರೆಯಾಗಲಿ
ಊರ್ಮಿಯ ಹೇ ಚೆನ್ನ ಲಿಂಗವೇ ॥

೩
ಕೇಳಿ ಬಲ್ಲೆನು ಕೇಳು ಲಿಂಗವೇ। ನೀ।
ಹೇಳುವೆಯಾ ಹೇಳು ಲಿಂಗವೇ ॥
ಆಳು ತಿಳಿಯದ ಯಾವ ಬಾಳಿನಲ್ಲಾ ದೇವಿ।
ಆಳುವಳು ಹೇ ಚೆನ್ನಲಿಂಗವೇ ॥

೪

ಆಡಿದ ನುಡಿಗಿಂತ ಲಿಂಗವೇ। ನೀ।
ಹಾಡಿದ ನುಡಿ ಲೇಸು ಲಿಂಗವೇ॥
ನೋಡಿದ ಕೂಡಿದ ಎದೆಯಲ್ಲಿ ಆ ರೂಪು
ಮೂಡೀತು ಹೇ ಚೆನ್ನಲಿಂಗವೇ॥

ಭಾವ : ಮೌನಲೀನ ಗೆಳೆಯ ಮಧುರಚೆನ್ನನನ್ನು ಕುರಿತು ಬರೆದದ್ದು.

ಶಬ್ದಾರ್ಥ : ಹೂತೆ=ಅರಳಿದೆ. ಪರೆ=ಪರಾವಾಣ, ಹಾವಿನ ಪರೆ, ಪದರು, ಬೆಳಗಿನಜಾವ.

ವಿಶೇಷ : ಮಧುರಚೆನ್ನರ ಜೀವಿತ ಕಾಲ-೩೧-೭-೧೯೦೩ ರಿಂದ ೧೫-೮-೧೯೫೩. ಪ್ರಥಮ ಪುಣ್ಯ ತಿಥಿ ೧೯೫೪. ಅಂದೇ ರಚಿಸಿ ಅಂದೇ ಹಸಲಂಗಿಯಲ್ಲಿ ಓದಿದ್ದು. 'ಆತ್ಮ ಸಂಶೋಧನೆ'ಗೆ ಮುನ್ನುಡಿ ಬರೆಯುವ ಕಾಲಕ್ಕೆ ಉತ್ಸ್ಫೂರ್ತವಾದ ಕವನ.

ಈ ವರೆಗಿನ ಮುದ್ರಣಗಳಲ್ಲಿ ನುಡಿ-೨ ಮುದ್ರಣಗೊಂಡಿಲ್ಲ. ಆತ್ಮಸಂಶೋಧನೆಗೆ ಬರೆದ ಮುನ್ನುಡಿಯಲ್ಲಿ ಇದೆ.

೪೩ ವಿನೀತ ರಾಮಚಂದ್ರ

೧

ಕರುವಿನ ಕರೆ ಕೇಳಿ ತೊರೆಗರೆಯದ ಹಸು
ಇರಬಹುದೇನೆಲ್ಲಿ ರಾಮರಾಮಾ
ಮರುಗುವ ಮರಿಗಾಗಿ ಎರಕವನೆರೆಯದ
ಮರುಕವು ಮರುಕವೆ ರಾಮರಾಮಾ

೨

ಮರುಗು ಮರುಕವು ಕೂಡಿ ಎರಡಲ್ಲ ಒಂದಹುದು
ಎರಕ ಹೊಯ್ದಂತದು ರಾಮರಾಮಾ
ಮರುದನಿ ಸರದಂತೆ ನೆರವಾಗಿ ಇರುವವು
ಎರವಾಗಬಹುದೇನು ರಾಮರಾಮಾ

೩

ಮಗುವು ನೀರಡಿಸಿರೆ ಶರದಿಂದ ಕರೆಯಲು
ಲಗುಬಗೆಯಿಂದಲಿ ರಾಮರಾಮಾ
ಮುಗಿಲಿಗೆ ಪಾರ್ವಂತೆ ಪಾತಾಳಗಂಗೆಯು
ನೆಗೆದಳೂಟೆಯಾಗಿ ರಾಮರಾಮಾ

೪

ಅಂಬುವನೆಸೆದರು ಅಂಬುವನೆ ಕರೆಯುವ
ಅಂಬೆಯೆ ಅಂಬೆಯು ರಾಮ ರಾಮಾ
ಬೆಂಬಲವಿಲ್ಲದ 'ಹಂಬಾ' ಎಂಬಾ ಕರೆಯ
ಹಂಬಲದರ್ಥವೇನ್ ರಾಮರಾಮಾ?

೫

ತುಂಬಿಯಂತಂಬೆಯು ಮರುಗಿನ ಹೂನೀರ
ಚುಂಬಿಸಿದೊಡನಲ್ಲಿ ರಾಮರಾಮಾ
ತುಂಬೆಲ್ಲ ಮರುಕದ ಜೇನು ತುಂಬುವದೇನ-
ಸಂಭವವೇ ಹೇಳು ರಾಮರಾಮಾ

೬

ಮಡಿ ನೀಡು ಎಂದಂದೂ ಅಡಿಗಡಿಗೆ ನುಡಿಯುವ
ಕಡುಮುಮತೆಯ ತಮ್ಮ ರಾಮರಾಮಾ
ಮಡುವಾಗು ನಲ್ಲಮ್ಮ ಒಕ್ಕಲಿಹ ಮಡಿವಳಿತಿ
ಮಡಿಗೊಳಿಸೆನ್ನಂದೆ ರಾಮರಾಮಾ

೭
ತೀರ್ಥರೂಪನು ನೀನು ತೀರ್ಥವಾಗುವದೇನು
ಸಾರ್ಥಕವಲ್ಲವೆ ರಾಮರಾಮಾ
ಸಾರ್ಥಪರಮಾರ್ಥದ ವೀಥಿಯ ತೋರೆಂದು
ಪ್ರಾರ್ಥಿಸಿದೆನವಳ ರಾಮರಾಮಾ
೮
ಕಲೆ ತೊಳೆದು ಬೆಳಗುವ ಕೈಯು ಕೆಸರೆಂಬಂತೆ
ಮಲಿನವಾಗಲು ಬಹುದೆ ರಾಮರಾಮಾ
ಮಲೆತದ್ದು ಮಾಸಿದ್ದು ಕಳೆಯುವ ಮಡಿವಳ
ಹೊಲೆಯಾಗಿ ಸಾಗೀತೇ ರಾಮರಾಮಾ
೯
ಮುಟ್ಟು ಮೈಲಿಗೆಯುಳ್ಳ ತಟ್ಟ ಮೈಲಿಗೆಯಾದ
ಕೆಟ್ಟು ಮೈಲಿಗೆಯಿರುವ ರಾಮರಾಮಾ
ಮೊಟ್ಟೆಯ ಮಡಿವಳ ಜಗದ ಪಾತಕಗಳ
ತೊಟ್ಟ ಪರಮೇಶ್ವರಿ ರಾಮರಾಮಾ
೧೦
ಕಲುಷದ ತವರೂರು ಮಣ್ಣಿನ ಬಸುರಲಿ
ಸೆಲೆನೀರಿನಂತಿಹಳು ರಾಮರಾಮಾ
ಮಲಿನದ ನೆಲೆವೀಡು ಮಾಂಸದ ಮನೆಯಲಿ
ಮೊಲೆಹಾಲಿನಂತಿಹಳು ರಾಮರಾಮಾ
೧೧
ಮೈಲಿಗೆ ಎಂಬುದನು ಮೈದಾಟಗೊಡದಂಥ
ಶೈಲಿಯನು ಕಲಿಸೆಂದೆ ರಾಮರಾಮಾ
ಕಾಲಿಗೆ ಬಿದ್ದೆನು ಕೈಮುಗಿದು ಇದ್ದೆನು
ನಾಲಿಗೆ ಬಿಗಿದಿಟ್ಟು ರಾಮರಾಮಾ
೧೨
ಉಟ್ಟ ಬಟ್ಟೆಯೊಂದೇ ತೊಟ್ಟ ಬಟ್ಟೆಯೊಂದೇ
ಮುಟ್ಟಬೇಕಾದಂಥ ರಾಮರಾಮಾ
ಬಟ್ಟೆಯೊಂದೇ ಉಂಟು ಜಗದೆಲ್ಲ ಮಡಿವಳರ
ಬಟ್ಟೆಯೊಂದೇ ಐಸೆ ರಾಮರಾಮಾ

೧೩
ಕಡೆಯ ಲೋಕದೊಳಿಹ ಕರುಳ ಮಡಿವಳ ಗಂಗೆ
ಜಡೆಬಟ್ಟು ಕೆಳಗಿಳಿದು ರಾಮರಾಮಾ
ಅಡಿಯ ಉಂಗುಟದಿಂದ ಮುಡಿಯ ಬಾಗಿಲು ತೆರೆದು
ಕುಡಿವಾಲಿನಂದದಿ ರಾಮರಾಮಾ
೧೪
ಮೀಸಲ ತೊರೆಯಾಗಿ ಈಸಲ ಬಂದಿದೆ
ಸೂಸಲ ನೆರೆಯಲ್ಲಿ ರಾಮರಾಮಾ
ಬೀಸಲು ಮನದಲ್ಲಿ ಉತ್ಸಾಹ ಜೀವಾಳ
ಈಸಲು ಬಿದ್ದಿತು ರಾಮರಾಮಾ
೧೫
ಪಕ್ಷಿತೀರ್ಥದ ಮೇಲೆ ಪಾಯಸವಿಡುವಂತೆ
ಪಕ್ಷಿಗಳಿಗಾಗೆಂದು ರಾಮರಾಮಾ
ನಕ್ಷತ್ರದೊಡೆಯನು ನಿನಗಿಲ್ಲಿ ಪಾವಿತ್ರ್ಯ
ಅಕ್ಷಯವಾಗಿಡಲಿ ರಾಮರಾಮಾ
೧೬
ಅಣ್ಣಿಯಗಡಲಿನ ತಣ್ಣನ್ನ ತಿಳಿಯಲ್ಲಿ
ಬೆಣ್ಣೆಯಾಗುತ ತೇಲು ರಾಮರಾಮಾ
ಅಣ್ಣನ ಮಣ್ಣನ ಮೈಯಂತು ಮೈಯೆಲ್ಲ
ಕಣ್ಣಾಗಿ ಹೊಳೆಹೊಳೆ ರಾಮರಾಮಾ
೧೭
ತಾಯ್ಗರೆದ ಕಂಬನಿ ಬಾಯ್ದೆರೆದ ಸಿಂಪಿನಲಿ
ಕಾಯ್ಗೊಂಡು ಹಣ್ಣಾಗಿ ರಾಮರಾಮಾ
ಮೈಗರೆದ ಮುದ್ದಲ್ಲಿ ಮೈದೆರೆದು ಮುತ್ತಹುದು
ಕೈಯ್ಗ್ಗರಿಯಾರಿವಳು ರಾಮರಾಮಾ
೧೮
ಕಡಿಯಂತು ಕಡಿಯೆಲ್ಲ ಹುಡಿಯಂತು ಹುಡಿಯೆಲ್ಲ
ಹುಡಿಯ ಗೂಡಹುದೈಸೆ ರಾಮರಾಮಾ
ಗುಡಿಯು ಮುಡಿಯು ನಾಡು ಎಂದೆಂಬ ಜಾಣರ
ನುಡಿಯು ಒಳವೇನಿಹುದು ರಾಮರಾಮಾ

೧೯

'ಮಡಿಯ ಕುಡಿಗೇ ಗುಡಿ ಗುಡಿಯ ಅಡಿಗೇ ಮಡಿ'
ನುಡಿಯೊಂದು ದಿಟವುಂಟು ರಾಮರಾಮಾ
ಕಡೆಮುಟ್ಟುವೀ ಮಾತು ನನ್ನ ಪಾಡಿನ ಪಲ್ಲ
ಕಡೆವರೆಗಾಗಿರಲಿ ರಾಮರಾಮಾ

೨೦

ಮೀಟಾದ ಮಡಿಯೊಂದು ನಿಖಿಲ ಪಂಥಕ್ಕೆಲ್ಲ
ಕೂಟನಂತಿರುವದು ರಾಮರಾಮಾ
ಕೂಟಕೂಟಗಳುಂಟು ಜೀವ ಜೀವಾಳದ
ಬೇಟದ ಪರಿಯಂತೆ ರಾಮರಾಮಾ

('ರಾಮರಾಮಾ' ಎಂಬ ಶೀರ್ಷಿಕೆ ಇತ್ತು)

ಭಾವ : ಗೆಳೆಯ ವಿನೀತ ರಾಮಚಂದ್ರ (ಬೆಳಗಾವಿ) ರಾಯರ ಕರೆಗೆ ಓಗೊಟ್ಟು ಅವರ ಎಳೆತನದಲ್ಲಿ ಅವರಿಗಾಗಿ ಬರೆದ ಪ್ರಾರ್ಥನೆ.

ಶಬ್ದಾರ್ಥ : ಮರುಗು=ಮನಸ್ಸು ಕರಗು. ಮರುಕ=ದುಃಖ, ಅನುಕಂಪ. ಎರವಾಗು=ದೂರವಾಗು. ಪಾರ್ವಂತೆ=ಹಾರುವಂತೆ. ಊಟೆ=ನೀರಿನಬುಗ್ಗೆ. ಅಂಬು=ಬಾಣ. ನೀರು. ವೀಥಿ=ಮಾರ್ಗ. ಐಸೆ-ಐಸಲೆ=ಅಲ್ಲವೆ. ಸೂಸಲ=ಕಾಣಿಸಿಕೊಳ್ಳುವಿಕೆ. ಅಣ್ಣೆ=ಉತ್ತಮವಾದ ಹಾಲು. ಮೀಟಾದ=ಶ್ರೇಷ್ಠವಾದ.

ವಿಶೇಷ : ಈ ಕವನದ ರಚನೆ ೧೯೨೫ ರಿಂದ ೧೯೩೯ರ ಮಧ್ಯದ ಕಾಲದ್ದು. ವಿನೀತ ರಾಮಚಂದ್ರ ರಾಯರ ಮನೆಯಲ್ಲಿ ಬೇಂದ್ರೆಯವರು ಕೆಲವು ದಿವಸ ಬಾಡಿಗೆ ಇದ್ದರು. ಗೆಳೆಯರ ಗುಂಪಿನ ಸದಸ್ಯರಾಗಿದ್ದ ಇವರು ಪ್ರದೀಪ ಎಂಬ ಅಧ್ಯಾತ್ಮಿಕ ಪತ್ರಿಕೆಯನ್ನು ಅನೇಕ ವರ್ಷ ನಡೆಸಿದರು. ಪುಟಪರ್ತಿ ಸಾಯೀಬಾಬಾ ಮಂಡಳದ ಧಾರವಾಡದ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದರು.



೪೪ ಹರಕೆ

೧
ಎರೆಯುವೆನು ಬಾ ನಿನ್ನ, ನಮ್ಮ ಪಟ್ಟದ ಮರಿಯೆ
ಸಕಲ ತೀರ್ಥದ ಕ್ಷೀರ ನೀರ ತಂದು.
ಬೆರಗಾಗಿ ಬೆರೆತು ಆ ಶಿವನಲ್ಲಿ ದೇವನಲಿ
'ಪಡೆದಪ್ಪನಾಗು' ಎಂದು.
೨
ನಿಃಸಂಗಳಿದ್ದ ಈ ಗುಪ್ತಗಂಗೆಯ ನನ್ನ
ಶಾಲ್ಮಲೆಯ ನೀರ ತಂದು.
ನಿಃಶಂಕನಾಗಿ ಬೆರೆಯೆಂದು ಎರೆಯುವೆನಿಂದು
'ಪಡೆದಪ್ಪನಾಗು' ಎಂದು.
೩
ಹರಿಹರರ ಕಾಲ್ತೊಳೆವ ದಕ್ಷಿಣದ ಗಂಗೆಯೀ
ತುಂಗಭದ್ರೆಯ ಪುಣ್ಯಜಲವ ತಂದು.
ಎರೆಯುವೆನು ನಿನ್ನನ್ನು ಸಮರಸಿಯು ಆಗೆಂದು
'ಪಡೆದಪ್ಪನಾಗು' ಎಂದು.
೪
ನಮ್ಮ ತಾಯಿಯ ಸೆರಗಿನಂಚಾಗಿ ಹರಿದಿದ್ದ
ಭವ್ಯಗೋದೆಯ ದಿವ್ಯಜಲವ ತಂದು
ತಮ್ಮ! ಎರೆಯುವೆ ಸೆರಗುಬೆರಗಿಲ್ಲದಂಥ ಕಲಿ-
'ಪಡೆದಪ್ಪನಾಗು' ಎಂದು.
೫
ನಮ್ಮ ತಾಯಿಯ ದಿವ್ಯ ಶ್ರೀರಂಗ ಪಾದವನು
ತೊಳೆವ ಕಾವೇರಿಯಾ ನೀರ ತಂದು
ತಮ್ಮ! ಎರೆಯುವೆನು ಶ್ರೀಪಾದರೇಣುವೆ ಬಾರೊ
'ಪಡೆದಪ್ಪನಾಗು' ಎಂದು.
೬
ಇಟ್ಟಿಗೆಯ ಮೇಲೆ ಅಡಿಯಿಟ್ಟ ವಿಟ್ಠಲನನ್ನು
ಬಿಟ್ಟು ಮುಟ್ಟುವ ನದಿಯ ನೀರ ತಂದು
ಮೆಟ್ಟು-ಭಕ್ತಿಯ ಮೆಟ್ಟು-ಎರೆಯುವೆನು ನಾನಿಂದು
'ಪಡೆದಪ್ಪನಾಗು' ಎಂದು.
೭
ಘಟ್ಟ ಮಲೆಗಳ ಬಿಟ್ಟು ಕಾರಕರ ಬಿರುದಿಟ್ಟು
ಹರಿವ ನದಿಗಳ ಮಡಿಯ ನೀರ ತಂದು
ಬಿಟ್ಟುಬಿಡದಲೆ ನಾನು ಎರೆಯುವೆನು ನಿನ್ನನ್ನು
'ಪಡೆದಪ್ಪನಾಗು' ಎಂದು.

೮
ಕರಿನಾಡ ಕನ್ಯೆ ಈ ಕೃಷ್ಣೆ ಕೇಳುವದೇನು ?
ನಿನ್ನ ಕೂಡಲದಿಂದ ನೀರ ತಂದು
ಎರೆಯುವೆನು-ಅರಿವಾಗು-ತಾನೆ ತಾನಾಗಿನ್ನು
'ಪಡೆದಪ್ಪನಾಗು' ಎಂದು.
೯
ಕನ್ನಡದ ನಾಡ ಕವಿಕುಲತಿಲಕರಾ ಕಾವ್ಯ
ಗಂಗಾಪ್ರವಾಹವೆಲ್ಲಿಂದ ಬಂತೋ
ಘನ್ನ ತೀರ್ಥಂಕರರ ಆ ಪೂಜ್ಯಪಾದಗಳ
ತೀರ್ಥದಿಂದೆರೆಯುವೆನು ನಿನ್ನನಿಂತೋ.
೧೦
ಕಲ್ಯಾಣದಧ್ಯಕ್ಷನಾದ ಪ್ರಭು ಅಲ್ಲಮನ
ಗುರುಪಾದ ತೀರ್ಥ ತಂದು
'ಕಲ್ಯಾಣ ಕಲ್ಯಾಣ' ಎರೆಯುವೆನು ಶಿರಬಾಗು
ಶಿವಶರಣನಾಗು ಎಂದು.
೧೧
ಉಡುಪಿಯೊಡೆಯನ ಅಡಿಯನುಡುಪು ಮಾಡುವ ನಮ್ಮ
ಆನಂದತೀರ್ಥ ತಂದು
ಮುಡಿಯಲ್ಲಿ ಧಾರೆಯಾಗಿಡುವೆ ಪುರುಷೋತ್ತಮನ
ದಾಸ ನೀನಾಗು ಎಂದು.
೧೨
ಹಂಪುಗೊಳಿಸುವ ದೇವಿಯೊಲಿದ ಮಾಧವನ ವಿ-
ದ್ಯಾತೀರ್ಥವನ್ನು ತಂದು
ಹಂಪು ಪಡೆಯೆಂದು ನಾ ಎರೆಯುವೆನು ನೀ ಸರ್ವ-
ಸಂನ್ಯಾಸಿಯಾಗು ಎಂದು.
೧೩
ಈ ನಾಡು ಅವನ ಹೊಲ! ಇದರ ವೊಕ್ಕಲಿಗನವ
ನಾ ನೀನು ರಂಟೆ ಕುಂಟ
ಏನಾದರೇನು ಗೆಲವಿಹುದು ನೀನಿರಬೇಡ
ಸೋಲೆಂಬ ಚಿಂತೆಗಂಟ.
೧೪
ಜಗದ ಪಟ್ಟವನೇರಿ ಕುಳಿತಿಹ ಜಗದ್ಗುರುವು
ನಮ್ಮ ಕರುನಾಡಿನಲಿ ಕಾಲನಿಟ್ಟು
ಮುಗಿದು ಎದೆಮುಗುಳನ್ನು ಅಡಿಯ ಹುಡಿಯಾಗೋಣ.
ಇಲ್ಲ ಸಲ್ಲದ ಬಗೆಗಳೇಕೆ ಇಷ್ಟು?

೧೫
'ಸೋಲು' ಎಂಬುದು ಕೇಳು ಮೃತ್ಯುಲೋಕದ ಸೊಲ್ಲು
'ಗೆಲವು' ಒಂದೇ ಬಲ್ಲ ನಮ್ಮ ನಲ್ಲ.
'ಸೋಲು' ಹುಂಬರ ಗುಲ್ಲು 'ಗೆಲವು' ಕಾಣ್ಬರ ಸೊಲ್ಲು
ಸೋಲುವವ ತಾನೆಂದೂ ಶರಣನಲ್ಲ.

೧೬
ಉಸುರು ಉಸುರಿಗೆ ಅವನ ಹೆಸರ ಸಾರುತ್ತಿರುವ
ಗಾಳಿಯಂದದಿ ನಾವು ಚರಿಸಬೇಕು.
ಹೆಸರು ಹೆಸರಿಗೆ ಅವನ ಕುಸುರು ತೋರುವ ಹಾಗೆ
ಬೆಳಕನ್ನು ಸುರಿಸಬೇಕು.

೧೭
ತಾಪ ಕಂಡಲ್ಲೆಲ್ಲ ನಮ್ಮ ಸಂಪ್ರೀತಿಯನು
ನೀರಾಗಿ ಹರಿಸಬೇಕು.
ಪಾಪ! ಪತಿತರ ಕಂಡು ಕೈನೀಡಿ ನೆಲೆಗೊಟ್ಟು
ನೆಲವಾಗಿ ಧರಿಸಬೇಕು.

೧೮
ಅಣುರೇಣು ತೃಣಕಾಷ್ಠ ಪತಿತಪಾವನರ ಮುಗಿ-
ಲಾಗಿ ಆವರಿಸಬೇಕು.
ಅಣುವಿಗೂ ಅಣುವಾಗಿ ಮುಗಿಲಿಗೂ ಮುಸುಕಾಗಿ
ಅವನ ಆಜ್ಞೆಯ ನಾವು ಸ್ಮರಿಸಬೇಕು.

೧೯
ಪಡೆದಪ್ಪನಾಗದೇ ದುಡಿದಪ್ಪನಾದವಗೆ
ಚಿಂತೆ ನೆರೆಯುವದೊಂದು ಸಂತೆಯಾಗಿ,
ಪಡೆದು ದುಡಿದವ ಜಾಣ ವ್ಯಸ್ತನಾದವ ಕೋಣ
ಆಗಬಾರದು ಪಿಂತೆ-ಮುಂತೆಯಾಗಿ.

೨೦
ದೇವನಲ್ಲಿ ನಿವೃತ್ತಿ ದೇವನಿಂದೆ ಪ್ರವೃತ್ತಿ
ಈ ಹಾದಿಯರಿಯಬೇಕು
ಜೀವಬಂಧುವೆ! ಕೇಳು. ಉಳಿದ ಜಂಜಾಲವನು
ತಾನಾಗಿ ಮರೆಯಬೇಕು

೨೧
ಗುರುವಂ ಮರೆಯಬೇಡೈ ಗೆಳೆಯಾ! ಗುರುಬಂಧುವೇ!
ಅರುಹಂ ತೊರೆಯಬೇಡೈ ಒಲವೇ! ಸ್ನೇಹಸಿಂಧುವೇ ॥

- ಚಿದಂಬರಗಾಥೆ ಸಂಪುಟ-೩ ಕವನ ಸಂಖ್ಯೆ : ೭೩೭ ರಲ್ಲಿ 'ಎರೆಯುವೆನು ಬಾ ನಿನ್ನ' ಎಂಬ ಶೀರ್ಷಿಕೆ ಇದೆ.

ಭಾವ : ಗೆಳೆಯ ಮಧುರಚೆನ್ನರ ಗೆಳೆತನದ ಪ್ರೇಮೋನ್ಮಾದದಲ್ಲಿ ಬರೆದುದು.
ಶಬ್ದಾರ್ಥ : ಶ್ರೀರಂಗ=ವಿಷ್ಣು, ವಿಷ್ಣುಸಮಾನ. ಘನ್ನ=ಶ್ರೇಷ್ಠವಾದ, ಪವಿತ್ರವಾದ. ಹಂಪು=ಸಮೃದ್ಧಿ, ಗುಲ್ಲು=ಗಲಾಟೆ, ಹರಡುತ್ತಿರುವ ಸುದ್ದಿ ಜಂಜಾಲ-ಜಂಜಡ=ತೊಂದರೆ, ಚಿಂತೆ.
ವಿಶೇಷ : ಬೇಂದ್ರೆಯವರು ತಮ್ಮ ಗುರುಬಂಧುಗಳಾದ ಮಧುರಚೆನ್ನರನ್ನು ಕುರಿತು ಪ್ರಾರ್ಥಿಸಿದ ರೀತಿ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅತ್ಯಂತ ಹೊಸದು. ಈ ಪ್ರಾರ್ಥನೆ ಫಲಿಸಿ ಮಧುರಚೆನ್ನರು ಹಸಲಂಗಿಯನ್ನು ಕರ್ನಾಟಕದ ಶ್ರೀ ಅರವಿಂದಾಶ್ರಮವಾಗಿ ರೂಪಿಸಿದರು. ಇದು ನಿಜವಾದ ಗುರುಸ್ಮರಣೆ.


೪೫ ಚಳಿ ಇರಲಿ ಮಳೆ ಬರಲಿ

೧
ಚಳಿ ಇರಲಿ ಮಳೆ ಬರಲಿ
ಮಂಜು ಸುರಿಯುತಲಿರಲಿ
ಬಿಸಿಲು ಕುದಿಸುತಲಿರಲಿ
ಮುಮ್ಮುಖದ ಋತುಮಾನ ಹೇಗು ಇರಲಿಽಽಽ
ನಗುತ ಒಲಿವೆವು ನಾವು
ನಗುತ ಒಲಿಸುವೆವುಽಽಽ

೨
ಏನೆ ಕಷ್ಟವು ಬರಲಿ; ಎಂಥ ನಷ್ಟವೆ ಇರಲಿ
ಇಷ್ಟವು ಅನಿಷ್ಟವೂ ಕೂಡಿ ಬರಲಿಽಽ
ದುಮ್ಮಾನ ಕಳೆವಂತೆ ಸುಮ್ಮಾನ ಹೊಳೆವಂತೆ
ಹಾಡಿ ನಲಿವೆವು ನಾವು
ಹಾಡಿ ನಲಿಸುವೆವುಽಽಽ.

ಭಾವ : ಒಂದು ಪ್ರಾರ್ಥನೆ. ಕೆಲವು ಸೂಕ್ತಿಗಳಿಂದ ಪ್ರೇರಿತ.

ಶಬ್ದಾರ್ಥ : ಸುಮ್ಮಾನ=ಸುಖ. ದುಮ್ಮಾನ=ದುಃಖ.



೪೬ ನೃಸಿಂಹ ಸ್ತೋತ್ರ

೧

ಡಿಂಭದ ಈ ಕಂಭದೊಳಗೆ ತಾವು ಅಡಗಿ ಇರುವಿರಿ
ನಂಬಿರುವೀ ಎದೆಹೂವನೆ ಆಸನ ಮಾಡಿರುವಿರಿ
ವೈರಿಯಿಂದ ಕಾಯಬೇಕು ಕರುಣಿಸುತ್ತ ಸದ್ಗುರೋ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

೨

ದೋಷವನ್ನು ನಾಶಗೈದು ಭಕ್ತಿಯನ್ನು ಪೋಷಿಸೆ
ಭಕ್ತ ಹೃದಯದಲ್ಲಿ ಸದಯನಾಗಿ ನಿಂತ ದೇವನೇ
ಏನು ಬಂದರೇನು ತಾವೆ ಕಾವಿರೆಂಬ ಭಾವನೆ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

೩

ಮರೆವಿನಿಂದ ಇದ್ದೆ ನಾನು ಅರಿವ ಹರಡಿ ಬಂದಿರಿ
ಅರಿವಿನ ಅರವಿಂದವಾಗೆ ಹೊರಳಿ ಅರಳಿ ಬಂದಿತು
ಅಂದಿನ ಮಕರಂದವಿಂದಿಗಾನಂದವ ಕೊಡುತಿದೆ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

೪

ಮರೆವುದೇನು ಜಡದ ಧರ್ಮ, ನಾನು ಮರೆತೆನೆನ್ನಿರಿ
ಅರಿವು ಮಾಡಿ ಕೊಡಿರಿ ಎನಗೆ, ತಾವು ನನ್ನ ಬಿಡುವಿರೆ ?
ತಾವೆ ಕೈಯ ಬಿಟ್ಟಮೇಲೆ ದೆಸೆಯಾವುದು ಹಸುವಿಗೆ ?
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

೫

ನಾನು ಒಡಲು ತಾವು ತ್ರಾಣ, ನಾನು ಉಸಿರು ಆಗಿರೆ
ತಾವು ಪ್ರಾಣವಾಗಿ ಕಾದು, ನಾನು ಚಿತ್ತವೆಂದೆನೆ
ತಾವು ಧ್ಯಾನವಾಗಿ ನಿಂತು ಹತ್ತರೆಳೆದುಕೊಳ್ಳಿರೇ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

೬

ಮುಡಿಪಿನ ಸಂಕಲ್ಪವನ್ನು ಜೀವನಿಂದ ಮಾಡಿಸಿ
ಜನ್ಮ ಜನ್ಮದಿಂದ ಬಂದ ಕರ್ಮಗಳನು ಓಡಿಸಿ
ದೇಹ ಪ್ರಾಣಮನಗಳನ್ನು ತಮ್ಮ ವಶಕೆ ಕೊಳ್ಳಿರಿ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

೭
ನಾನು ಕಾಲುಮಣೆಯು ತಮ್ಮ ಮಹಾಪಾದ ಪೀಠಕೆ
ತಮ್ಮಡಿಗಳು ಮುಟ್ಟಿದೊಡನೆ ಅರಳಿ ಕಮಲವಾದೆನು
ಆ ಕಮಲದಲ್ಲೆ ತಾವು ಕಮಲೆಯೊಡನೆ ವಾಸಿಸಿ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥
೮
ಅಣುರೇಣವು ತಮ್ಮದಿಹುದು,'ನಾನು' ಎಂಬುದಾಟವು
ತಾವೆ ಜೀವನಾವೆಯಲ್ಲಿ ಕ್ರೀಡೆಯಾಡುತಿರುವಿರಿ
ತಾವು ನಮ್ಮ ರೇವು ನಾವು ಎತ್ತ ಹೋಗಿಬಂದರು
ನಾರಾಯಣ ನಾರಾಯಣ ಶ್ರೀ ನೃಸಿಂಹ ಪಾಹಿ ಮಾಮ್ ॥

ಶ್ರೀಗುರು ಪ್ರಸಾದೋಽಸ್ತು। ಶ್ರೀಮಾತೃಪ್ರಸಾದೋಽಸ್ತು।
ಭದ್ರಂ ಶುಭಂ ಮಂಗಳಂ

ಭಾವ : ಸಂಕಷ್ಟದ ದರ್ಶನದಿಂದ ಅದರ ಪರಿಹಾರಕ್ಕೆ ಮಾಡಿದ ಪ್ರಾರ್ಥನೆ.

ಶಬ್ದಾರ್ಥ : ಡಿಂಭ=ದೇಹ. ಪಾಹಿ=ರಕ್ಷಿಸು. ಮುಡಿವು=ಮೀಸಲು. ರೇವು=ಬಂದರ.

ವಿಶೇಷ : ಒಬ್ಬ ಸಾಧಕರು ಬೇಂದ್ರೆಯವರಿಗೆ ನರಸಿಂಹ ಶಾಲಿಗ್ರಾಮವನ್ನು ಕಾಣಿಕೆಯಾಗಿ ಕೊಟ್ಟಿದ್ದರು. ಅದು ಅತ್ಯಂತ ಉಗ್ರ ಎಂಬುದು ಅನಂತರ ತಿಳಿಯಿತು. ಆ ಶಾಲಿಗ್ರಾಮ ಬೇಂದ್ರೆಯವರ ಕನಸಿನಲ್ಲಿ ಪ್ರತ್ಯಕ್ಷವಾಗಿ "ನೀನು ನನ್ನ ಕಡೆಗೆ ದುರ್ಲಕ್ಷ್ಯ ಮಾಡಿರುವಿ" ಎಂದಾಗ, ಸಂತೃಪ್ತಪಡಿಸಲು ಆಶೀರ್ವಾದ ಬಯಸಿ ಮಾಡಿದ ಸ್ತೋತ್ರ. ನುಡಿ ೩ ಮತ್ತು ೪ರಲ್ಲಿ ಈ ಅಂಶ ಗುಪ್ತವಾಗಿ ಇದೆ.

೪೭ ದರಿದ್ರನಾರಾಯಣ

೧.

ಗಾಂಧೀಜಯಂತಿ ದಿನ ಸತ್ಯವನ್ನಾಡೋಣ
ಸುಳ್ಳಿಗೋ ಇಡಿ ವರುಷ ತೆರವೆ ಇಹುದು.
ಬಡತನವು ಬದುಕಿಹುದು, ಯಾರು ಇಲ್ಲೆನಬಹುದು,
ಯಾವ ತಂತ್ರಕ್ಕೆ ಅದು ಅಡಗಲಹುದು?

೨

ನದಿನೀರು ಹರಿಯುತಿದೆ; ನೆಲಹುಲ್ಲು ಬೆಳೆಯುತಿದೆ,
ಮಾನವನ ಸಂತತಿಗೂ ಲೆಕ್ಕವಿಲ್ಲ.
ಬೀಬದೊಡ್ಡ ಹೆಸರಿನಲ್ಲಿ ಸಣ್ಣ ಕೆಸಲಗಳೇಕೆ?
ಬಡತನವು ಇದ್ದುದಕೆ ದುಃಖವಿಲ್ಲ.

೩

ಸರ್ವೋದಯವು ಹೌದು, ಪರ್ವೋದಯವು ಹೌದು,
ಗರ್ವೋದಯವು ಮಾತ್ರ ಅಸ್ತಿಭಾರ.
ಕೆಸಲವಿಲ್ಲದ ಬಡವ ಕೈಗೊಂಬೆಯಾಗುವನು
ಕಿಳ್ಳಿಕೇತನ ಹಿಂದೆ ಸೂತ್ರಧಾರ.

೪

ಗಾಂಧಿ ಹುಟ್ಟಿರಬಹುದು, ಯೇಸು ಸತ್ತಿರಬಹುದು,
ಬುದ್ಧ ಅತ್ತಿರಬಹುದು ಧರ್ಮ ಹೇಳಿ,
ದೈವುಳ್ಳವರು ಅಹುದು, ದಯವುಳ್ಳವರು ಅಹುದೋ?
ಬಡತನವು ಬದುಕಿಹುದು ಹೇಳಿಕೇಳಿ.

೫

ರಾಮರಾಜ್ಯವು ಆಯ್ತು ಧರ್ಮರಾಜ್ಯವು ಹೋಯ್ತು
ಬಲಿರಾಜ್ಯವಿಹುದು ಪಾತಾಳದಲ್ಲಿ
ರುದ್ರತಾಂಡವದಲ್ಲಿ ಪ್ರೇತಗಳೆ ಕುಣಿಯುವವು
ಭೂತಗಳ ಮೇಳದಲಿ ತಾಳವೆಲ್ಲಿ?

೬

ಕೂಲಿಕುಂಬಳಿ ಕಪ್ಪು ಅನ್ನವೋ ಅಪರೂಪ,
ಮಾನಕ್ಕೆ ತೆರೆ ಸಾಕು ಲಾಂಗು ಲಂಗೋಟಿ
ಸಾವಿರದ ಲೆಕ್ಕದಲಿ ಬದುಕುಳ್ಳವರ ಬಾಳು
ಲಕ್ಷದೊಳಗೇ ಬರದು ಕೋಟಿ ಕೋಟಿ.

೭
ಕಳ್ಳರಿಗೆ ಸೆರೆಮನೆಯಯು, ಸೂಳೆಗೋ ಅರಮನೆಯು,
ಬೈರಾಗಿ ದಂಪತಿಗೆ ಧರ್ಮಶಾಲೆ,
ಬಡವರಿಗೆ ಬಯಲೆ ಗತಿ ಜನನ-ಮರಣಕ್ಕೆಲ್ಲ
ಉಳ್ಳವರ ಲೋಭ ಬಡತನದ ಮೂಲೆ.
೮
ಬಡತನದ ಸಸಿಗೆ ನೀರೆರೆಯಬೇಡೆಲೊ ಗೆಳೆಯ !
ಬಡತನಕೆ ಉಪಕಾರಿ, ಸಾಕು ಜಂಭ.
ನಿನ್ನ ಸೇವೆಯ ಪುಣ್ಯದಿಂದ ಹಬ್ಬಿಹುದಣ್ಣ
ಬಡತನದ ಹುಲುಸುಬೆಳೆ ಜಗದ ತುಂಬ.
೯
ಬಹುಜನರ, ಬಡಜನರ, ಅಜ್ಞಾನಿ ದುಡಿತವನೆ
ಬಂಡವಾಳವ ಮಾಡಿ ಶ್ರೇಷ್ಠಿಯೆನಿಸಿ
ದಾನಧರ್ಮವು ಎಂದು ಸೇವೆ ತ್ಯಾಗವು ಎಂದು
ಈ ಆಟ ಹೂಡದಿರು ಕೀರ್ತಿ ನೆನಿಸಿ.
೧೦
ಕಾಯಕವು ಕೈಲಾಸ, ಭಕ್ತರಿಗೆ ಉಪವಾಸ
ಶರಣರಿಗೆ ವನವಾಸ, ಉಳಿವಿ ಹಾದಿ.
ಎಲ್ಲೆಲ್ಲೊ ಇದ್ದವರಿಗಲ್ಲಲ್ಲೆ ಮಣ್ಣಾಯ್ತು
ಬಸವಣ್ಣನವರಿಗೋ ಜಲಸಮಾಧಿ.
೧೧
ಮುಸಲನಾದರು ಏನು, ಕ್ರೈಸ್ತನಾದರು ಏನು
ಸುಡುಗಾಡು ಸೇರಿದರು ಬಿಕ್ಕೆ ಬಿಡದು
ದಾನಕ್ಕೆ ಪಾತ್ರಗಳು ಹಲಕೆಲವು ಇರಲೆಂದು
ದೈವಪೂಜಕರ ಕೈ ಭಿಕ್ಷೆ ಕೊಡದು.
೧೨
ಧನಪತಿ ಎಂದಿಗೂ ರಾಜನು ಮಹಾರಾಜ
ಶಕ್ತಿಪತಿ ಶಿವನಿಗೊ ತಿರುಕ ರೂಪ.
ಮೂಲೋಕ ತುಂಬಿದವ ಕುಳ್ಳನಾದನು ಬೇಡಿ
ಕೊಡುವವನ ಕೈ ಮೇಲು ಬಲಿಯೆ ಭೂಪ !

೧೩

ಅನೇಕಾಂಗವಿದೆ ಐಕ್ಯದ ಕೀಲ
ಅನೈಕ್ಯವಾದರೆ ಒಂದಲ್ಲ
'ನಾ' 'ನಾ' ಎನ್ನುತ ನಾನಾ ತೆರದಲಿ
ವಿಭಕ್ತವಾದರೆ ಚೆಂದಲ್ಲ.

೧೪

ಬಾಂಧವ್ಯವು ಇದು ಬಂಧನವಾದರೆ
ಮುಕ್ತ ಜೀವನಕೆ ತೆರವಿಲ್ಲ.
ಸ್ವಭಾವ ಪರಿಪಾಕಕ್ಕಿಂಬಿದ್ದರೆ
ಸಾಮರಸ್ಯಕದು ಎರವಲ್ಲ.

೧೫

ನಡೆದಷ್ಟಿದೆ ನೆಲ, ಹರಿದಷ್ಟಿದೆ ಜಲ,
ಏರಿದಷ್ಟು ಇದೆ ಹಿರಿಬಯಲು
ದುಡಿದಷ್ಟಿದೆ ಬಲ, ಪಡೆದಷ್ಟಿದೆ ಫಲ.
ಪಯರಿಗೆ ತಕ್ಕಷ್ಟಿದೆ ಕುಯಿಲು.

೧೬

ಶಾಂತಿಯಿಂದ ಪರಿಪುಷ್ಟಿಗೊಂಡು ಸಂ-
ತುಷ್ಟವಾಗಲೀ ನಾಡ ಜನ.
ವಿಜಯ ಹೊಂದಿ, ಕಲ್ಯಾಣ ಪಡೆದು, ಸ್ವ-
ಸ್ವ-ಧರ್ಮ ಕಾಯಲಿ ಚಿರಂತನ.

ಭಾವ : ಕರ್ನಾಟಕ ಪಂಚಾಂಗಯುಕ್ತ. ಕರ್ನಾಟಕದ ನಿರ್ಮಿತಿಯು ಪಂಚಾಂಗ ಯುಕ್ತವಾಗಬೇಕು ಎಂಬ ಹಾರೈಕೆಯ ಭಾವಗೀತವಾಗಿದೆ.

ಶಬ್ದಾರ್ಥ : ಇರಸಲ್ಲ=ಇರಿಸು+ಅಲ್ಲ=ಯುಕ್ತವಲ್ಲ. ಇಂಬು=ಸುಖಾಶ್ರಯ. ಎರವು=ಹೊರತು, ಬೇರೆ. ಕುಯಿಲು-ಕೊಯ್ಲು=ಬೆಳೆಯನ್ನು ಕೊಯ್ಯುವಿಕೆ.

ವಿಶೇಷ : ಈ ಕವನ 'ದರ್ಶನ' ಎಂಬ ಹೆಸರಿನಿಂದ ೧೯೫೬ರಲ್ಲಿ ಎಸ್. ಡಿ. ಇಂಚಲ ಸಂಪಾದಿಸಿದ 'ಕರ್ನಾಟಕ ದರ್ಶನ' ಎಂಬ ಗ್ರಂಥದಲ್ಲಿ ಪುಟ ೧-೪ ರಲ್ಲಿ ಪ್ರಕಟವಾಗಿದೆ. ನುಡಿ-೧ ಸಾಲು ೩, ೪ ಹೀಗಿವೆ : ''ನಿನ್ನದೆ ಶಿಲೆಯು, ನಿನ್ನದೆ ಕಲೆಯು ಶಿವಶಕ್ತಿಗೆ ಇದೆ ಗೆಲವು.''



೫೯ ಸ್ವಾತಂತ್ರದೇವಿಗೆ

೧
ಸ್ವಾತಂತ್ರ್ಯದ ಹುಟ್ಟುಹಬ್ಬ
ಕರೆವುದು ಸಾವಿರದ ಕಬ್ಬ
ಸುರಭಿಯಂತೆ ಇಂದಿಗೂ,
ಆದರ ಪದಕೆ ಗೆಜ್ಜೆ ಬೇಕೆ?
ಅದಕೆ ಬೇರೆ ರಾಗವೇಕೆ?
ಅದೇ ಗೀತವೆಂದಿಗೂ.
೨
ಶಾಂತ ಜಲಧಿಯಂತರಂಗ
ಕಾರಿತಣ್ಣ ಬೆಂಕಿಯ;
ಕೋರಿಯಾದ ಕುರುಕ್ಷೇತ್ರ
ಮುರಿಯಿತಗೋ ಶಂಕೆಯ
ಮರೆಯಿಸುವದೊ ನೆನೆಯಿಸುವದೊ
ರಾವಣನಾ ಲಂಕೆಯಾ !



೩

ಮಹಾಕಾಳಿ ಇಳಿದಳಣ್ಣ
ತನ್ನ ರುದ್ರಲೀಲೆಗೆ.
ಸೋದರರಾ ರಕ್ತ ಕುಡಿಯೆ
ಚಾಚಿ ಒಂದೆ ನಾಲಿಗೆ.
ಬೇರೆ ದೇವಿ ಬರುತಲಿಹಳು
ನೋಡು ಸ್ವಲ್ಪ ಮೇಲಿಗೆ.

೪

ಹಿಗ್ಗಿನೊಂದು ಉರುಳೆಯಂತೆ
ಅವಳ ಮುಖದ ಮಂಡಲ;
ಸಂಜೆಬಂಜೆತನವ ಹರಿಸಿ
ಮೆರೆಯೆ ತುಟಿಯ ತೊಂಡಿಲ;
ಹೆಜ್ಜೆಯಿಟ್ಟ ಅಡಿಅಡಿಯಲಿ
ಆಗೋ ಯಜ್ಞಸ್ಥಂಡಿಲ.



೫

ಮರು ಮುಸುಕು ಎಳೆದುಕೊಂಡು
ಮಲಗಿದೇಕೆ ಮಾನವಾ ?
ಸುಡಿಸಿ ಸುಟ್ಟು ಕೆಡಿಸಿ ಕೆಟ್ಟು
ಕುಣಿಯುತಿಹನು ದಾನವಾ
ಧೀರೆ ಇಳೆಯ ಸೀರೆ ಸೆಳೆವ ;
ಉಳಿಸೊ ಉಳಿಸು ಮಾನವಾ

೬

ಅದೇ ಅನ್ನ ಅದೇ ನೀರು
ವಿಶ್ವನರನ ಹಸಿವೆಗೆ ;
ಬೆಳಕು ಗಾಳಿ ಸುತ್ತು ಒಂದು
ಪ್ರಾಣದ ಒಳ ಅಸುವಿಗೆ ;
ಒಂದೆ ಬಯಲು ಬದುಕಲುಂಟು
ವಸುಂಧರೆಯ ಹಸುವಿಗೆ.



೭

ಚುಕ್ಕಿಗಳನು ಮೆಟ್ಟು ಮಾಡಿ
ಬರುತಲಿಹಳು ತಾಯಿಯು
ಅವಳ ಮಾತ ಕಲಿಯಲೆಂದು
ತೊದಲುತಿಹುದು ಬಾಯಿಯು
ಅವಳ ಬರವೆ ಕಾಯುತಿಹುದು
ಮರದ ಮರದ ಕಾಯಿಯು.

೮

ಚವಲಂಬವನವಲಂಬಿಸಿ
ನಗೆಯು ಕಣ್ಣಗೊನೆಗಿದೆ ;
ಮುತ್ತು ಉರುಳಿ ಹೊರಳಿ ಮರಳಿ
ಬರಲು ತುಟಿಯು ನನೆಗಿದೆ;
ಮುಕ್ತಿ ಉಯ್ಯಲಾಟ ನೋಡು
ಮೂಗ-ಮೂಗತೆನೆಗಿದೆ.



೯
ಏಳೊ ಏ
ಕರೆವ ತೂರ್ಯನಾದವ;
ಗೋಳಗುಮುಟದಂತೆ ಸೃಷ್ಟಿ
ನುಡಿಸುವ ಪಡಿಸಾದವ;
ಹೆಜ್ಜೆ ಹಾಕು, ಹಾಡ ಹೇಳು,
ನೀನೆ ನಾಳೆಯಾದವ.


೧೦
ದೀಪ ದೀಪ ಸಮುಸಮೀಪ
ಇದೊ ಭಾರತಹುಣ್ಣಿವೆ ;
ಜೀವರಥಕೆ ಪ್ರಾಣದಶ್ವ
ತಾವೆ ತಾವು ಹಣ್ಣಿವೆ
ಎಲ್ಲ ಬೆಳಕು ಎಲ್ಲ ಬಯಲು
ಮಣ್ಣ ಕಣಕು ಕಣ್ಣಿವೆ.

೧೧
ಪ್ರೀತಿ ದೂತಿಯಾಗಿ ಬಂದು
ಕರೆಯುತಿಹಳು ಯಾತ್ರೆಗೆ,
ಎದೆಎದೆಗೂ ಹಬ್ಬವಾಗೆ
ದೇವಿ ದೇವ ಜಾತ್ರೆಗೆ ;
ಬಾಳಿರಣ್ಣ ಆಳಿರಣ್ಣ
ಬೆಳಗು ಉಂಟು ರಾತ್ರಿಗೆ.

೧೨
ಬಾರೆ ತಾಯಿ, ಬಾರೆ ದೇವಿ,
ಓಗರೆವರು ಭಕ್ತರು ;
ನಿನ್ನ ಮಕ್ಕಳೆಂದು ನಿನಗೆ
ಒಲಿವ ಜ್ಞಾನ ಶಕ್ತರು ;
ನಿನ್ನ ಮನೆಯ ಕಟ್ಟಲಿಹರು
ದಿವ್ಯ ಕರ್ಮಯುಕ್ತರು.

೧೩
ನುಗ್ಗಿರಣ್ಣ ರಣದ ಕಣಕೆ,
ಅಸುರರಿಂದ ಬಿಡಿಸಿರಿ
ತಾಯ ಸೆರೆಯ, ಎಲ್ಲರಿಂದ
ಗೆಲವಿನ ಗುಡಿ ಹಿಡಿಸಿರಿ.
ಭೂಮಿದೇವಿ ನಲಿಯುವಂತೆ
ವಿಜಯಗೀತ ನುಡಿಸಿರಿ.

೧೪
ಕನ್ನಡವೂ ಕನ್ನಡಿಸಲಿ
ನಾಳೆ ಬಾಳಿನೊಸಗೆಯ;
ಜೀವನಕಲೆ ಬೆಳಗಲಲ್ಲಿ
ತಿಳಿದು ಕರಣ ಹಸುಗೆಯ ;
ಪೂರ್ಣಪ್ರಜ್ಞರಾಗಿ ಪಡಲಿ
ಜೀವ-ದೇವ ಬೆಸುಗೆಯ.



ಭಾವ : ಜನವರಿ ೨೬ನೆಯ ಗಣರಾಜ್ಯ ದಿನದ ಅನುಸ್ಮರಣ. ಕೋರಿಯಾ ಯುದ್ಧದ ಕಾಲದಲ್ಲಿ ಬರೆದುದು.

ಶಬ್ದಾರ್ಥ : ಸುರಭಿ=ಸುಗಂಧ, ಕಾಮಧೇನು. ಸ್ಥಂಡಿಲ=ಭೂಮಿ, ಮರುಭೂಮಿ, ಸಾಗು ಮಾಡಿದ ಭೂಮಿ, ಬಹು ವಿಧವಿಗೆಯ್ದ ಭೂಮಿ, ಮೋಡ ಸಂಚಯ, ಸೀಮೆ. ಪಡಿಸಾದ=ಪ್ರತಿಧ್ವನಿ. ಕಣ=ಕುಸ್ತಿಯ ಸ್ಥಳ, ಯುದ್ಧ ಭೂಮಿ. ಕರಣಹಸುಗೆ=ಕರಣ=ಇಂದ್ರಿಯ+ಹಸುಗೆ=ವಿಭಾಗ, ಹಂಚಿಕೆ.

ವಿಶೇಷ : ೨೬ ಜನವರಿಯ ನಿಮಿತ್ತವಾಗಿ ಗೀತ ರಚಿಸಿದ್ದರೂ - ಜೀವ ದೇವ ಬೆಸುಗೆಯೆ ನಿಜವಾದ ಸ್ವಾತಂತ್ರ್ಯ ಎಂಬ ಧ್ವನಿ ಪ್ರಮುಖವಾಗಿದೆ.

೬೦ ಕಣಸು


೧
ಸಿಂಹ ಮುಖಕ್ಕಿದೆ ನವಿಲಿನ ಸೋಗೆ
ಶಕ್ತಿಶಾರದೆಯ ಮೇಳದ ಹಾಗೆ!
ನಾಗಮೋಡಿಯಲಿ, ನಡೆದಿದೆ ನಾಡಿ
ತಮ ಹಿಂದೂಡಿ, ಪ್ರಕಾಶಕೋಡಿ
ಬಾನ ಕೆದರುತಿದೆ ಕಣ್ಣಿನ ಕದಿರು,
ಅಪಾರ ಅಪಾರ ಸಪಾರದಿದಿರು!

೨
ಸಿಂಹ-ಮಯೂರ! ಯಾವದು ಮೋಡಿ?
ಶಕ್ತಿ-ಸ್ಕಂದ! ಏನನು ನೋಡಿ?
ಆವ ರಣಕ್ಕಿದು? ಏನಿದು ಜೋಡಿ?

೩
ಮಯೂರ ಮಯೂರ ಬಾನೇ ಹಕ್ಕಿ
ಸಿಂಹ ಜಿಹ್ವೆಯಲಿ ಗಲ್ಲವ ನೆಕ್ಕಿ
ಕಾನ-ನಾಗನೊಲು ತಾನೆಕ್ಕೆಕ್ಕಿ
ಎಲ್ಲಿಂದೆಲ್ಲಿಗೆ ಹೊರಟದೆ ಏನೋ!
ಜಗಪ್ರವಾಸದ ಖಗಪ್ರಯಾಣ
ಗುಹ್ಯಾತ್ ಗುಹ್ಯತರಂ ಈ ಯಾಣ!
ಆನರಿಯುವೆನೇ ಈ ಬಿನ್ನಾಣ?
ತಾಯಿ! ಸಲಹು ನೀ ನಿನ್ನದೆ ಪ್ರಾಣ.

ಭಾವ : ಸಿಂಹದಂತೆ ಕಾಣುವ ಸೂರ್ಯಪಾನ ಹೂವಿನಿಂದ ಪ್ರಾರಂಭ, ನವಿಲುಗರಿಗಳಿದ್ದ ಸಿಂಹ ಮುಖದ ಕಣಸಿನಿಂದ ಕೊನೆ. ತಲೆದಿಂಬಿನ ಮೇಲೆ ಈ ವಿನ್ಯಾಸ ಕಂಡದ್ದು ಕವನ ರಚನೆಗೆ ಪ್ರೇರಣೆ. ಈ ಕನಸು ಕಂಡು ಆಶ್ಚರ್ಯದಿಂದ ಎಚ್ಚರ.

ಶಬ್ದಾರ್ಥ : ಸೋಗೆ=ನವಿಲಿನ ಗರಿ. ಕೋಡಿ=ಹೊನಲು, ಪ್ರವಾಹ. ಕದಿರು=ಕಾಂತಿ. ಸಪಾರ=ಸರಿಸವು. ಕಾನ=ಕಾನ್-ಬೆಟ್ಟದೆಡೆ ಇರುವ ಅಡವಿ. ಎಕ್ಕೆಕ್ಕಿ=ಒಂದರಮೇಲೊಂದಾಗಿ. ಯಾಣ=ಜ್ಞಾನಸಾಧನೆಯ ಮಾರ್ಗ, ಪ್ರವಾಸ, ಯಾನ. ಬಿನ್ನಾಣ=ಪಾಂಡಿತ್ಯ,ಕೌಶಲ್ಯ.



ಡಾ|| ದ. ರಾ. ಬೇಂದ್ರೆಯವರ ಜೀವನ ಕಥೆಯ ಹಂದರ

ಜನನ-ವಿವಾಹ

೩೧-೧-೧೮೯೬ : ಮಾಘವದ್ಯ ಪ್ರತಿಪದಾ-ಗುರುಪ್ರತಿಪದಾ, ಮನ್ಮಥನಾಮ ಸಂವತ್ಸರ-ಧಾರವಾಡ, ಪೋತನೀಸ ಓಣಿಯಲ್ಲಿ ಜನನ.

೧೮೯೯ : ನೀರಕುತ್ತು ದಾಟಿತು. ಜೇಷ್ಠವೋ ಶ್ರಾವಣವೊ ಇರಬೇಕು. ಹಾಲಗೇರಿ ಕೆರೆಯಲ್ಲಿ ಬಿದ್ದು ಜೀವಂತ ಪಾರಾದದ್ದು.

೧೯೦೭ : ತಂದೆ-ರಾಮಚಂದ್ರ ತೀರಿಕೊಂಡರು.

೧೯೦೨-೧೯೧೩ : ಧಾರವಾಡದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಮ್ಯಾಟ್ರಿಕ್ ಪಾಸಾಗುವವರೆಗೆ.

೧೯೧೩ : ಅಜ್ಜಿ-ತಾಯಿಯ ತಾಯಿ. ಗೋದುಬಾಯಿ ತೀರಿಕೊಂಡರು,

೧೯೧೪ : ಪುಣೆಯ ಫರ್ಗ್ಯುಸನ್ ಕಾಲೇಜು ಸೇರಿದ್ದು.

೧೯೧೬-೧೭ : ವಿವಿಧ ಛಂದಸ್ಸುಗಳಲ್ಲಿ, ಕನ್ನಡ, ಮರಾಠಿ, ಇಂಗ್ಲೀಷ್ ಹಾಗೂ ಸಂಸ್ಕೃತದಲ್ಲಿ ಕವಿತಾ ರಚನೆ ಹಾಗೂ ಶ್ರೇಷ್ಠ ಕವಿಗಳ ಕವನಗಳ ಅನುವಾದ.

೧೯೧೮ : ಬಿ. ಎ. ಪದವಿ. ಜೂನ್ ೪ರಂದು. ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಶಿಕ್ಷಕ. (ಈಗಿನ ವಿದ್ಯಾರಣ್ಯ ಹೈಸ್ಕೂಲು)

೧೯೧೯ : ಲಕ್ಷ್ಮೀಬಾಯಿ ಅವರೊಂದಿಗೆ ಹುಬ್ಬಳ್ಳಿಯಲ್ಲಿ ವಿವಾಹ. 'ವಾಗ್ಭೂಷಣ' ಸಂಪಾದಕ ವರ್ಗದಲ್ಲಿ ಸೇರ್ಪಡೆ.

ಸಂತತಿ

೧. : ಕ್ಷೇಮೇಂದ್ರ (ಜನನ : ೧೯೨೨ ಧಾರವಾಡ; ಮರಣ ; ೧೯೨೩)
'ಮೊದಲಿನ ಫಲವೊಂದು ಮೀಸಲು ಮಣ್ಣಿಗೆ.'

೨. : ರಾಮ (ಜನನ ೧೯೨೪ ಹಾನಗಲ್ಲ : ಮರಣ ೧೯೪೪)
'ಹುಸಿನಗುವ ಕೂಸಿನ ಹೊಸ ತೊಸ ಆಟಿಕೆ.'

೩. : ಭಾಸ್ಕರ (ಜನನ ೧೯೨೭ ಧಾರವಾಡ ; ಮರಣ ೧೯೨೭)
'ಭೆಟ್ಟಿಗೆ ಬಂದನು ಹೊಸದೊಬ್ಬ ಕಂದನು ಅಥಿತಿಯೋ ಎಂಬಂತೆ.'

೪. : ಪಾಂಡುರಂಗ (ಜನನ:೧೯೨೮, ಧಾರವಾಡ ಮರಣ : ೧೮-೧೧-೨೦೦೩)
'ಹುಡುಗನ ಒಡನಾಟವು ಹುಡುಗಾಟ ಮಾಡಿದವು.'

೫. : ಲಲಿತಾ (೧೯೩೪, ಧಾರವಾಡ; ಮರಣ ೧೯೩೪)
'ಆ ಕೂಸ ಕಳಕೊಂಡು ನೀನೆಂತೊ ಉಳಕೊಂಡು
ಲಾಲಿತ್ಯವಿಲ್ಲದ ಶೈಲಿಯೊಲು.'
('ನೀ ಹಿಂಗ ನೋಡಬ್ಯಾಡ ನನ್ನ' ಕವನದ ವಸ್ತು)

೬. : ವಾಮನ (ಜನನ : ೧೯೩೫, ರಾಣೆಬೆನ್ನೂರು)

೭. : ಪ್ರೇಮಾ (ಜನನ : ೧೯೩೭, ಧಾರವಾಡ; ಮರಣ : ೧೯೩೭)

೮. : ಮಂಗಲಾ (ಜನನ : ೧೯೩೯, ಧಾರವಾಡ)

೯. : ಆನಂದ (ಜನನ : ೧೯೪೩, ಧಾರವಾಡ; ಮರಣ : ೧೯೪೪)

ಇತರ

೧೯೨೨ : ದಾವಣಗೇರಿಗೆ ಸಾಹಿತ್ಯ ಸಮ್ಮೇಲನಕ್ಕೆ ಹೋದದ್ದು.

೧೯೨೨ : "ಕೃಷ್ಣಾಕುಮಾರಿ" ಮೊದಲನೆಯ ಆವೃತ್ತಿ ಪ್ರಕಟವಾದದ್ದು.

೧೯೨೩ : ಬಿಜಾಪೂರದ ಸಾಹಿತ್ಯ ಸಮ್ಮೇಲನಕ್ಕೆ ಹೋದದ್ದು.
'ಜಯ ಕರ್ನಾಟಕ' ಪತ್ರಿಕೆಯೊಂದಿಗೆ ಸಂಬಂಧ, ಮಧುರಚೆನ್ನರ ಭೆಟ್ಟಿ.

೧೯೨೪ : ತಾಯಿ-ಪಾರ್ವತಿ-ಅಂಬಿಕೆ ತೀರಿಕೊಂಡದ್ದು.
'ತಾಯಿ ಗಿಡವು ಮಾಯವಾಯಿತಲೇ!'
- 'ಜೇನುಹುಟ್ಟು' ಕೈ ಬರಹ ಪತ್ರಿಕೆ ಎಳೆಗೆಳೆಯರಾದ ವಿದ್ಯಾರ್ಥಿಗಳ ಮೂಲಕ ಹೊರಡಿಸಿದ್ದು.

೧೯೨೬ : 'ಸ್ವಧರ್ಮ' ಪತ್ರಿಕೆಯ ಸಂಪಾದಕರು.
- ಗೆಳೆಯರ ಗುಂಪಿನಿಂದ ನಾಡ ಹಬ್ಬ ಪ್ರಾರಂಭ.

೧೯೨೮ : 'ನನ್ನದು ಈ ಕನ್ನಡ ನಾಡು' ಕವನ ಸಂಗ್ರಹದ ಸಂಪಾದಕರು.

೧೯೨೯ : i) ಕಕ್ಕ ಬಂಡೋಪಂತ ಬೇಂದ್ರೆಯವರು ದ. ರಾ. ಬೇಂದ್ರೆಯವರಿಗೆ ೫-೧೧-೧೯೨೯ ರಂದು ಪಾಲಕ್ಕಾಗಿ ಸಾಧನಕೇರಿಯಲ್ಲಿ ಒಂದು ಮನೆಯನ್ನು ಕಾಣಿಕೆಯಾಗಿ ಕೊಡಿಸಿದ್ದು.
೧೩, ಶ್ರೀಮಾತಾ, ಸಾಧನಕೇರಿ, ಧಾರವಾಡ - ನಿವಾಸ.
'ಮಳೆಗಾಲ ಕೆರೆಗನ ನಡೆಗಿದ್ದ ಮನೆಯೊಂದು ಮಮತೆಯ
ಗುರುವಾಗಿ ತಾ ದೊರಕಿತು.'

ii) ಬೆಳಗಾವಿಯ ಸಮ್ಮೇಳನದಲ್ಲಿ -
'ಹಕ್ಕಿ ಹಾರುತಿದೆ ನೋಡಿದಿರಾ' ಕವನ ವಾಚನ.

iii) ೧೧-೧೧-೧೯೨೯ ರಂದು ಶ್ರೀ ಆಲೂರ್ ವೆಂಕಟರಾವ್ ಇವರಿಂದ 'ಜಯ ಕರ್ನಾಟಕ' ಕೊಂಡದ್ದು.
ಸಂಪಾದಕರಾಗಿ ಕಾರ್ಯ ನಿರ್ವಹಣೆ.
"ಜಯ ಕರ್ನಾಟಕವೆಂಬುತ ಗೆಳೆಯರ ಕನ್ನಡವಾಸೆಯು ಗುಡಿಕಟ್ಟಿತು."
'ನರಬಲಿ' - ಕವನವು ಬಲಿಮಾಡಿತೆನ್ನನು.
ಜೇಲವಾಸದಲ್ಲಿಗೆ ಹೋಗಿ ಬಂದಿತು."

೧೯೩೦ : 'ಹಕ್ಕಿ ಹಾರುತಿದೆ' ಕವನ ಸಂಗ್ರಹದ ಸಂಪಾದಕರು.

೧೯೩೨ : ಹಿಂಡಲಗಿ ಜೇಲುವಾಸ. ಮುಗದ ಎಂಬ ಹಳ್ಳಿಯಲ್ಲಿ ನಿರ್ಬಂಧನವಾಸ.
"ಜ್ಞಾನದ ಬಗದಷ್ಟು ಹಿಂಡಿತು ಹಿಂಡಲಗಿ,
ಮುಗದದ ಮಳೆಗಾಗಿ ಮುಂದೆಳೆದಿತು."

೧೯೩೨ : "ಗರಿ" ಮೊದಲನೆಯ ಆವೃತ್ತಿಯು ಹೊರ ಬಂದದ್ದು.

೧೫-೮-೧೯೩೩ : 'ಜಯ ಕರ್ನಾಟಕ' ಸಂಬಂಧ ಮುಕ್ತಾಯ.
ಗೆಳೆಯರ ಗುಂಪಿನ ಸ್ಫೋಟ, ವಿಘಟನೆ

೧೯೩೩ ಎಂ. ಎ. ಅಭ್ಯಾಸಕ್ಕಾಗಿ ಪುಣೆಗೆ ಪ್ರಯಾಣ.
'ಪುಣೆಯಲಿ ಕಳೆದಂಥ ಅಜ್ಞಾತವಾಸದ ದಿನದಿನದ ಮೈಯಿಲ್ಲ ಜುಮ್ಮೆನ್ನುತ್ತ'

೧೯೩೪	:	''ಮೂರ್ತಿ'' ಮೊದಲನೆಯ ಆವೃತ್ತಿ ಪ್ರಕಟವಾದದ್ದು.
೧೯೩೪	:	''ಕಾಮಕಸ್ತೂರಿ'' ಮೊದಲನೆಯ ಆವೃತ್ತಿ ಪ್ರಕಟವಾದದ್ದು.
೧೯೩೫	:	ಎಂ. ಎ. ಪದವಿ ಪಡೆದದ್ದು, ಮುಂಬೈಯಲ್ಲಿ ಸಾಹಿತ್ಯ ಸಮ್ಮೇಳನದ ಕವಿ ಸಮ್ಮೇಳನಕ್ಕೆ ಅಧ್ಯಕ್ಷ.
೧೯೩೫-೪೦	:	ಡಾ॥ ಮಾಸ್ತಿಯವರ ಸಹಾಯ ಹಸ್ತ ಲಭಿಸಿದ್ದು. ''ದೈವದ ಕೃಪೆಯೆಂದು ಅದ ತಿಳಿದೆನು.''
೧೯೩೬	:	ವಿಜಯನಗರ ಷಟ್ ಶತಸಾಂವತ್ಸರಿಕ ಉತ್ಸವದ ಕೆಲಸಕ್ಕಾಗಿ ಹೈದರಾಬಾದ ಪ್ರವಾಸ.
೧೯೩೭	:	'ಸಖೀಗೀತ'ದ ಮೊದಲನೆಯ ಆವೃತಿ ಪ್ರಕಟಗೊಂಡದ್ದು.
೧೯೩೮	:	ನಾದಲೀಲೆ, ಉಯ್ಯಾಲೆ, ಪ್ರಕಟಗೊಂಡದ್ದು, ''ಜೀವನ'' ಪತ್ರಿಕೆಯ ಸಂಪಾದಕ ಆದದ್ದು.
೧೯೩೯	:	''ನಿರಾಭರಣ ಸುಂದರಿ,'' ಹಾಗೂ ''ಸಾಹಿತ್ಯ ಮತ್ತು ಸಂಶೋಧನೆ,'' ಕೃತಿಗಳು ಪ್ರಕಟಗೊಂಡದ್ದು.
೧೯೪೦	:	ಧಾರವಾಡದಲ್ಲಿ ಸಾಹಿತ್ಯ ಸಮ್ಮೇಳನ.
೧೯೪೧	:	ಗದಗ-ವಿದ್ಯಾದಾನ ಸಮಿತಿ ಹೈಸ್ಕೂಲಿಗೆ-ಹೆಡ್ ಮಾಸ್ತರ ಆಗಿ ಹೋದದ್ದು.
೧೯೪೨	:	ಹುಬ್ಬಳ್ಳಿಯ ನ್ಯೂ ಇಂಗ್ಲೀಷ್ ಸ್ಕೂಲಿಗೆ ಶಿಕ್ಷಕ.
೧೯೪೩	:	ಫೆಬ್ರುವರಿಯಲ್ಲಿ ಪಾಂಡಿಚೇರಿ- ಶ್ರೀಮಾತಾರವಿಂದರ ದರ್ಶನ. - ಪೂನಾ ಬಿ. ಎಂ. ಸಿ. ಸಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ, ''ಮೇಘದೂತ'' ಪ್ರಕಟಗೊಂಡದ್ದು.
೧೯೪೪	:	ಸೊಲ್ಲಾಪುರದ ಡಿ. ಎ. ವ್ಹಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ಆದದ್ದು.
೧೯೪೪	:	ರಾಮ ಹಾಗೂ ಆನಂದ ತೀರಿಕೊಂಡದ್ದು ಸೊಲ್ಲಾಪುರದಲ್ಲಿ.
೧೯೪೫	:	ಸೊಲ್ಲಾಪುರ ನೀಲಾನಗರದಲ್ಲಿ ವಾಸ ಪ್ರಾರಂಭ.
೧೯೪೬	:	ಗೆಳೆಯರಿಂದ ಸನ್ಮಾನ. ೫೦ನೆಯ ಹುಟ್ಟು ಹಬ್ಬ ''ಹಾಡು-ಪಾಡು'' ಪ್ರಕಟಗೊಂಡದ್ದು.
೧೯೪೭	:	ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ್ದು.
೧೯೪೮	:	ಗಾಂಧೀ ಮರಣ, ಜೆ.ಕೃಷ್ಣಮೂರ್ತಿ ಮತ್ತು ಶ್ರೀ ಗುಳವಣಿ ಮಹಾರಾಜರ ದರ್ಶನ.
೧೯೫೦	:	ಶ್ರೀಅರವಿಂದರ ನಿರ್ವಾಣ ; ಡಿಶೆಂಬರ-೫. ಹೆಂಡತಿಗೆ ವಿಷಮ ಜ್ವರ.
೧೯೫೧	:	''ಗಂಗಾವತರಣ'' ಪ್ರಕಟಗೊಂಡದ್ದು. ಸಂಖ್ಯಾಯೋಗ ವಿಚಾರ. ಮರಾಠಿಯಲ್ಲಿ ವಿಪುಲವಾಗಿ ಬರವಣಿಗೆ.
೧೯೫೨	:	ಪ್ರಭಾಕರ ಮಹಾರಾಜರ ದರ್ಶನ.
೧೯೫೩	:	ಗೆಳೆಯ ಚೆನ್ನಮಲ್ಲಪ್ಪ- ಮಧುರಚೆನ್ನ-೧೫ ಆಗಸ್ಟರಂದು ಮರಣ.
೧೯೫೪	:	ಶ್ರೀರಾಮದಾಸರ ದರ್ಶನ.
೧೯೫೫	:	ದಿಲ್ಲಿಗೆ ಕವಿ ಸಮ್ಮೇಳನಕ್ಕಾಗಿ ಹೋದದ್ದು.

೧೯೫೬ : ೬೦ನೇ ಹುಟ್ಟುಹಬ್ಬ. ಧಾರವಾಡ ಆಕಾಶವಾಣಿ ಸಾಹಿತ್ಯ ಸಲಹಾಕಾರ,
ಮಗ-ಪಾಂಡುರಂಗನ ವಿವಾಹ,
ಡಾ॥ ಕುವೆಂಪು ಅವರಿಗೆ ಸಾಹಿತ್ಯ ಅಕಾಡೆಮಿ ಬಹುಮಾನ.

೧೯೫೭ : ''ಅರಳು-ಮರಳು'' ಪ್ರಕಟಗೊಂಡದ್ದು
ಡಾ॥ ರಂ. ಶ್ರೀಮುಗಳಿ ಯವರಿಗೆ ಸಾಹಿತ್ಯ ಅಕಾಡೆಮಿ ಬಹುಮಾನ.

೧೯೫೮ : ಸಾಹಿತ್ಯ ಅಕಾಡೆಮಿ ಬಹುಮಾನ ಯಾರಿಗೂ ಸಿಗಲಿಲ್ಲ.

೧೯೫೮-೫೯ : ''ಅರಳು-ಮರಳು'' ಸಂಗ್ರಹಕ್ಕೆ ಸಾಹಿತ್ಯ ಅಕಾಡೆಮಿ ಬಹುಮಾನ,
ಧರ್ಮಸ್ಥಳಕ್ಕೆ ಹೋದದ್ದು. 'ನಮನ', 'ಸಂಚಯ' ಪ್ರಕಟಗೊಂಡದ್ದು.

೧೯೬೦ : ಡಾ॥ ಕಾರಂತರಿಗೆ ಬಹುಮಾನ.

೧೯೬೧ : ಡಾ॥ ಗೋಕಾಕರಿಗೆ ಬಹುಮಾನ.

(ಇಲ್ಲಿಯವರೆಗಿನ ಜೀವನ ಘಟನಾವಳಿಗಳನ್ನು ದ.ರಾ.ಬೇಂದ್ರೆಯವರು ತಮ್ಮ ಆತ್ಮಚರಿತ್ರೆಗೆ ಅನುಬಂಧವಾಗಿ ಪ್ರಕಟಿಸಿದ್ದು ''ನಡೆದು ಬಂದ ದಾರಿ'' ಸಂ.೩ರಲ್ಲಿ. ಇದಕ್ಕೆ ಐತಿಹಾಸಿಕ ಮಹತ್ವವಿದೆ. ತಮ್ಮ ಸ್ನೇಹಿತರಿಗೆ ಸಿಕ್ಕ ಬಹುಮಾನ ಅಥವಾ ಅವರ ಜೀವನ ಘಟನೆಗಳು ತಮ್ಮ ಜೀವನದ ಪ್ರಮುಖ ಘಟನೆ ಎಂಬುದಾಗಿ ಬೇಂದ್ರೆ ಭಾವಿಸಿದ್ದು ಅನುಕರಣೀಯ. ಸಾಹಿತಿ-ಸಾಹಿತಿ-ಸ್ನೇಹ ಸಂಬಂಧವೇ ಸಂಸ್ಕೃತಿ.)

೧೯೬೨ : ತುಮಕೂರಿನ ಪೌರಸಭೆಯ ಸನ್ಮಾನ.

೧೯೬೪ : ಮೈಸೂರು ದಸರಾ ಮಹೋತ್ಸವ ಸನ್ಮಾನ.

೧೯೬೫ : ಮರಾಠಿ ''ಸಂವಾದ'' ಕೃತಿಗೆ ಕೇಳಕರ ಪ್ರಶಸ್ತಿ.

೧೯೬೬ : ಮೈಸೂರು ವಿಶ್ವವಿದ್ಯಾಲಯದಿಂದ ''ಗೌರವ ಡಾಕ್ಟರೇಟ್,''
ಹೈದ್ರಾಬಾದಿನ ಹಿಂದೀ ಪ್ರಚಾರ ಸಭಾದ 'ಸಾಹಿತ್ಯ ಆಚಾರ್ಯ' ಪ್ರಶಸ್ತಿ
ಶಿರಹಟ್ಟಿಯಲ್ಲಿ ೭೦ನೇ ಹುಟ್ಟುಹಬ್ಬ
ಮೈಸೂರು ಸರ್ಕಾರದ (ಕರ್ನಾಟಕ) ಆಜನ್ಮ ವಿಶ್ರಾಂತಿ ವೇತನ.
ಪತ್ನಿ ಶ್ರೀಮತಿ ಲಕ್ಷ್ಮೀಬಾಯಿಯವರ ನಿಧನ: ೧೭-೮-೧೯೬೬.

೧೯೬೮ : ದಿಲ್ಲಿಯಿಂದ 'ಪದ್ಮಶ್ರೀ' ಪ್ರಶಸ್ತಿ.
ಕರ್ನಾಟಕ ವಿಶ್ವವಿದ್ಯಾಲಯದಿಂದ ''ಗೌರವ ಡಾಕ್ಟರೇಟ್.''

೧೯೬೯ : ಕೇಂದ್ರ ಸಾಹಿತ್ಯ ಅಕಾಡೆಮಿಯ 'ಫೆಲೊಶಿಪ್' ಗೌರವ-ದಿಲ್ಲಿ.

೧೯೭೨ : ಪರ್ಯಾಯದಲ್ಲಿ ಉಡುಪಿ ಮಠದ ವತಿಯಿಂದ
'ಕರ್ನಾಟಕ ಕವಿ ಕುಲ ತಿಲಕ' ಬಿರುದು. ೭೫ನೇ ಹುಟ್ಟು ಹಬ್ಬದ
ಸವಿನೆನಪಿಗಾಗಿ ವರಕವಿ ಬೇಂದ್ರೆಯವರನ್ನು ಕುರಿತು ರಾಜ್ಯ ಸರ್ಕಾರದ
ಸಾಕ್ಷಿ ಚಿತ್ರ ನಿರ್ಮಾಣ.

೧೯೭೩-೭೪ : 'ನಾಕುತಂತಿ' ಕವನ ಸಂಗ್ರಹಕ್ಕೆ ಜ್ಞಾನಪೀಠ ಪ್ರಶಸ್ತಿ ಪ್ರದಾನ.

೧೯೭೬ : ವಾರಣಾಶಿ ಕಾಶೀ ವಿದ್ಯಾಪೀಠದಿಂದ ''ಗೌರವ ಡಾಕ್ಟರೇಟ್''

೨೬-೧೦-೮೧ : ನಿರ್ವಾಣ - ಮುಂಬೈಯ ಹರಿಕಿಸನ್‌ದಾಸ ಆಸ್ಪತ್ರೆಯಲ್ಲಿ.
''ನಾವು ಬರತೇವಿನ್ನ ನೆನಪಿರಲಿ ತಾಯಿ, ನಂ ನಮಸ್ಕಾರ ನಿಮಗ''



ಡಾ.ದ.ರಾ.ಬೇಂದ್ರೆಯವರ ಸಾಹಿತ್ಯ ಕೊಡುಗೆ

ಕವನ ಸಂಗ್ರಹಗಳು-'ಅರಳು ಮರಳು' ಪೂರ್ವದಲ್ಲಿ - ೧೦

೧. ಕೃಷ್ಣಕುಮಾರಿ
೨. ಗರಿ
೩. ಸಖೀಗೀತ
೪. ಮೂರ್ತಿ
೫. ಕಾಮಕಸ್ತೂರಿ
೬. ಉಯ್ಯಾಲೆ
೭. ನಾದಲೀಲೆ
೮. ಕನ್ನಡ ಮೇಘದೂತ
೯. ಹಾಡು-ಪಾಡು
೧೦. ಗಂಗಾವತರಣ

ಕವನ ಸಂಗ್ರಹಗಳು-'ಅರಳು ಮರಳು' ಅನಂತರದಲ್ಲಿ - ೧೭

೧೧. ಸೂರ್ಯಪಾನ
೧೨. ಹೃದಯ ಸಮುದ್ರ
೧೩. ಮುಕ್ತಕಂಠ
೧೪. ಚೈತ್ಯಾಲಯ
೧೫. ಜೀವಲಹರಿ
೧೬. ಅರಳು ಮರಳು*
೧೭. ನಮನ
೧೮. ಸಂಚಯ
೧೯. ಉತ್ತರಾಯಣ
೨೦. ಮುಗಿಲ ಮಲ್ಲಿಗೆ
೨೧. ಯಕ್ಷಯಕ್ಷಿ
೨೨. ನಾಕುತಂತಿ**
೨೩. ಮರ್ಯಾದೆ
೨೪. ಶ್ರೀಮಾತಾ
೨೫. ಇದು ನಭೋವಾಣಿ
೨೬. ಮತ್ತೆ ಶ್ರಾವಣಾ ಬಂತು
೨೭. ಚತುರೋಕ್ತಿ ಮತ್ತು ಇತರ ಕವನಗಳು.

*ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, **ಜ್ಞಾನಪೀಠ ಪ್ರಶಸ್ತಿ

ಮರಣೋತ್ತರ ಕವನ ಸಂಕಲನಗಳು - ೬

೨೮. ಪರಾಕಿ
೨೯. ಕಾವ್ಯವೈಖರಿ
೩೦. ತಾ ಲೆಕ್ಕಣಿಕಿ ತಾ ದೌತಿ
೩೧. ಬಾಲಬೋಧೆ
೩೨. ಪ್ರತಿಬಿಂಬಗಳು
೩೩. ಶತಮಾನ

ಆಯ್ದ ಕವನ ಸಂಕಲನಗಳು - ೯

೩೪. ಬಾ ಹತ್ತರ
೩೫. ವಿನಯ
೩೬. ಒಲವೆ ನಮ್ಮ ಬದುಕು
೩೭. ಚೈತನ್ಯದ ಪೂಜೆ
೩೮. ಶ್ರಾವಣ ಪ್ರತಿಭೆ
೩೯. ಕುಣಿಯೋಣು ಬಾ
೪೦. ಸಮರಸವೇ ಜೀವನ
೪೧. ಸಾಳಿಸಾ ಕನಸು
೪೨. ನೂರು ಮರ ನೂರು ಸ್ವರ ಒಂದೊಂದು ಅತಿ ಮಧುರ.

ದ. ರಾ. ಬೇಂದ್ರೆ ಜೀವನ ಮಹಾಕಾವ್ಯ : ಅಂಬಿಕಾತನಯದತ್ತರ ಸಮಗ್ರ ಕಾವ್ಯ : ''ಬಿದಂಬರಗಾಥೆ''

(ವರಕವಿ ಡಾ॥ದ.ರಾ.ಬೇಂದ್ರೆ ಸಂಶೋಧನ ಸಂಸ್ಥೆಯು ಪ್ರಕಟಣೆಗಳು ೮ ಸಂಪುಟಗಳು)

೪೩. ನಮನ ಸಂಪುಟ
೪೪. ದರ್ಶನ ಸಂಪುಟ
೪೫. ವಿಕಾಸ ಸಂಪುಟ
೪೬. ವಿನ್ಯಾಸ ಸಂಪುಟ
೪೭. ತತ್ತ್ವ ಸಂಪುಟ
೪೮. ಸಿದ್ಧಾಂತ ಸಂಪುಟ
೪೯. ಶ್ರೀಮಾತಾರವಿಂದ ಪ್ರಜ್ಞಾಪ್ರಕಾಶ
೫೦. ಸಮಗ್ರ ಸಖೀಗೀತ

ವರಕವಿ ದ. ರಾ. ಬೇಂದ್ರೆ ಸಂಗೀತ ಅಕಾಡಮಿ ಪ್ರಕಟಣೆಗಳು-೧೦

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಸಂಯೋಜನೆಗಳೊಂದಿಗೆ ಬೇಂದ್ರೆ ಗೇಯ ಗೀತಗಳ ಸಂಗ್ರಹಗಳು.

೫೧. ಅಂಬಿಕಾತನಯನ ಹಾಡಽ ಬೆಳದಿಂಗಳ ನೋಡಽ
೫೨. ನೋಡ್ಯಾನಽ ದಶಾವತಾರ ಅಂಬಿಕಾತನಯ ಹಾಡ್ಯಾನಽ
೫೩. ಅಂಬಿಕಾತನಯದತ್ತ ಬೇಂದ್ರೆ ಕಂಡ ಬೆಸಕ
೫೪. ಅಂಬಿಕಾತನಯದತ್ತ ಬೇಂದ್ರೆ ಕಂಡ ಶ್ರಾವಣ
೫೫. ಅಂಬಿಕಾತನಯದತ್ತ ಬೇಂದ್ರೆ ಕಂಡ ಋತು ದರ್ಶನ
೫೬. ಅಂಬಿಕಾತನಯದತ್ತ ಬೇಂದ್ರೆ ಕಂಡ ಶ್ರೀಮಾತಾರವಿಂದರು
೫೭. ಅಂಬಿಕಾತನಯದತ್ತ ಬೇಂದ್ರೆ ಕಂಡ ನಾಳಿನಾ ನಾಳಿನಾ ಕನಸು
೫೮. ಅಂಬಿಕಾತನಯದತ್ತ ಬೇಂದ್ರೆ ಕಂಡ ಭಾವ ರಾಗ ಮಂಜರಿ
೫೯. ಅಂಬಿಕಾತನಯದತ್ತ ಬೇಂದ್ರೆ ಕಂಡ ನಾದ ನವನೀತ
೬೦. ಬೇಂದ್ರೆ ಸಂಗೀತ-ಸಿದ್ಧಾಂತ ಪ್ರಯೋಗ.

ನಾಟಕಗಳು - ೧೪

೬೧. ದೆವ್ವನ ಮನೆ
೬೨. ಹಳೆಯ ಗೆಳೆಯರು
೬೩. ಸಾಯೋ ಆಟ
೬೪. ತಿರುಕರ ಪಿಡುಗು
೬೫. ಗೋಲ್
೬೬. ಉದ್ಧಾರ
೬೭. ನಗೆಯ ಹೊಗೆ
೬೮. ಮಂದೀ ಮದಿವಿ
೬೯. ಮಂದೀ ಮಕ್ಕಳು
೭೦. ಮಂದೀ ಮನಿ
೭೧. ಆ ಥರಾ ಈ ಥರಾ
೭೨. ಶೋಭನಾ
೭೩. ಜಾತ್ರೆ
೭೪. ಮಕ್ಕಳು ಅಡಗಿ ಮನೆ ಹೊಕ್ಕರೆ

ಬೇಂದ್ರೆ ಮಾನಸ ನಾಟಕಗಳು - ೨

೭೫. ಮಿಸ್ ಫಾರ್ಚ್ಯೂನ್ - ಪ್ರೊ॥ ಕೆ. ಎಸ್. ಶರ್ಮಾ ವಿರಚಿತ
೭೬. ಕರಿ ಹೆಂಡತಿ ಆದರ ಖರೆ ಹೆಂಡತಿ - ಪ್ರೊ॥ ಎಸ್. ಕೆ. ಕುಲಕರ್ಣಿ ವಿರಚಿತ

ಹರಟೆ, ನಗೆ, ಕಥೆ - ೨

೭೭. ನಿರಾಭರಣ ಸುಂದರಿ
೭೮. ಚೀನದ ಬಾಳು ಬದುಕು (ಅನುವಾದಿತ ಕಥಾ ಸಂಕಲನ)

ವಿಮರ್ಶೆ - ೧೧

೭೯. ಸಾಹಿತ್ಯ ಮತ್ತು ವಿಮರ್ಶೆ
೮೦. ಸಾಹಿತ್ಯ ಸಂಶೋಧನೆ
೮೧. ವಿಚಾರ ಮಂಜರಿ
೮೨. ಕವಿ ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಮುನ್ನುಡಿ
೮೩. ಮಹಾರಾಷ್ಟ್ರ ಸಾಹಿತ್ಯ
೮೪. ಕಾವ್ಯೋದ್ಯೋಗ
೮೫. ಕುಮಾರವ್ಯಾಸ (ಪುಸ್ತಿಕೆ)
೮೬. ಸಾಹಿತ್ಯದ ವಿರಾಟ್ ಸ್ವರೂಪ,
೮೭. ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು
೮೮. ಸಾಹಿತ್ಯ ಯೋಗ (ಆಯ್ದ ವಿಮರ್ಶ ಲೇಖನ ಸಂಗ್ರಹ)
೮೯. ಶ್ರೀ ಅರವಿಂದ ಯೋಗ, ಆಶ್ರಮ ಮತ್ತು ತತ್ತ್ವೋಪದೇಶ.
(ಶ್ರೀ ಅರವಿಂದರನ್ನು ಕುರಿತು ಪರಿಚಯ ಪುಸ್ತಿಕೆ)

ಸಂಪಾದನೆ - ೬

೯೦. ನನ್ನದು ಈ ಕನ್ನಡ ನಾಡು
೯೧. ಹಕ್ಕಿ ಹಾರುತಿದೆ
೯೨. ಹೊಸಗನ್ನಡ ಕಾವ್ಯಶ್ರೀ
೯೩. ರವೀಂದ್ರ ಪ್ರಶಸ್ತಿ
೯೪. ಕನಕದಾಸ ಚತುರ್ಶತಮಾನೋತ್ಸವ ಸಂಸ್ಮರಣ ಸಂಪುಟ
೯೫. ಚಂದ್ರಹಾಸ

ಸಂಪಾದಿತ ಪತ್ರಿಕೆಗಳು - ೪

೯೬. ವಾಗ್ಭೂಷಣ
೯೭. ಸ್ವಧರ್ಮ
೯೮. ಜಯ ಕರ್ನಾಟಕ
೯೯. ಜೀವನ

ಅನುವಾದ ಕನ್ನಡಕ್ಕೆ - ೬

೧೦೦. ಉಪನಿಷತ್ ರಹಸ್ಯ ಅಥವಾ ಭಾರತೀಯ ಅಧ್ಯಾತ್ಮ ಶಾಸ್ತ್ರ
ಜೊತೆಗೆ - ರಂ. ರಾ. ದಿವಾಕರ ಹಾಗೂ ಶಂ. ಬಾ. ಜೋಶಿ
೧೦೧. ಭಾರತೀಯ ನವಜನ್ಮ
೧೦೨. ಗುರು ಗೋವಿಂದಸಿಂಗ
೧೦೩. ಕಬೀರ ವಚನಾವಲಿ
೧೦೪. ಭಗ್ನ ಮೂರ್ತಿ
೧೦೫. ನೂರೊಂದು ಕವನಗಳು

ಮರಾಠಿಯಲ್ಲಿ - ೬

೧೦೬. ಸಂವಾದ
೧೦೭. ವಿಠಲ ಸಂಪ್ರದಾಯ
೧೦೮. [illegible] (ಕಾದಂಬರಿ)
೧೦೯. ಸಂತ ಮಹಂತ ಪೂರ್ಣಬೋಧ ವಿಠಲ (ಪ್ರಬಂಧ)
೧೧೦. ವಿಠ್ಠಲ ಪಾಂಡುರಂಗ (ಕವನ ಸಂಗ್ರಹ)
೧೧೧. ಉಮಾಳ (೧೦೧ ಮರಾಠಿ ಕವನಗಳ ಸಂಗ್ರಹ)

ಇತರ - ೨

೧೧೨. ಮಾತೆಲ್ಲ ಜ್ಯೋತಿ (ಭಾಷಣ ಸಂಗ್ರಹ)

೧೧೩. ಮತ-ಧರ್ಮ ಮತ್ತು ಆಧುನಿಕ ಮಾನವ (ಭಾಷಣಗಳ ಸಂಗ್ರಹ).

ಇಂಗ್ಲಿಷ ಕೃತಿಗಳು - ೨

114. A Theory of Immortality
115. Language-Mathematics & Truth.

ಬೇಂದ್ರೆ ಕವನಗಳು ವಿವಿಧ ಭಾಷೆಗಳಲ್ಲಿ ಅನುವಾದ - ೮

116. Dr. D. R. Bendre - Four Strings - ಇಂಗ್ಲಿಷ ಭಾಷೆಯಲ್ಲಿ
117. ಚತುರ್ಮುಖ ಸೌಂದರ್ಯ, ಲೀಲೆ, ಕೀರ್ತಿ - ಜರ್ಮನ್ ಭಾಷೆಯಲ್ಲಿ
118. ಚಾರ್ ತಾರ್ - 'ನಾಕು ತಂತಿ'ಯ ಹಿಂದೀ ಅನುವಾದ
119. ಚಾರ ತಂತು - 'ನಾಕು ತಂತಿ'ಯ ಮರಾಠಿ ಅನುವಾದ
120. Spring Fire
121. Dreaming Tomorrow
122. Three one Act Plays
123. Sakheegeet

(120–123:) Dr. K. Raghavendra Rao, Dr. Vaman Bendre, Dr. K. S. Sharma

---

: ಪುಸ್ತಕಗಳು ದೊರೆಯುವ ಸ್ಥಳ :

“ಶ್ರೀಮಾತಾ ಪ್ರಕಾಶನ”, “ವಿಶ್ವ್ರಮ ಚೇತನ”, ಗೋಕುಲ ರಸ್ತೆ,
ಬಸವೇಶ್ವರ ನಗರ, ಹುಬ್ಬಳ್ಳಿ.

ರವೀಂದ್ರ ಪುಸ್ತಕಾಲಯ,
ಚಾಮರಾಜಪೇಟೆ, ಸಾಗರ - 577 401,
ಶಿವಮೊಗ್ಗ ಜಿಲ್ಲೆ
ದೂರವಾಣಿ : 08183-228616 (ಕ).



ಸೂರ್ಯಪಾನ

ಸೂರ್ಯ ಬೆಳಕಿನ - ಜ್ಞಾನದ ಸಂಕೇತ. ಇದರ ಪಾನ ಮಾನವರ

ಸರ್ವೋತ್ತಮಿಕೆಗೆ ಮಾರ್ಗ."ಸೂರ್ಯಪಾನ" ಇದರ ಸಂಕೇತ.

ಜ್ಞಾನ, ಅಜ್ಞಾನ, ಪ್ರಜ್ಞಾನ, ವಿಜ್ಞಾನ, ಸಂಜ್ಞಾನ, ಅಭಿಜ್ಞಾನ ಮತ್ತು ಉತ್‌ಜ್ಞಾನ

ಎಂದು ಏಳು ನೆಲೆಗಳಿವೆ. ಜ್ಞಾನ ಮತ್ತು ಅಜ್ಞಾನ ಸಾಮಾನ್ಯ ನಿಲುವು;

ವಿಜ್ಞಾನವು ವಿಶೇಷ ಜ್ಞಾನ, ಅಸಾಮಾನ್ಯರ ನಿಲುವು.

ಪ್ರಜ್ಞಾನ ಮತ್ತು ಸಂಜ್ಞಾನ-ಆಧ್ಯಾತ್ಮಿಕ ಜೀವನದ ನಿಲುವು.

ಅಭಿಜ್ಞಾನ-ಮಹಾಕವಿ ಕಾಳಿದಾಸನ ಕಾಣ್ಕೆ-ದರ್ಶನ.

ಉತ್‌ಜ್ಞಾನ-ಇದು ಅಂಬಿಕಾತನಯದತ್ತರ ಸಾಧನೆ.

ಉತ್‌ಜ್ಞಾನದ ನಿಲುವನ್ನು ತಲುಪುವ ಕನಸು ಕಾಣುವ

ಹೃದಯದ ಆಕೂತಿ(ಒಲವು) ಬೆಳೆಸಿಕೊಳ್ಳಬೇಕೆಂಬುದು

"ಸೂರ್ಯಪಾನ" ಕವನ ಸಂಕಲನದ ಜೀವಾಳ.

- ಸಂಪಾದಕರು

ಡಾ|| ದ.ರಾ.ಬೇಂದ್ರೆ ಸಂಶೋಧನ ಸಂಸ್ಥೆ,
ಹುಬ್ಬಳ್ಳಿ

ಬೆಲೆ : ರೂ. 80-00